ಪ್ರಬುದ್ಧ ಕರ್ಣಾಟಕ

ಸಂಪುಟ ೯೭ ಸಂಚಿಕೆ ೩೫೪

೨೦೧೫

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ಣಾಟಕ

ಸಂಪುಟ ೯೨

ಸಂಚಿಕೆ ೩೫೪

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೨೦೧೫

Prabuddha Karnataka : A Kannada Quarterly of the University of Mysore, Volume 92, Nos. 354; Edited by Prof. K.N. Ganga Naik Published by the Director, Prasaranga, Manasagangotri, University of Mysore, MYSORE - 570 006; Pages : viii+68=76

ಜಾಲತಾಣ: http://www.uni-mysore.ac.in/publications

ಪ್ರಧಾನ ಸಂಪಾದಕರು

ಪ್ರೊ. ಸಿ. ನಾಗಣ್ಣ

ಸಂಪಾದಕರು

ಪ್ರೊ. ಕೆ.ಎನ್. ಗಂಗಾನಾಯಕ್

ಪ್ರಕಾಶಕರು

ಪ್ರೊ. ಸಿ. ನಾಗಣ್ಣ
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು – ೫೭೦ ೦೦೬

ಮುದ್ರಕರು

ಶ್ರೀ ಎಸ್. ಆನಂದ
ನಿರ್ದೇಶಕರು
ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ, ಮೈಸೂರು – ೫೭೦ ೦೦೬

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ– ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕಕ್ಕೆ** ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಪ್ರಕಾಶಕರ ನುಡಿ

ಪ್ರಬುದ್ಧ ಕರ್ಣಾಟಕ ನಡೆದು ಬಂದ ದಾರಿಯನ್ನು ನೆನೆದರೆ ಅಭಿಮಾನದ ಜೊತೆಗೆ ದಿಗಿಲೂ ಉಂಟಾಗುತ್ತದೆ. ದಿಗಿಲೇಕೆಂದರೆ ನಮ್ಮ ಹಿರೀಕರು ಈ ಸಾಹಿತ್ಯ ಪತ್ರಿಕೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಒಂದು ಗರಿಷ್ಠ ಜಲಚಿಹ್ನೆಯನ್ನು ನಿರ್ಮಿಸಿಬಿಟ್ಟಿದ್ದಾರೆ. ಕಾಲ ಕಳೆದಂತೆ ಸ್ವಲ್ಪ ಸ್ವಲ್ಪವೇ ರಿಯಾಯ್ತಿ ಕೊಟ್ಟುಕೊಂಡು ಇಲ್ಲಿಗೆ ತಲುಪಿದ್ದೇವೆ. ಹೊಸ ಹೊಸ ಜ್ಞಾನಕ್ಷೇತ್ರಗಳು ಅನಾವರಣವಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಹೊಸ ತಲೆಮಾರಿನ ವಿದ್ವಾಂಸರು ಆ ಎಲ್ಲೆಗಳನ್ನು ಎಟುಕಿಸಿಕೊಳ್ಳಲು ತವಕಿಸುತ್ತಿದ್ದಾರೆ. ಹೊಸದರ ಅನ್ವೇಷಣೆಯ ಭರಾಟೆಯಲ್ಲಿ ಪಾರಂಪರಿಕವಾದ ಶಿಸ್ತು ಕೈಬಿಟ್ಟುಹೋಗಬಾರದು ಎಂಬ ಕಾಳಜಿಯೂ ನಮಗಿದೆ. ಈ ದೃಷ್ಟಿಯಿಂದ ಸಂಪಾದಕರಾದ ಪ್ರೊ. ಕೆ.ಎನ್. ಗಂಗಾನಾಯಕ್ ಅವರು ತುಂಬ ಸಂಯಮದಿಂದಲೇ *ಪ್ರಬುದ್ಧ ಕರ್ಣಾಟಕ*ದ ಈ ಸಂಚಿಕೆಯನ್ನು ಸಿದ್ಧಗೊಳಿಸಿದ್ದಾರೆ.

ಸನ್ಮಾನ್ಯ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ನಮಗೆ ಅನವರತ ನೀಡುತ್ತಿರುವ ಪ್ರೋತ್ಸಾಹಕ್ಕಾಗಿ ಅವರಿಗೆ ಆಭಾರಿಯಾಗಿದ್ದೇನೆ. ಮಾನ್ಯ ಕುಲಸಚಿವರಾದ ಪ್ರೊ. ಸಿ. ಬಸವರಾಜು ಅವರಿಗೆ ವಂದನೆಗಳು.

ಈ ಗ್ರಂಥ ನಿರ್ಮಾಣದಲ್ಲಿ ಬೇರೆ ಬೇರೆ ಭೂಮಿಕೆಯ ನನ್ನ ಸಹೋದ್ಯೋಗಿಗಳಾದ ಶ್ರೀಮತಿ ಜಿ.ಬಿ. ಮಂಜುಳ, ಶ್ರೀಮತಿ ವಿ. ಮೀನಾವತಿ ಹಾಗೂ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಎಸ್. ಆನಂದ ಅವರಿಗೆ ಹಾಗೂ ಎಲ್ಲ ಸಿಬ್ಬಂದಿಗಳಿಗೂ ನನ್ನ ನೆನಕೆಗಳು.

ಪ್ರೊ. ಸಿ. ನಾಗಣ್ಣ
ನಿರ್ದೇಶಕ

ಸಂಪಾದಕರ ನುಡಿ

ಪ್ರಬುದ್ಧ ಕರ್ಣಾಟಕದ ೯೨ನೇ ಸಂಪುಟದ ೩೫೪ನೇ ಸಂಚಿಕೆಯನ್ನು ಓದುಗರ ಕೈಗೊಪ್ಪಿಸಲು ಸಂತೋಷವಾಗುತ್ತಿದೆ.

ಪ್ರಬುದ್ಧ ಕರ್ಣಾಟಕಕ್ಕೆ ಸ್ವತಂತ್ರವೂ, ಸಂಶೋಧನಾತ್ಮಕವೂ ಆದ ಸಾಹಿತ್ಯಕ್ಕೆ ಸಂಬಂಧಪಟ್ಟ ಲೇಖನಗಳನ್ನು ಮಾತ್ರ ಕಳುಹಿಸಬೇಕು. ಜೊತೆಗೆ ಲೇಖನಗಳು ಗುಣಮಟ್ಟದಿಂದ ಕೂಡಿದ್ದು, ಅಕ್ಷರದೋಷಗಳಿರಬಾರದು. ಇಂತಹ ಉತ್ತಮ ಮುದ್ರಿತ ಲೇಖನಗಳ ಜೊತೆಗೆ ಅದರ ಸಿ.ಡಿ.ಯನ್ನು ಕಡ್ಡಾಯವಾಗಿ ಸಲ್ಲಿಸಬೇಕಾಗುತ್ತದೆ. ಮುದ್ರಿತ ಲೇಖನದ ಜೊತೆಗೆ ಸಿ.ಡಿ. ಯನ್ನು ಸಲ್ಲಿಸದಿದ್ದಲ್ಲಿ ಲೇಖನವನ್ನು ಪ್ರಕಟಿಸುವುದಿಲ್ಲ. ಈ ಲೇಖನಗಳನ್ನು ಕಳುಹಿಸುವ ಲೇಖಕರು, ಲೇಖನದಲ್ಲಿನ ಉದ್ಧರಣಗಳಿಗೆ ಆಕರ ಸಂಖ್ಯೆಯನ್ನು ನೀಡಬೇಕೆಂದು ಕೋರುತ್ತೇನೆ. ಇಲ್ಲಿ ನಾವು ಬೇರೆ ಕಡೆ ಪ್ರಕಟವಾದ ಲೇಖನಗಳನ್ನು ಪ್ರಕಟಿಸುವುದಿಲ್ಲ. ಲೇಖನಗಳು ಕನಿಷ್ಟ ಪಕ್ಷ ಆರು ಫುಲ್‌ಸ್ಕೇಪ್ ಪುಟಗಳಷ್ಟು ಇರಲಿ.

ಲೇಖನಗಳನ್ನು ಈ ಕೆಳಕಂಡ ವಿಳಾಸಗಳಿಗೆ ಕಳುಹಿಸಬೇಕಾಗಿ ಕೋರುತ್ತೇನೆ.

ಪ್ರೊ. ಕೆ.ಎನ್. ಗಂಗಾನಾಯಕ್
ಸಂಪಾದಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

ಪ್ರೊ. ಸಿ. ನಾಗಣ್ಣ
ನಿರ್ದೇಶಕರು
ಪ್ರಸಾರಾಂಗ, ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

ಸಂಪಾದಕ

ಪ್ರೊ. ಕೆ.ಎನ್. ಗಂಗಾನಾಯಕ್

ಪರಿವಿಡಿ

ಈ ಸಂಚಿಕೆಯ ಲೇಖಕರು

೧. **ಪ್ರವೀಣ್ ಕುಮಾರ್ ಎಸ್**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೮೧೨೩೩೭೧೮೬೩

೨. **ಪ್ರಸನ್ನಕುಮಾರ್ ಎಂ.**
ಸುಮನ ನಿಲಯ
ನಿಲಸೋಗೆ ಗ್ರಾಮ ಮತ್ತು ಅಂಚೆ
ಟಿ. ನರಸೀಪುರ ತಾ॥
ಮೈಸೂರು – ೫೭೧ ೧೨೪
ಮೊಬೈಲ್ : ೮೦೯೫೪೩೯೬೧೫

೩. **ವರುಣ್ ಎಂ.**
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೮೮೮೪೨೪೧೪೧೪

೪. **ಮಹದೇವಸ್ವಾಮಿ ಹೆಗ್ಗೊಠಾರ**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಮೊಬೈಲ್ : ೯೪೪೯೭೭೭೭೦

೫. **ಡಾ. ಜಿ.ಎಸ್. ಅಶೋಕ**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಬಾಪೂಜಿ ನಗರ
ಶಿವಮೊಗ್ಗ – ೫೭೭೨೦೧
ಮೊಬೈಲ್ : ೯೪೪೯೪೨೬೮೨೧

೬. **ಡಾ. ಎಸ್.ಡಿ. ಶಶಿಕಲಾ**
ಸಹಾಯಕ ಪ್ರಾಧ್ಯಾಪಕಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು
ಅಲೆಯುಲಿ : ೯೮೪೫೬೧೨೨೮೬
ಮಿಂಚಂಚೆ : shashikalachokkadi2@gmail.com.

೧. ವಿ. ಸೀತಾರಾಮಯ್ಯ ಅವರ ಕಾವ್ಯದಲ್ಲಿ ಮಹಿಳಾ ದೃಷ್ಟಿಕೋನ

– ಪ್ರವೀಣ್ ಕುಮಾರ್ ಎಸ್.

ದೀಪಗಳು ವಿ.ಸೀ.ಯವರ ಎರಡನೆಯ ಕವನ ಸಂಗ್ರಹ. 'ಗೀತಗಳ'ನ್ನು ಪ್ರಕಟಿಸಿದ ಎರಡೇ ವರ್ಷ (೧೯೩೩)ಗಳಲ್ಲಿ ಅದನ್ನು ಅವರು ಬೆಳಗಿದರು. ಸಂಕಲನದಲ್ಲಿರುವುದು ಕೇವಲ ಹದಿನಾರೇ ಕವಿತೆಗಳಾದರೂ, ಆ ಎರಡು ವರ್ಷಗಳಲ್ಲಿ ವಿ.ಸೀ.ಯವರ ಕವಿತ್ವ ಹೆಚ್ಚು ಸುಪುಷ್ಟವೂ ಸಶಕ್ತವೂ ಆಗಿರುವುದನ್ನು ನಿದರ್ಶಿಸುವ ಬಹು ಸುಂದರ ರಚನೆಗಳು ಈ ಸಂಗ್ರಹದಲ್ಲಿದೆ. ವಿ.ಸೀ.ಯವರೇ ಸಂಗ್ರಹದ ಮುನ್ನುಡಿಯಲ್ಲಿ ಯಾವುದೋ ಆಸೆ, ಗುರಿ, ಉತ್ಸಾಹ, ನಂಬಿಕೆ, ಶ್ರದ್ಧೆ ಇವುಗಳನ್ನಿಟ್ಟುಕೊಂಡು ಈಗಿನ ಕವಿಗಳಲ್ಲಿ ಹಲವರು ತಾವು ಬಲ್ಲಂತೆ ಹಾಡಲು ತೊಡಗಿರುವುದನ್ನು ನೆನಪಿಸಿದ್ದಾರೆ. ಹಾಗೆ ಹಾಡುತ್ತಿದ್ದವರಲ್ಲಿ ತಾವೂ ಒಬ್ಬರೆಂಬುದನ್ನು ವಿ.ಸೀ. ಹೇಳದಿದ್ದರೂ ಸಂಗ್ರಹದ ಕವನಗಳು ಅದನ್ನು ಸೂಚಿಸಿ ಸಮರ್ಥಿಸುತ್ತವೆ. 'ಮೃಗಶಾಲೆಯ ಸಿಂಹಗಳು', 'ಅಭೀಃ', 'ವಿಶ್ವಾಸ' ಇವು ಹಲವರ ಮನಗೆದ್ದಿರುವ ಕವಿತೆಗಳಾದರೆ, 'ಹೂಕೊಳ್ಳಿ', 'ನಾಟ್ಯಾನುಕರಣ' ಮತ್ತು 'ಮನೆ ತುಂಬಿಸುವುದು' ಇವು ಮನೆ ಮಾತಾಗಿರುವ ಪದ್ಯಗಳು. 'ದೀಪಗಳು', 'ಪ್ರಾರ್ಥನೆ', 'ಶ್ಮಶಾನದಲ್ಲಿ', 'ಮಹಾತ್ಮ', 'ಹರಸು ತಾಯಿ' ಮೊದಲಾದವುಗಳ ಅಂದವೂ ಬಂಧವೂ ಬೇರೆ ಬೇರೆ ಬಗೆಯಾಗಿವೆ.

'ಮೃಗಶಾಲೆಯ ಸಿಂಹಗಳು' ಸರಳ ಭಾಷೆಯಲ್ಲಿ ತರಲ ಗತಿಯಲ್ಲಿರುವ ಒಂದು ಮಾರ್ಮಿಕ ಕವನ. ಅದೊಂದು 'ಅನ್ಯಾಪದೇಶ'ವೆನ್ನಲೂಬಹುದು. ಈ ದಿನಗಳಲ್ಲಿ ನಮ್ಮ ಸುತ್ತಲಿನ ಕಡಲು, ಬಯಲು, ಬೆಟ್ಟ, ಬಾನು ಅವುಗಳಲ್ಲಿರುವ ಜಲಚರ, ವನೇಚರ, ಗಿಡಮರ, ವಿಹಂಗಮ, ಮಳೆಗಾಳಿ, ಬಿಸಿಲು ಬೆಳದಿಂಗಳು ಎಲ್ಲವುಗಳ ಬಗೆಗೂ ಮನುಷ್ಯನ ಪ್ರಜ್ಞೆ ಜಾಗೃತವಾಗಿದೆ. ಸಮಷ್ಟಿ ಪರಿಸರ ಪ್ರಜ್ಞೆಯಾಗಿ

ಎದ್ದಿದೆ. ಆದರೆ ಇಂದಿಗೆ ಎಪ್ಪತ್ತು ವರ್ಷಗಳ ಹಿಂದೆಯೇ ವಿ.ಸೀ.ಯವರ ಮೃಗಶಾಲೆಯ ಸಿಂಹಗಳಂತಹ ಕವಿತೆಗಳನ್ನು ಬರೆದಿರುವುದು ಆಶ್ಚರ್ಯಕರವಾಗಿದೆ. ಏಕೆಂದರೆ ಮರಗಿಡಗಳನ್ನು ಕಡಿದು ಬಳಸುವುದು, ಮೃಗ ಪಕ್ಷಿಗಳನ್ನು ಕೊಂದು ತಿನ್ನುವುದು ಅಪರಾಧ, ಪಾಪ ಅಥವಾ ಪ್ರಾಕೃತಿಕ ಅಸಮತೋಲನಕ್ಕೆ ಕಾರಣ ಎಂಬ ಭಾವನೆ ಆ ಕಾಲದಲ್ಲಿ ಅಷ್ಟಾಗಿ ಇದ್ದಂತಿಲ್ಲ. ಉದ್ಯಾನವನ, ವಸ್ತುಸಂಗ್ರಹಾಲಯಗಳು ಮನುಷ್ಯನ ವಿಹಾರ ಅಥವಾ ಜ್ಞಾನವೃದ್ಧಿಗಾಗಿ ಇರುವುದಾದರೆ, ಮೃಗಾಲಯ ಇರುವುದು ಆತನ ರಂಜನೆಗೆ ಎಂಬುದೂ ಅಂದಿನ ಒಂದು ಸಾಮಾನ್ಯ ಅಭಿಪ್ರಾಯವಾಗಿತ್ತು. ಅಲ್ಲಿರುವ ಮೃಗ ಸಮೂಹ, ಪಕ್ಷಿ ಸಂಕುಲಗಳನ್ನು ನೋಡಿ ಸಂತೋಷಪಟ್ಟರಾಯಿತು. ಬಂಧನದಲ್ಲಿ ಅವುಗಳಿಗಾಗುವ ಹಿಂಸೆ, ಅವುಗಳ ಮೂಕವೇದನೆ, ಮುಕ್ತಿಗಾಗಿ ಅವು ಮಾಡುವ ವಿಫಲ ಪ್ರಯತ್ನಗಳು ವೀಕ್ಷಕನ ಮನಸ್ಸಿಗೆ ಬೋಧವೇ ಆಗುವುದಿಲ್ಲ. ಇಕೋ ಜಿಂಕೆ, ಅಕೋ ಸಿಂಹ, ಓ ಅಲ್ಲಿದೆ ನವಿಲು, ಇಲ್ಲಿದೆ ಸಿಂಗಳೀಕ ಎಂದು ತೃಪ್ತಿಪಟ್ಟರೆ ಮುಗಿಯಿತು. ಮೃಗಶಾಲೆಯನ್ನು ನೋಡುವ ವಿ.ಸೀ.ಯವರ ಒಳಗಣ್ಣಾಗಲೀ, ಮೃಗರಾಜ ಎನ್ನಿಸಿಕೊಂಡ ಸಿಂಹದ ಸಂಸಾರ ಪಂಜರದಲ್ಲಿ ಪಡುವ ಪಾಡನ್ನು ತನ್ನದನ್ನಾಗಿ ಮಾಡಿಕೊಂಡು ನೋಯುವುದಾಗಲೀ ಸಂವೇದನಶೀಲ ಕವಿಗೆ ಅಥವಾ ನಿಜವಾದ ಪರಿಸರ ಪ್ರೇಮಿಗೆ ಮಾತ್ರ ಸಾಧ್ಯವಾದದ್ದು. "ವಿ.ಸೀ.ಯವರು ಉನ್ನತ ಪದವಿಗೇರಲಿಲ್ಲ. ಬಾರೀ ಸಂಬಳವನ್ನು ಗಳಿಸಲಿಲ್ಲ. ಹೇಳಿಕೊಳ್ಳುವ ಯಾವ ಪ್ರಶಸ್ತಿಯೂ ಅವರಿಗೆ ದೊರಕಲಿಲ್ಲ"[೨] ಎಂಬ ಮಾತು ಸರಿಯಾದುದೇ.

ಇದೀಗ ಕವನ ಪಂಕ್ತಿಗಳಿಗೆ ಬರೋಣ :

ಹತ್ತಡಿಯ ಹದ್ದಿನಲಿ
ಸುತ್ತಲಿನ ಸೆರೆಯಲ್ಲಿ
ನರರ ಅಂಕೆಯೊಳಲ್ಲಿ
ಸಿಂಹ ಸಿಂಹಿಯರು
ಮೂರು ವರ್ಷಗಳಿಂದ
ವಾಸ ಗೈದಿಹರಿಂತೆ
ಹೆರರಿತ್ತುದನು ತಿಂದು
ಒಡಲ ಹೊರೆಯುತ್ತೆ.

(ದೀಪಗಳು, ಮೃಗಶಾಲೆಯ ಸಿಂಹಗಳು, ಪುಟ-೯೮)

ಹೀಗೆ ಹತ್ತಡಿಯ ಉದ್ದಗಲದ ಕಬ್ಬಿಣದ ಪಂಜರದ ಸೆರೆಯಲ್ಲಿ ದಿನಗಳೆಯುತ್ತಿರುವ ಸಿಂಹ-ಸಿಂಹಿಣಿ ಮತ್ತು ನಾಲ್ಕು ಸಿಂಹಗಳ ಪಾಡು ಇಲ್ಲಿ ಹಾಡಾಗಿ ಹರಿದಿದೆ; ಕಣ್ಣೀರಾಗಿ ಸುರಿದಿದೆ. ಮೃಗರಾಜ ಸಿಂಹ ಹುಲು ಮನುಷ್ಯನ

ಆಳಾಗಿ ಬಾಳುವ ಪರಿ, ಸಿಂಹಿಣಿಯೊಂದಿಗೆ ಅದು ತನ್ನ ಅಳಲನ್ನು ತೋಡಿಕೊಳ್ಳುವ ರೀತಿ ಅವೆರಡೂ ಮರಿಗಳನ್ನು ಕಂಡು ಕರಗುವ ಬಗೆ ಕರುಳನ್ನು ಮಿಡಿಯುವಂತೆ ಕವಿತೆಯಲ್ಲಿ ಚಿತ್ರಿತವಾಗಿದೆ. ತನ್ನ ಮಡದಿ ಮರಿಗಳನ್ನು

ನೆಲದಲ್ಲಿ ಮೈಚಾಚಿ
ನಿಡುಚಾಚಿ ಮೊಗವನ್ನು
ಕಳೆವೋದ ಕಣ್ಣಿಂದ
ರಾಯ ನೋಡುವನು.
ಸೆರೆಯನ್ನು ರಾಯನನು
ಕುಡಿಯುತಿಹ ಮರಿಗಳನು
ಮಂಜುಗಣ್ಣಲ್ಲಿ ನೋಡಿ
ತಾಯಿ ಮರುಗುವಳು.
ಕಾಡುಗಳ ಕಾಣದಿಹ
ಈ ಚಿಣ್ಣ ಹಸುಳೆಗಳು
ನಾಯಿ ಮರಿಗಳ ತೆರದಿ
ಸುಕದಿಂದಿವೆ;

(ದೀಪಗಳು, ಮೃಗಶಾಲೆಯ ಸಿಂಹಗಳು, ಪುಟ ೯೯)

ಸಿಂಹ ಶಿಶುಗಳದು ನಾಯಿ ಪಾಡು! ಇದೇ ಈ ಕವಿತೆಯ ವ್ಯಂಗ್ಯ!

ಕವಿತೆ ಹೀಗೆ ಮುಂದುವರಿಯುತ್ತದೆ. ಆರು ವರ್ಷಗಳ ಹಿಂದೆ, ಮನುಷ್ಯನ ಕುಟಿಲ ಜಾಲದಲ್ಲಿ ಸೆರೆಯಾಗುವ ಮೊದಲು ಹೇಗೆ ಮೃಗರಾಜನಾಗಿ ಗಂಡು ಗರ್ವದಿಂದ ಮೆರೆಯುತ್ತಿದ್ದ, ತನ್ನನ್ನು ವರಿಸುವುದಕ್ಕಾಗಿ ಮಿಕ್ಕ ಸಿಂಹಗಳೊಂದಿಗೆ ಹೋರಾಡಿ ಅವುಗಳನ್ನು ಹೇಗೆ ಸೀಳಿ ಹಾಕಿದ. ಆಮೇಲೆ ಗಂಡು-ಹೆಣ್ಣು ಎಣೆಯಾಗಿ ವಿಹರಿಸಿದ ಸುಖ-ಸಂತೋಷ ಯಾವುವೆಂಬುದನ್ನೆಲ್ಲ ಸಿಂಹಿಣಿ ನೆನೆ ನೆನೆದು ಕೊರಗುವುದನ್ನು ವಿ.ಸೀ ಚಿತ್ರಿಸಿದ ರೀತಿ ಕರುಳನ್ನು ಹಿಂಡುತ್ತದೆ.

ತಮ್ಮಿರವ ನೆನೆನೆನೆದು
ಚಿಂತಿಸುವ ಕೇಸರಿಯು
ಕಂಡು ಬಡವಾಗಿಹುದು
ಸಿಂಹಿ ದಿನದಿನವು
ಇದ ನೋಡಿ ಅದು ಸುಯ್ದು
ಅದ ನೋಡಿ ಇದು ಕೊರಗಿ
ಜೀವ ಹೊರೆಯೆಂದೆಣಿಸಿ
ಸಾವ ಕಾದಿಹವು.

(ದೀಪಗಳು, ಮೃಗಶಾಲೆಯ ಸಿಂಹಗಳು, ಪುಟ ೧೦೨)

ಹೀಗೆ ಸಿಂಹ–ಸಿಂಹಿಣಿಯರು ಕೊರಗಿ ಕರಗುತ್ತಲೇ ಕಂಡುಕೊಳ್ಳುವ ಜೀವನ ರಹಸ್ಯ ಇದು

ನರರ ಬಿಕ್ಕೆಯ ಜೀವ
ಪೊರೆವ ಮೇಲಿನುಪಾಯ
ಅವರ ಕರುಣೆಯನೊಲಿಪ
ವಿದ್ಯೆಯೇ ವಿದ್ಯೆ!

(ದೀಪಗಳು, ಮೃಗಶಾಲೆಯ ಸಿಂಹಗಳು, ಪುಟ ೧೦೩)

ಹೀಗೆ 'ಮೃಗಶಾಲೆಯ ಸಿಂಹ' ಕುಟುಂಬವನ್ನು ವರ್ಣಿಸುವ ವ್ಯಾಜದಲ್ಲಿ ವಿ.ಸೀ.ಯವರು ತನ್ನ ಸತ್ವವನ್ನು ಕಳೆದುಕೊಂಡು, ಸತ್ವವನ್ನು ಮರೆತು ಪರದಾಸ್ಯದಲ್ಲಿ ಬಾಳುತ್ತ, ಕೈಯಸಂಕಲೆಯನ್ನೇ ಚಿನ್ನದ ಬಳೆಗಳೆಂದು ಭ್ರಮಿಸಿದ್ದ ಭಾರತೀಯ ಜನಕೋಟಿಯ ಹೀನ ದೀನ ಸ್ಥಿತಿಯನ್ನೂ ಈ ಕವಿತೆಯಲ್ಲಿ ಚಿತ್ರಿಸಿರುವಂತಿದೆ.

ಸ್ವಾಮಿ ವಿವೇಕಾನಂದರ ಸಿಂಹ ಗರ್ಜನೆಯನ್ನು – 'ಉತ್ತಿಷ್ಠತ, ಜಾಗ್ರತ.. ಎಂಬುದನ್ನು ನೆನಪಿಗೆ ತರುವ, ಅದೇ ಭಾವವನ್ನು ಮಾರ್ದನಿಸುವ ಗಂಡು ಕವಿತೆ 'ಅಭೀಃ?' ಇದು ವಿ.ಸೀ.ಯವರ ಬಹು ಪ್ರಸಿದ್ಧ ರಚನೆಗಳಲ್ಲಿ ಒಂದು. ಶತ ಶತಮಾನಗಳಿಂದ ಮಾನಸಿಕ ದಾಸ್ಯ. ವಾಚಿಕ ನಿರ್ಬಂಧ ಮತ್ತು ಶಾರೀರಿಕ ಶೋಷಣೆಗಳನ್ನು ಧಿಕ್ಕರಿಸಿ, ಆತ್ಮ ಸಮ್ಮಾನ ವಿಚಾರ ಮತ್ತು ವಾಕ್‌ಸ್ವಾತಂತ್ರ್ಯ, ಭೀತಿಮುಕ್ತ ಜೀವನ ನಿರ್ವಹಣೆ ಮತ್ತು ಸಮಾಜ ನಿರ್ಮಾಣಕ್ಕಾಗಿ ಕಾರಾಗೃಹವನ್ನು ಸೇರಿದ, ನೇಣುಗಂಬವನ್ನು ಏರಿದ, ತುಳಿದಷ್ಟೂ ಎದ್ದೆದ್ದು ಬಂದ, ಇನ್ನೂ ಹತ್ತು ಹಲಬಗೆಯ ಚಿತ್ರಹಿಂಸೆಗಳನ್ನು ಅನುಭವಿಸಿದ ಮಹನೀಯರ ಹೆಸರೆತ್ತದೆ ನೆನೆದು ಅವರ ತ್ಯಾಗ ಬಲಿದಾನ ಮತ್ತು ವೀರವಾಣಿಗಳ ಪರಮಾದರ್ಶನಗಳನ್ನು ವಿ.ಸೀ, ಈ ಕವಿತೆಯ ನುಡಿಗುಂಡುಗಳಲ್ಲಿ ಮನಮುಟ್ಟಿಸುತ್ತಾರೆ. 'ಬಲಹೀನರೆಂದೆತ್ತಲಾತ್ಮವನು ಗಳಿಸಿದರು?' ಎಂದು ಪ್ರಶ್ನಿಸುವ ವಿ.ಸೀ. 'ನಾಯಮಾತ್ಮಾ ಬಲಹೀನೇನ ಲಭ್ಯಃ' ಎಂಬ ಆರ್ಷವಾಣಿಯನ್ನು ನೆನಪಿಗೆ ತರುತ್ತಾರೆ. ಕೊನೆಯಲ್ಲಿ

ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರೆದ ಎದೆಯೊಂದು..

(ದೀಪಗಳು, ಮೃಗಶಾಲೆಯ ಸಿಂಹಗಳು, ಪುಟ ೧೦೫)

ಮನುಕುಲಕ್ಕೆ ಅವಶ್ಯಕವೆಂದೂ, ಅಂತಹ ಭಾವಸ್ಫುರಣೆಗೆ 'ಅಭೀಃ' ಎಂಬುದೇ ತಾರಕವೆಂದೂ, ಅದೇ ಮನುಷ್ಯನ ನಾಡಿಯನ್ನು ಮಿಡಿದು ನಾಡನ್ನು ಮುನ್ನಡೆಯಿಸಬೇಕೆಂದೂ ಹಾರೈಸುತ್ತಾರೆ. ಈ ಕವಿತೆ ಓದಿದಷ್ಟೂ ಸಲ ಬಾಯ್ತುಂಬಿಸುತ್ತದೆ; ಭಾವಿಸಿದಷ್ಟೂ ಬಾರಿ ನವಿರೇಳಿಸುತ್ತದೆ.

ಸಂಗ್ರಹದ ಕೊನೆಯಲ್ಲಿರುವ 'ವಿಶ್ವಾಸ'ವೆಂಬ ಕವಿತೆಯೂ ಅರ್ಥಾಭಿವ್ಯಕ್ತಿಯಲ್ಲಿ, ಭಾವಸ್ಫುರಣೆಯಲ್ಲಿ ಮತ್ತು ಅದರ ವಿಸ್ತಾರದಲ್ಲಿ ಅಭೀಃಗೆ ಸಂವಾದಿಯಾಗಿ ನಿಲ್ಲುತ್ತದೆ.

ಇಹದಲಿ ಒಪ್ಪಲು ಆಗದ ಪರವನು
ಬಯಕೆಯು ಕರೆವುದೆ ಕೈಚಾಚಿ?
ಬಾಳನು ಶೋಧಿಸಿ ಶುಚಿಯನು ಬೆಳೆದರೆ
ಇಹವೇ ಅರಳದೆ ಪರವಾಗಿ?

(ದೀಪಗಳು, ಮೃಗಶಾಲೆಯ ಸಿಂಹಗಳು ಪುಟ ೧೧೩)

ಕವಿ ಕೇಳುವ ಈ ಪ್ರಶ್ನೆ ಸಹೃದಯನಲ್ಲಿ ಬಹುಕಾಲ ಅನುರಣಿಸಿ, ಭಾವಪರಂಪರೆಗಳನ್ನು ಎಬ್ಬಿಸುತ್ತದೆ. ಉತ್ತರವನ್ನು ಹುಡುಕುವಂತೆ ಮಾಡುತ್ತದೆ.

ಬೆಳೆಯ ಸಿರಿ ಮೊಳಕೆಯಲ್ಲಿ ಹೇಗಿರುತ್ತದೆ ಎಂಬುದನ್ನು ಗೀತಗಳು ಮತ್ತು ದೀಪಗಳಲ್ಲಿ ಸಹೃದಯರು ಗುರುತಿಸಬಹುದಾಗಿದೆ. ವಿ.ಸೀ.ಯವರ ಆ ಮುಂದಿನ ಕವಿತೆಗಳ ಓದಿಗೆ ಈ ಸಂಗ್ರಹಗಳ ಪರಿಚಯ ಒಂದು ಕೈಮರವಾಗಿ ನಿಲ್ಲುತ್ತದೆ. ಇನ್ನೂ ಮುಂದಿನದೆಲ್ಲ ಅವರ ಮಿಕ್ಕ ಕವನ ಸಂಗ್ರಹಗಳ ಮೇಲೆ ಒಂದು ಹಾರು ಹಕ್ಕಿಯ ತೋರನೋಟವನ್ನಷ್ಟೇ ಹಾಯಿಸುವ ಪ್ರಯತ್ನವಾಗಿದೆ. ವಿ.ಸೀ.ಯವರ ಕವನ ಸಂಗ್ರಹಗಳಲ್ಲಿ ನೆಳಲು ಬೆಳಕು (೧೯೨೫), ಹೆಚ್ಚು ಪ್ರಸಿದ್ಧವಾದದ್ದು. ದೀಪಗಳ ಬೆನ್ನಲ್ಲೇ, ಎರಡು ವರ್ಷಗಳ ಅಂತರದಲ್ಲಿ ಅದು ಪ್ರಕಟವಾಯಿತು. ಅವುಗಳ ಶೀರ್ಷಿಕೆಯಲ್ಲೂ ಒಂದು ಅನುಕ್ರಮಣಿಕೆ, ಒಂದು ಔಚಿತ್ಯ ಕಾಣುತ್ತದೆ. ಮೊದಲಿನದು ದೀಪಗಳಾದರೆ ಆಮೇಲಿನದು ನೆಳಲು–ಬೆಳಕು! ಲೋಕದಲ್ಲಿ ಇರುವುದೂ ಹಾಗೆ ತಾನೇ? ನೆಳಲು–ಬೆಳಕಿನಲ್ಲಿರುವ ಕವಿತೆಗಳ ಸತ್ಯ–ಸೌಂದರ್ಯಗಳೂ ಅತಿಶಯವಾದುವು. ಕಾವ್ಯಾಂತರಂಗದ ಸತ್ಯದಂತೆಯೇ ಕಾವ್ಯ ಸಂಚಯಗಳ ಬಹಿರಂಗ ಸೌಂದರ್ಯವನ್ನೂ ವಿ.ಸೀ. ಲಕ್ಷಿಸುತ್ತಿದ್ದರು...ಕಾವ್ಯ ನಿರ್ಮಾಣದಂತೆಯೇ ಕಾವ್ಯ ಪ್ರಕಟಣೆಯೂ ಒಂದು ಕಲೆ.. ಚೆಲ್ವ ಕೃತಿ, ನಿತ್ಯ ಸಂತೋಷದಾಯಿ... ಎಂದು ಅವರೇ ದೀಪಗಳ ಮುನ್ನುಡಿಯಲ್ಲಿ

ಬರೆದದ್ದಿದೆ. ನೆಳಲು-ಬೆಳಕು ಮೊದಲ ಸಲ ಅಚ್ಚಾಗಿ ಬಂದಾಗ ಎಂತಹ 'ಕಾವ್ಯಾಲಾಪವರ್ಜಿತ'ನೂ ಒಂದು ಸಲ ಅದನ್ನು ಕಣ್ಣರಳಿಸಿ ನೋಡಬೇಕು. ಎತ್ತಿ ಕಣ್ಣಿಗೆ ಒತ್ತಿಕೊಳ್ಳಬೇಕು ಎಂಬಷ್ಟು ಚೆನ್ನಾಗಿತ್ತು ಅದರ ಮುದ್ರಣ ವಿನ್ಯಾಸ, ರಕ್ಷಾಪುಟ ಸೌಂದರ್ಯ ಮತ್ತು ಪುಟ ಮಧ್ಯದ ಚಿತ್ರವೈವಿಧ್ಯ. ನೆಳಲು ಬೆಳಕಿನ ಪ್ರತ್ಯೇಕ ಕವನದ ವಸ್ತು ಮತ್ತು ಭಾವಗಳ ಕಾಲಾನುಗುಣವಾದ ನಾವೀನ್ಯವನ್ನೂ, ವಸ್ತು-ಭಾವಗಳಿಗೆ ಉಚಿತವಾದ ಬಂಧ ಮತ್ತು ಭಾಷಾ ಶೈಲಿಯನ್ನೂ ಕಾಣಬಹುದು. ಈ ಸಂಕಲನದ ಪ್ರಥಮ ಕವಿತೆಯೇ ಬಹು ಪ್ರಸಿದ್ಧವಾದದ್ದು; ಅಷ್ಟೇ ಅರ್ಥಭಾವ ಪರಿಪುಷ್ಟವಾದದ್ದು ಅದರ ಶೀರ್ಷಿಕೆ 'ಕಾಲನಟ' ಕವಿತೆಯಲ್ಲಿ ವಸ್ತು ಅಲ್ಲಿ, ಒಂದು ವ್ಯಕ್ತಿಯ ಚಿತ್ರಣವಿದೆ. ಎಲ್ಲೂ ಹೆಸರು ಕಾಣದೇ ಇದ್ದರೂ, ಅದು ಶಿವರಾಮ ಕಾರಂತರನ್ನು ಕುರಿತದ್ದು ಎಂಬುದನ್ನು ಅಲ್ಲಿರುವ ಉಕ್ತಿ ವಿಶೇಷಗಳಿಂದ ಊಹಿಸಬಹುದಾಗಿದೆ;

ಮೈಗೆ ಬಣ್ಣ ಬಳಿದುಕೊಂಡು ಕಾಗದಗಳ ಕುಚ್ಚುನುಟ್ಟು
ಕಾಲಗೆಜ್ಜೆ ಝಣರೆನುತಿರೆ ಕುಣಿಯುತ್ತಾನೆ
ಹೊಸತು ಕಾಲಪುರುಷನಿವನು ಕುಣಿಯುತಾನೆ
ಮಂಗಳೂರು ಬೆಂಗಳೂರು ಧಾರವಾಡ ಕಾರವಾರ
ಕನ್ನಡಿಗರ ತಂಡಗಳನು ಕರಸುತಾನೆ
ದಂಡ ತೆತ್ತು ನಾಳೆಯೊಸಗೆ ಬೀರುತಾನೆ.

(ನೆಳಲು-ಬೆಳಕು, ಕಾಲನಟ, ಪುಟ ೧೧೭)

ಹೀಗಿದೆ ಕವಿತೆಯ ಜಾಡು. ಕಾರಂತರ ಮುಕ್ತದ್ವಾರ ಗೀತ ನಾಟಕದಿಂದ ಈ ಕವಿತೆ ಪ್ರೇರಿತವಾಯಿತೆಂಬ ಹೇಳಿಕೆಯಿದೆ. ಉತ್ಸಾಹ ರಗಳೆಯ ಛಂದೋಗತಿಯಲ್ಲಿರುವ ಕವಿತೆ ಉತ್ಸಾಹಶೀಲ ಕಾರಂತರ ಉದ್ದಂಡ ವ್ಯಕ್ತಿತ್ವವನ್ನು ಸಮರ್ಥವಾಗಿ ಚಿತ್ರಿಸುತ್ತದೆ. ಕಾವ್ಯರೂಪದ ಕಾರಂತ ಚಿತ್ರಣಗಳಲ್ಲಿ ವಿ.ಸೀ.ಯವರದು ಎರಡನೆಯದಾಗಿದೆ. ಮಾಸ್ತಿಯವರ 'ಶ್ರೀ ಶಿವರಾಮ ಕಾರಂತರನ್ನು ಕುರಿತು' ಎಂಬುದು ಮೊದಲನೆಯದು. ಆದರೆ ಅದು ವಾಚ್ಯ; ಇದು ಸೂಚ್ಯ. ಇದರಲ್ಲಿ ಒಂದು ಅನನ್ಯತೆ ಇದೆ.

ಎರಡನೆಯದಾದ ಶಬರಿಯೂ ವಿ.ಸೀ. ಹೆಸರನ್ನು ಎತ್ತರಕ್ಕೆ ಎತ್ತಿ ಹಿಡಿದಿರುವ, ಹತ್ತು ಕಡೆ ಪುರಡಿರುವ ಕವಿತೆ. ವಾಲ್ಮೀಕಿ ರಾಮಾಯಣದಲ್ಲಿ ಕಣ ಮಾತ್ರವಾಗಿರುವ ಶಬರಿಯ ವೃತ್ತಾಂತವನ್ನು ಹೊಸಗನ್ನಡ ಕವಿಗಳು ತಮ್ಮ ಪ್ರತಿಭಾ ಮೂಷೆಯಲ್ಲಿ ಕರಗಿಸಿ, ನವಕಲ್ಪನೆಯ ಅಚ್ಚಿನಲ್ಲಿ ಎರಕ ಹೊಯ್ದುದು ಹೊಸ ರೂಪ, ಜೀವ

ಮತ್ತು ಕಳೆಯನ್ನು ತುಂಬುವ ಪ್ರಕ್ರಿಯೆಗೆ ಚಾಲನೆ ನೀಡಿದವರೇ ವಿ.ಸೀ.ಯವರೆಂದರೂ ಸಲ್ಲುತ್ತದೆ. ಕಾಲಾಂತರದಲ್ಲಿ ಸೇಡಿಯಾಪು, ಆನಂದಕಂದ, ಪು.ತಿ.ನ., ಕುವೆಂಪು ಮುಂತಾದ ಕವಿ ಶ್ರೇಷ್ಠರು ಶಬರಿಯನ್ನು ಕುರಿತು ಖಂಡಕಾವ್ಯ, ಗೀತನಾಟಕ, ಮಹಾಕಾವ್ಯ ಪರಿಚ್ಛೇದಗಳನ್ನೂ ರಚಿಸಿದರೆಂಬುದನ್ನು ಸ್ಮರಿಸಬಹುದಾಗಿದೆ. ಅವರೆಲ್ಲರದೂ ವಿಭಿನ್ನ ದೃಷ್ಟಿಗಳ ಸ್ವತಂತ್ರ ಸೃಷ್ಟಿಗಳಲ್ಲದೆ, ಅನುಕರಣ ಅನುಸರಣಗಳು ಸರ್ವಥಾ ಅಲ್ಲ.

□□□

೨. 'ಚಂದ್ರಶೇಖರ ಕಂಬಾರ ಅವರ 'ಚಕೋರಿ'ಯ ವಸ್ತು ಮತ್ತು ಛಂದಸ್ಸು

– ಪ್ರಸನ್ನಕುಮಾರ್ ಎಂ.

ಡಾ. ಚಂದ್ರಶೇಖರ ಕಂಬಾರರು ಬೆಳಗಾವಿ ಜಿಲ್ಲೆಯ ಘೋಟಗೇರಿಯಲ್ಲಿ ೧೯೩೭ ಜನವರಿ ೭ ರಂದು ಜನಿಸಿದರು. ಕವಿಯಾಗಿ, ಜಾನಪದ ವಿದ್ವಾಂಸರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ.' 'ಚಕೋರಿ' ಇವರ ಮಹಾಕಾವ್ಯ. ಜನಪದ ವಸ್ತುವಿಗೆ ಮಹಾಕಾವ್ಯದ ಸ್ವರೂಪವನ್ನು ಗಳಿಸಿಕೊಟ್ಟ ಕೀರ್ತಿ ಚಂದ್ರಶೇಖರ ಕಂಬಾರರದು. ಜನಪದವನ್ನು ಸತ್ತ್ವಯುತ ಶಿಷ್ಟಸಾಹಿತ್ಯವನ್ನಾಗಿಸುವುದೇ ಕಂಬಾರರ ಅಭಿವ್ಯಕ್ತಿಯ ಮುಖ್ಯ ಜೀವಾಳವಾಗಿದೆ.

ಯಾವುದೇ ಒಂದು ಭಾಷೆಯ ಕಾವ್ಯವನ್ನು ಅಧ್ಯಯನ ಮಾಡುವಾಗ ಛಂದಸ್ಸಿನ ಪರಿಜ್ಞಾನ ನಮ್ಮ ಸಾಹಿತ್ಯ ಅಧ್ಯಯನದಲ್ಲಿ ಬಹಳ ಮುಖ್ಯ. ಕೇವಲ ಛಂದಸ್ಸನ್ನೇ ಹಿಡಿದುಕೊಂಡು ಸಾಹಿತ್ಯ ಅಧ್ಯಯನ ಮಾಡಿದರೆ ಸರಿಯಾದ ಮಾರ್ಗವಲ್ಲ ಅಥವಾ ಸಂಪೂರ್ಣ ಛಂದಸ್ಸನ್ನೇ ಕೈಬಿಟ್ಟು ಕೇವಲ ಸಾಹಿತ್ಯವನ್ನೇ ಅಧ್ಯಯನ ಮಾಡಿದರೆ ಸಾಹಿತ್ಯದ ಸ್ವಾರಸ್ಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾಗುವುದಿಲ್ಲ ಎಂಬ ಮೂಲಭೂತ ಪರಿಜ್ಞಾನ ಬೇಕು. ಹಾಗಾದರೆ ಛಂದಸ್ಸು ಅಂದ್ರೆ ಏನು? ಯಾವುದನ್ನು ಛಂದಸ್ಸು ಎಂದು ಗುರ್ತಿಸಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ಸಹಜವಾದ ಅರ್ಥದಲ್ಲಿ ಛಂದಸ್ಸು ಅಂದರೆ ಪದವೇ ಆಗಲೀ ಅಥವಾ ಗದ್ಯವೇ ಆಗಲೀ ಶಬ್ದದಲ್ಲಿ ನಾದ ಮತ್ತು ಅರ್ಥ ಉತ್ಪತ್ತಿಗೆ ಸಹಾಯಕವಾಗುವ ನಾದಗುಣವೇ ಛಂದಸ್ಸು.

ಛಂದಸ್ಸು ಪದ್ಯ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದೆ ಅನ್ನುವ ಕಾಲಘಟ್ಟದ ಆಲೋಚನೆಯು ಬದಲಾಗಿ ಗದ್ಯ ಸಾಹಿತ್ಯವೂ ಛಂದಸ್ಸಿನ ಗುಣವನ್ನು ಹೊಂದಿದೆ

ಎಂದು ಪರಿಭಾವಿಸಲಾಗಿದೆ. ಸಾಹಿತ್ಯದ ವಸ್ತು, ಅಭಿವ್ಯಕ್ತಿ ಮತ್ತು ಭಾಷೆಯಲ್ಲಿ ಬದಲಾವಣೆಯಾದಂತೆ ಛಂದಸ್ಸಿನಲ್ಲೂ ಮಾರ್ಪಾಡುಗೊಂಡಿರುವುದು ಜೀವಂತ ಸಾಹಿತ್ಯದ ಲಕ್ಷಣವಾಗಿದೆ. ಸಾಂಪ್ರದಾಯಿಕ ಛಂದಸ್ಸಿನಿಂದ ಮುಕ್ತ ಛಂದಸ್ಸಿನೆಡೆಗೆ ಹಾಗೂ ಮುಕ್ತ ಛಂದಸ್ಸಿನಿಂದ ಸಾಂಪ್ರದಾಯಿಕ ಛಂದಸ್ಸಿಗೆ ಆಧುನಿಕ ಕಾವ್ಯಗಳು ಹಿಮ್ಮುಖಗೊಂಡಿವೆ. ಈ ಸ್ಥಾನಪಲ್ಲಟಗಳು ಛಂದಸ್ಸಿನ ಮಹತ್ವವನ್ನು ಸಾದರಪಡಿಸುತ್ತದೆ.

ಗದ್ಯ ಮತ್ತು ಪದ್ಯಗಳೆರಡನ್ನು ಒಳಗೊಂಡ ದೀರ್ಘವಾದ ಕಾವ್ಯವೇ ಚಂಪೂ ಕಾವ್ಯವಾಗಿದೆ. ಗದ್ಯ, ಪದ್ಯ ಸಂಮಿಶ್ರಿತವಾದ ಗದ್ಯಕಥೆಗಳು, ಕನ್ನಡಗಬ್ಬಗಳಲ್ಲಿದ್ದುವೆಂದು ಕವಿರಾಜಮಾರ್ಗದಲ್ಲಿ ಹೇಳಿರುವುದನ್ನು ನೆನಪಿಸಿಕೊಳ್ಳಬಹುದು.

ಚಂಪೂವಿನ ಮೊದಲ ಉಲ್ಲೇಖ ಬಹುಶಃ ೨ನೆಯ ನಾಗವರ್ಮನ ಕಾವ್ಯಾವಲೋಕನದಲ್ಲಿ ಬಂದಿದೆ. ಇವನ ಸಮಕಾಲೀನವಾದ ಉದಯಾದಿತ್ಯನ ಅಲಂಕಾರ ಗ್ರಂಥದಲ್ಲಿಯೂ ಹೀಗಿದೆ.

> **"ಕನ್ನಡದೊಳ್ ಚಂಪೂ ಕೃತಿ**
> **ಸನ್ನುತತರ ವಚನಕಾವ್ಯಮೆನಿತುಂ ಚತ್ತಾ**
> **ಣಂನೆಱಿ ವೈದಂಡಿಕಮನೆ**
> **ಸನ್ನುತಿಯಂ ಸರ್ಗಬಂಧ ಕೃತಿ ತಳೆದಿರ್ಕುಂ"[೧]**

'ಕನ್ನಡದಲ್ಲಿ ಚಂಪೂಕೃತಿಯನ್ನು ವಚನಕಾವ್ಯವೆನಿಸುತ್ತದೆ' ಎಂದು ಇಲ್ಲಿ ವಿಶ್ಲೇಷಿಸಿ ಹೇಳಿರುವುದು ವಿಚಾರಾರ್ಹವಾಗಿದೆ. 'ಕನ್ನಡ ಚಂಪೂ ಕಾವ್ಯಗಳಲ್ಲಿ ಗದ್ಯಭಾಗವನ್ನು ನಮ್ಮ ಕವಿಗಳು 'ವಚನ' ಎಂದೇ ನಿರ್ದೇಶಿಸುವುದು ರೂಢಿ. ಶಿವಶರಣರ ವಚನಗಳು ಎನ್ನುವಾಗ 'ವಚನ'ವನ್ನು ಹೇಳಿಕೆ, ಉಕ್ತಿ ಎಂದು ಪರಿಭಾವಿಸಲಾಗಿದೆ.

ಶಿವಕೋಟ್ಯಾಚಾರ್ಯರ 'ವಡ್ಡಾರಾಧನೆ' ಚಾವುಂಡರಾಯನ 'ಚಾವುಂಡರಾಯಪುರಾಣ'ಗಳು ಹಳೆಯ ಗದ್ಯ ಕಥೆಗಳ ಮಾದರಿಯಲ್ಲಿ ಹುಟ್ಟಿದ ಈಚೆಯ ಕಾಲದ ಗದ್ಯಕಥೆಗಳಾಗಿವೆ ಎನ್ನಬಹುದು. ಹಾಗೆಯೇ ಕವಿರಾಜಮಾರ್ಗಕಾರನು ಗದ್ಯಕಥೆ, ಚತ್ತಾಣ, ಬೆದಂಡೆ ಎಂಬ ಮೂರು ಬಗೆಯ ಸಾಹಿತ್ಯ ರೂಪಗಳನ್ನು ಉಲ್ಲೇಖಿಸಿದ್ದಾನೆ. ಪ್ರಾಚೀನ ಕಾಲದ ಗದ್ಯಕಥೆ ಪ್ರಕಾರವು ಆಧುನಿಕ ಕಾಲದಲ್ಲಿ ರಚಿತಗೊಂಡಿರುವ 'ಚಕೋರಿ'ಯನ್ನು ಗದ್ಯಕಥೆ ಮತ್ತು ಚಂಪೂ ಪ್ರಕಾರಕ್ಕೆ ಸೇರಿಸಬಹುದಾಗಿದೆ. ಡಿ.ಎಲ್. ನರಸಿಂಹಚಾರ್ ಅವರು "ವಡ್ಡಾರಾಧನವು ಗದ್ಯರೂಪದಲ್ಲಿರುವ ಕಥೆಗಳ ಗೊಂಚಲು ಇದೊಂದು ಹೊಸ ಮಾದರಿಯ

ಗ್ರಂಥ. ಇದನ್ನು ಗದ್ಯಕಥೆ ಎನ್ನಬಹುದು"[೨] ಎಂದು ಅಭಿಪ್ರಾಯಪಟ್ಟಿದ್ದಾರೆ. ಗದ್ಯ-ಪದ್ಯ ಮಿಶ್ರಿತವಾದ ಈ ಬಗೆಯನ್ನು ದಂಡಿಯಂತೆ ಚಂಪೂ ಎಂದು ಹೇಳದೆ, ಕವಿರಾಜಮಾರ್ಗಕಾರ ಗದ್ಯಕಥಾ ಎಂದಿರುವುದು ಈ ಪ್ರಭೇದಗಳಲ್ಲಿ ವ್ಯತ್ಯಾಸವಿದೆ ಎಂಬುದು ಸ್ಪಷ್ಟವಾಗಿದೆ.

"ಪದ್ಯದೊಡನೆ ಗದ್ಯದ ಮಿಶ್ರಣ, ವೈವಿಧ್ಯತೆಯನ್ನು ಕಲ್ಪಿಸಿತು. ಆಧುನಿಕ ಮಹಾಕಾವ್ಯಗಳ ಪದ್ಯಗಳಲ್ಲಿ ಮಹಾಕಾವ್ಯದ ನಿಯತ ಛಂದಸ್ಸುಗಳನ್ನು ಮೀರಿ ವಿವಿಧ ಛಂದಸ್ಸಿನ ಬಳಕೆ ಸಾಮಾನ್ಯವಾಯ್ತು. ಅನುಕೂಲವಾದಂತೆ ಗದ್ಯ ಅಥವಾ ಪದ್ಯಗಳನ್ನು ಬರೆಯುವುದು ಸುಲಭವಾಯ್ತು. This variety enlarges the scope and case of the poet's expression and entertains the reader by the presentation or combination melodies"[೩] ಎಂಬ ಅಭಿಪ್ರಾಯ ಚಂಪೂ ವಿಶ್ಲೇಷಣೆಗೆ ಸಮಂಜಸವಾಗಿದೆ.

ಆಧುನಿಕ ಕನ್ನಡ ಮಹಾಕಾವ್ಯವಾದ 'ಚಕೋರಿಯು' ದೇಸೀಯ ಸೊಬಗನ್ನು ಅಭಿವ್ಯಕ್ತಗೊಳಿಸುವ ಕಾವ್ಯವಾಗಿದೆ. ಜೀವನಾನುಭವ, ನಂಬಿಕೆ-ಆಚರಣೆ, ಮಾಟ-ಮಂತ್ರ, ಕನಸು-ಕಲ್ಪನೆ, ತಂತ್ರಗಾರಿಕೆ, ಭಾಷಿಕ ನೆಲೆಗಳು ಓದುಗನನ್ನು ಆಕರ್ಷಿಸುತ್ತವೆ. ಆದಿಕಾಲದ ಕೃಷಿ ಕುಟುಂಬ, ವಿದ್ಯೆ, ಕಲೆ, ಸಂಸ್ಕೃತಿಯ ಅನುಭಾವ ಹಾಗೂ ಸಾಂಸ್ಕೃತಿಕ ರಾಜಕೀಯ ಜಿಜ್ಞಾಸೆಗಳು ಮುಖ್ಯವೆನಿಸಿವೆ. ಹಾಗೆಯೇ ಚಕೋರಿಯ ಜೀವ ವಿಕಾಸದ ವಿಭಿನ್ನ ಘಟ್ಟಗಳನ್ನು ಜೀವ ವಿಕಾಸದ ತಲೆತಲಾಂತರದ ನಂಬಿಕೆಯ ಕಥೆಗಳನ್ನು ಸೃಷ್ಟಿಸಿಕೊಂಡು ಅವನತಿಯ ಮೂರ್ತ-ಅಮೂರ್ತ ಸಂಗತಿಗಳನ್ನು ಅಂತರ್ಗತಗೊಳಿಸಿ ವಿಶ್ಲೇಷಿಸುತ್ತದೆ. ಉತ್ತರ ಕರ್ನಾಟಕ ಭಾಷಾ ಶೈಲಿಯು ಕಾವ್ಯದೊಡಲಿಗೆ ಹೊಸ ಚೈತನ್ಯವಾಹಕವಾಗಿ ಹರಿದಿದೆ. ಬೇಂದ್ರೆಯ ನಂತರ ದೇಸೀಯ ಸೊಬಗನ್ನು ಕಾವ್ಯಕ್ಕೆ ಸಹಜವಾಗಿಯೇ ಹದಗೊಳಿಸಿದ್ದಾರೆ. ಚಂದ್ರಶೇಖರ ಕಂಬಾರ ಕಥೆ ಕಾದಂಬರಿಗಳಿಗಿಂತ ಕಾವ್ಯದಲ್ಲಿ ರಸಾನುಭವದೊಂದಿಗೆ ಗೇಯತೆಯ ಗುಣ, ಲಯಗಳ ವೈವಿಧ್ಯತೆಯು ವಿಕಸಿತಗೊಂಡಿದೆ. ಕಥಾನಾಯಕ ಚಂದಮುತ್ತನ ಸಾಂಸ್ಕೃತಿಕ ಬದುಕು ನೋವು – ನಲಿವುಗಳಲ್ಲಿ ಆತ್ಮತೃಪ್ತಿಯನ್ನು ಸಾಕಾರಗೊಳಿಸುವ ಬಗೆ; ದೇವ – ಮಾನವರ ಸಂಬಂಧಗಳನ್ನು ಜಾನಪದೀಯ ಹಿನ್ನೆಲೆಯಲ್ಲಿಯೇ ತರುವ ಬೆಸುಗೆ ಕಾವ್ಯದೊಡಲಿನಲಿ ನಾವೀನ್ಯತೆ ತಂದಿದೆ. ಕಥಾನಾಯಕ ಚಂದಮುತ್ತನ ನಾದಪ್ರಿಯತೆಗೆ ಲೋಕೋತ್ತರವಾದ ಶಕ್ತಿಯನ್ನು ತಂದು ಕೊಡುವವಳು ಯಕ್ಷಿ. ಇಹಪರಗಳಿಗೆ ಇಬ್ಬಂದಿಯಾದವಳು ಯಕ್ಷಿ. ಈ ಯಕ್ಷಿಯ ಮೋಹಕ್ಕೆ ಬಲಿಯಾದನು ಚಂದಮುತ್ತ. ತನ್ನ ಹೆತ್ತ ತಾಯಿಯ ಕರುಳುಬಳ್ಳಿಯನ್ನು ಕತ್ತರಿಸಿಕೊಳ್ಳುವುದು

ಈ ಕಾವ್ಯದಲ್ಲಿ ಅನಿವಾರ್ಯವಾಗುತ್ತದೆ. ಚಂದಮುತ್ತನ ಜೀವದ ಹಿಗ್ಗು ಅವನ ಜೀವನವನ್ನೇ ಕೊನೆಗೆ ಬಲಿಯಾಗಿಸುತ್ತದೆ. ಯಕ್ಷಿಯು ಚಂದ್ರನನ್ನು ಸೇರುವ ಬಗೆಯಿಂದಲೇ ಅಥವಾ ಪ್ರೀತಿಸುವುದರಿಂದಲೇ 'ಚಕೋರಿ'ಯಾಗುತ್ತದೆ. ಚಂದಮುತ್ತ ಮತ್ತು ಚಕೋರಿಯ ಮದುವೆಯ ಸಂಬಂಧ ಕಾವ್ಯದೊಡಲಿಗೆ ಹೊಸ ಚೈತನ್ಯವಾಗಿ ಹಾಗೂ ಪುಣ್ಯಕೋಟಿ ಮತ್ತು ಚಂದಮುತ್ತನಿಗೂ ನಿಕಟ ಸಂಬಂಧವಾಗಿ ಕಾವ್ಯ ಸಾಗುತ್ತದೆ.

"ನಾವು ಕನಸುಗಳು	**೩:೫**
ಎಲ್ಲ ಕಾಲ ಎಲ್ಲ ಸೀಮೆಗೆ ಸಲ್ಲುವ	**೩:೩:೩:೪:೪**
ಎಲ್ಲಾ ವಯಸ್ಸಿನ, ಎಲ್ಲಾ ಮನಸ್ಸಿನ	**೪:೫:೪:೫**
ಆದಿಮಕಾಲದಿಂದ ಹಾಗೇ ಉಳಿದು ಬಂದಿರುವ ಕನಸುಗಳು	**೪:೬:೪:೩:೫:೫**
ಮಹಾಶಿವರಾತ್ರಿಯಂದು ಸಂಜೆ ಸಾಯಂಕಾಲವಾದೇಟ್ಗೆ"[೪]	**೩:೫:೩:೩:೬:೫**

ಎಂದು ಹೇಳುವಲ್ಲಿ ಅನಿಯತಲಯದ, ಅನಿಯತಪಾದರಚನೆ ಸಂಯೋಜನೆಗಳನ್ನೊಳಗೊಂಡಿದೆ. ಕೆಲವು ಕಡೆಗಳಲ್ಲಿ ವಚನಗಳ ಧಾಟಿಯ ಪ್ರಭಾವವನ್ನು ಕಾಣಬಹುದು. ಸಾಂಪ್ರದಾಯಿಕ ಛಂದೋಬಂಧದ ನಿರ್ದಿಷ್ಟತೆ ಇಲ್ಲ. ಭಾವಾಭಿವ್ಯಕ್ತಿಯ ಅಗತ್ಯಕ್ಕೆ ತಕ್ಕಂತೆ ಪಾದಗಳು ಹಿಗ್ಗುತ್ತ, ಕುಗ್ಗುತ್ತ ಹೋಗುವುದೇ ಅನಿಯತಲಯದ ಪ್ರಧಾನ ಲಕ್ಷಣ. ಚಂದ್ರಶೇಖರ ಕಂಬಾರರು ಮೂಲತಃ ಜಾನಪದ ಕವಿಗಳಾಗಿರುವುದರಿಂದ ಜನಪದ ಗೇಯತೆಯನ್ನು ಕಾಣಬಹುದಾಗಿದೆ. ಈ ಅನಿಯತಲಯ ಛಂದೋಬಂಧವನ್ನು ಗೋಕಾಕರು, ಬೇಂದ್ರೆ, ಕೆ.ಎಸ್.ನ., ಅಡಿಗ, ಜಿ.ಎಸ್.ಶಿವರುದ್ರಪ್ಪ ಇನ್ನೂ ಮೊದಲಾದವರು ಕಾವ್ಯ ಮಾಧ್ಯಮವಾಗಿ ಬಳಸಿದ್ದಾರೆ.

"ಯುಗಯುಗಾಂತರ ಕಳೆದು ಅಮೃತ ಕುಡಿಯದ ಅವಳ ದೇಹ ಕುಸಿದು ಅಸುನೀಗಿ ಬಿದ್ದಲ್ಲಿ ನೋಡು ಶಿವಾ"[೫] ಇದು ಗದ್ಯ. ಇದನ್ನೇ ತಾಳ ಲಯ ದೃಷ್ಟಿಯಿಂದ ಗಮನಿಸಿದಾಗ,

ಯುಗಯುಗಾಂ।ತರ ಕಳೆದು।ಅಮೃತಕುಡಿ।ಯದ ಅವಳ	**೫:೫:೫:೫**
ದೇಹ ಕುಸಿ।ದು ಅಸುನೀ।ಗಿಬಿದ್ದ।ಲ್ಲಿನೋಡುಶಿ।ವಾ	**೫:೫:೫:೫:–**

ಎಂಬುದು ಒಂದು ಛಂದೋ ಮಾದರಿಯ ಪದ್ಯವಾಗುತ್ತದೆ. ಪದ್ಯದಲ್ಲಿ ಪ್ರವಹಿಸುವ ಲಯದ ವಿನ್ಯಾಸವೇ ಅಥವಾ ನಾದಗುಣವೇ ಛಂದಸ್ಸು. ಪದ್ಯದಲ್ಲಿಯ ಈ ಲಯವನ್ನು ಸ್ಫುಟಗೊಳಿಸಿ ಕೊಡುವುದು ತಾಳ, ಒಂದು ಪದ್ಯವನ್ನು ಹಾಡುತ್ತ ಹೋದಂತೆ, ತಾಳಗಳು, ಬೀಳುತ್ತ ಹೋಗುತ್ತವೆ. ಮೇಲಿನ ಪದ್ಯದಲ್ಲಿಯೇ ಕೊರೆದ ಗೆರೆಗಳು ತಾಳಗಳು ಎರಡು ತಾಳಗಳ ಮಧ್ಯಭಾಗವೇ ಲಯ (೫+೫+೫+೫)

ಎಂದು ತಿಳಿಯಬಹುದು. ಅಂದರೆ ಗದ್ಯವು ಲಯದಿಂದ ಕೂಡಿದರೆ ಪದ್ಯವಾಗುತ್ತಾ ಛಂದಸ್ಸಿನ ಬಂಧಕ್ಕೆ ಒಳಪಡುವುದನ್ನು ಕಾಣಬಹುದಾಗಿದೆ.

'ಚಕೋರಿ' ಮಹಾಕಾವ್ಯವು ಆದಿಯಲ್ಲಿ ಸ್ವಚ್ಛಂದ ಛಂದಸ್ಸಿನ ಲಕ್ಷಣವೂ ಮೈದೋರಬಹುದು. ಆದರೆ ಕಾವ್ಯದೊಡಲಿಗೆ ಪ್ರವೇಶಿಸಿದಂತೆ ವೈವಿಧ್ಯತೆಯ ಛಂದೋಬಂಧಗಳು ಸ್ಪರ್ಶಿಸಿ ಮಾದರಿ ಕಾವ್ಯವನ್ನಾಗಿಸಿವೆ.

"ಯಾರೋ ಉನ್ನತದೇವತೆ ಉಲ್ಲಾಸದಲಿ ಬಂದು
ತಂಗಾಳಿಯಾಗಿ ಮರತುಂಬಿ
ಹುಡದಿ ಹಾಕುತ್ತಿರಬಹುದೇ? ಎಂದೆವು"[೬]

ಈ ಪದ್ಯವು ಮೂರು ಪಾದಗಳನ್ನು ಹೊಂದಿದೆ. ತ್ರಿಪದಿಯ ಲಕ್ಷ್ಯ ಲಕ್ಷಣಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಆದ್ದರಿಂದ ಈ ಪದ್ಯವನ್ನು ಹೀಗೂ ಬರೆಯಬಹುದು.

ಯಾರೋ ಉ।ನ್ನತದೇವತೆ।ಉಲ್ಲಾಸ।ದಲಿ ಬಂದು	**ವಿ:ರು:ವಿ:ವಿ**
ತಂಗಾಳಿ।ಯಾಗಿ। ಮರತುಂಬಿ।ಹುಡದಿಹಾ	**ವಿ:ಬ್ರ:ವಿ:ವಿ**
ಕುತ್ತಿರ।ಬಹುದೇ?। ಎಂದೆವು	**ವಿ:ಬ್ರ:ವಿ**

ಇಲ್ಲಿ ದೇಶೀಯ ಮಟ್ಟುವಾದ ತ್ರಿಪದಿಯನ್ನು ವಸ್ತುವಿನ ಅಭಿವ್ಯಕ್ತಿಗೆ ಮಾಧ್ಯಮವಾಗಿ ಬಳಸಿದ್ದಾರೆ. ಕಾವ್ಯದ ಗೇಯತೆಗೆ ಅನುಗುಣವಾಗಿ ಬಂಧವನ್ನು ಹಿಗ್ಗಿಸುವಿಕೆಗೆ ಅವಕಾಶವಿದೆ. "ಶುದ್ಧ ತ್ರಿಪದಿಯು ಅಂಶಗುಣಾತ್ಮಕವಾಗಿದ್ದು, ಒಟ್ಟು ೧೧ ಗಣಗಳಿರುತ್ತವೆ. ೬ ಮತ್ತು ೧೦ ನೆಯ ಗಣ ಬ್ರಹ್ಮಗಣಗಳಾಗಿದ್ದು, ಉಳಿದವು ಬಹುಪಾಲು ವಿಷ್ಣುಗಣಗಳಾಗಿರುತ್ತವೆ."[೭] ಹಾಗೆಯೇ ಕೆಲವು ಸಂದರ್ಭಗಳಲ್ಲಿ ಪರ್ಯಾಯವಾಗಿ ಬ್ರಹ್ಮಗಣಕ್ಕೆ ವಿಷ್ಣುಗಣವೂ ವಿರಳವಾಗಿ, ವಿಷ್ಣುಗಣಕ್ಕೆ ರುದ್ರಗಣವು ಬರಬಹುದು.

– – ∪ – ∪ ∪ ∪	
"ಎಷ್ಟೊಂದು ಬಣ್ಣಗಳು	**೫:೫**
– – ∪ – ∪ ∪ ∪	
ಅಷ್ಟೊಂದು ಹೂವುಗಳು	**೫:೫**
– – ∪ – – ∪ ∪ ∪ ∪ ∪ ∪	
ಎಷ್ಟೊಂದು ಹೂಬಣ್ಣ ಬೆಳಕುಗಳು	**೫:೫:೫**
– – ∪ – – ∪ ∪ ∪ ∪ ∪ ∪ – – ∪	
ಅಷ್ಟೊಂದು ಹೂಬಣ್ಣ ಬೆಳಕುಗಳ ಹಾಡುತ್ತ	**೫:೫:೫:೫**
– ∪ ∪ ∪ – ∪ ∪ ∪ ∪ ∪ ∪ ∪ ∪	
ತೇಲುವವು ರಾಗದಲಿ ಮುಗಿಲುಗಳು"[೮]	**೫:೫:೫**

ಈ ಪಂಚಪದಿಯ ಪದ್ಯವು ಅನಿಯತಲಯ, ಅನಿಯತಪಾದಸಂಯೋಜನೆ ಇದ್ದರೂ ರಾಗ ಸಂವೇದನೆಯ ದೃಷ್ಟಿಯಲ್ಲಿ ಅನೇಕ ಭಾವಗಣಗಳು ಭಾವಾನುಸಾರಿಯಾಗಿ ಕಂಡುಬರುತ್ತವೆ. ಈ ಪದ್ಯವನ್ನು ತಾಳ ಮಾತ್ರಕ್ಕೆ ಅನುಗುಣವಾಗಿ ಹೀಗೆ ಬರೆಯಬಹುದು.

ಎಷ್ಟೊಂದು ಬಣ್ಣಗಳು	೫:೫
ಅಷ್ಟೊಂದು ಹೂವುಗಳು	೫:೫
ಎಷ್ಟೊಂದು ಹೂಬಣ್ಣ ಬೆಳಕುಗಳು	೫:೫:೫
ಅಷ್ಟೊಂದು ಹೂಬಣ್ಣ	೫:೫
ಬೆಳಕುಗಳ ಹಾಡುತ್ತ	೫:೫
ತೇಲುವವು ರಾಗದಲಿ ಮುಗಿಲುಗಳು	೫:೫:೫

ಒಂದು ಹೊಸ ರೀತಿಯ ಛಂದೋಬಂಧಕ್ಕೆ ಪರಿವರ್ತಿಸಬಹುದಾಗಿದೆ. ಮೇಲ್ನೋಟಕ್ಕೆ ೧, ೨, ೪ ಮತ್ತು ೫ನೆಯ ಪಾದಗಳಲ್ಲಿ ೫ ಮಾತ್ರೆಯ ೨ ಗಣಗಳಿದ್ದು, ೩ ಮತ್ತು ೬ ನೆಯ ಪಾದಗಳಲ್ಲಿ ೫ ಮಾತ್ರೆಯ ೩ ಗಣಗಳಿವೆ. ಕೊನೆಯಲ್ಲಿ – ಒಂದು ಗುರುವಿದ್ದರೆ ಕುಸುಮ ಷಟ್ಪದಿಯ ಲಕ್ಷಣವಾಗುತ್ತಿತ್ತು. ಆದರೆ ಹಾಡುವ ಧಾಟಿಯನ್ನು ಹಿಗ್ಗಿಸಿಕೊಳ್ಳುವ ಅವಕಾಶವಿರುವುದರಿಂದ ಗುರುವಿನ ಮೌಲ್ಯವನ್ನು ಪಡೆದುಕೊಳ್ಳಬಹುದಾಗಿದೆ.

ತಾಳ ಮಾತ್ರ ಪ್ರಧಾನವಾದ ಷಟ್ಪದಿಯಿಂದ ಪದಲಾಲಿತ್ಯವನ್ನು ತಿಳಿಯಬಹುದು. ಹಾಗೆಯೇ ಕನ್ನಡದಲ್ಲಿ ಪ್ರಾಸವೂ ಮುಖ್ಯ. ಪೂರ್ವಕವಿಗಳು ಪ್ರಾಸವನ್ನು ಮೀರಿಲ್ಲ. ಈ ಪರಂಪರೆಯು ದೇಸೀಯಗಬ್ಬಗಳಲ್ಲೂ ಇದೆ. ರಗಳೆಯಲ್ಲಿ ಆದಿ, ಅಂತ್ಯ ಪ್ರಾಸಗಳಿವೆ. ಜನಪದ ಸಾಹಿತ್ಯದಲ್ಲಿ ಅಂದರೆ ತ್ರಿಪದಿ, ಲಾವಣಿ, ವಚನಗಳಲ್ಲಿ ಐಚ್ಛಿಕ. ಕಾವ್ಯದ ಜೀವಾಳವೂ ಪ್ರಾಸ, ಪ್ರಾಸದಿಂದಲೇ ಕಾವ್ಯದ ಗೇಯತೆ ವೈವಿಧ್ಯತೆಯಿಂದ ಕೂಡಿರುತ್ತದೆ.

"ಹೆಪ್ಪು ಹಾಕಿದ ಹಾಗೆ" ಜನಿಗಿsಯ ಹಾಲಿಗೆ	ವಿ:ವಿ:ವಿ:ವಿ
ಒಪ್ಪುಗೊಂಡರು ಅಪ್ಪುಗೆಯಲಿ	ವಿ:ವಿ:ಬ್ರ
ಜೀವರಸಚಿಮ್ಮಿಸುವಸೊಗಸುಗಳಸುಖಿಸಿದರು	ರು:ರು:ರು:ರು
ಗಳರವ ಸಂಗೀತದಲ್ಲಿ"	ವಿ:ವಿ:ಬ್ರ

ಸಾಂಗತ್ಯವೂ ಹಾಡುಗಬ್ಬ (ವರ್ಣಕ)ವಾಗಿರುವುದರಿಂದ ಜಾನಪದೀಯ ಸಾಂಸ್ಕೃತಿಕ ಅಂಶಗಳಿಗೆ ಪದಲಾಲಿತ್ಯ, ಗೇಯತೆಯನ್ನು ತಂದುಕೊಡುತ್ತದೆ. ೧, ೨ ಮತ್ತು ೪ನೆಯ ಪಾದಗಳು ಶುದ್ಧ ಸಾಂಗತ್ಯದ ಲಕ್ಷಣವಾಗಿದೆ. ೩ನೆಯ ಪಾದದಲ್ಲಿ ೪ ವಿಷ್ಣು ಗಣದ ಬದಲಿಗೆ ೪ ರುದ್ರಗಣ ಬಂದು ಭಾವಾತೀತತೆಯನ್ನು ಅನುಸರಿಸಿದೆ. ಹಾಡುವ ಮಟ್ಟಾಗಿರುವುದರಿಂದ ಜಾನಪದ ಗೀತೆಗಳಲ್ಲಿ ಸಾಂಗತ್ಯ ಮತ್ತೆ ಮತ್ತೆ ಸಂಗಮಗೊಳ್ಳುತ್ತದೆ.

"ಒಬ್ಬರಿ|ಗೊಬ್ಬರು|ಕನ್ನಡಿ|ಯಾದರು .... ಆ ವಿ:ವಿ:ವಿ:ವಿ
ಬೇಲಿಯಿ|ಲ್ಲದ ಬಯಲಿ|ನಲ್ಲಿ .... ಕ ವಿ:ರು:ಬ್ರ
ಒಬ್ಬರ|ನೊಬ್ಬರು|ಒಳಗೊಂಡು|ರಿಬ್ಬರು .... ಅ ವಿ:ವಿ:ವಿ:ವಿ
ಸುರಿವ ಎ|ಳೆ ಬೆಳೆದಿಂಗ|ಳಲ್ಲಿ"[೧೦] .... ಕ ವಿ:ರು:ಬ್ರ

"ಎದೆಯ ಬಾಗಿಲ ತೆರೆದು ಕರಕೊಳ್ಳಿರಿ .... ಬ
ಎಡವುದು ಬ್ಯಾಡ ಹೊಸ್ತಿಲದೊಳಗ .... ಡ
ಮೆಲ್ಲಗ ಮಾತಾಡಿ ಮೈಮ್ಯಾಲ ಕೈ ಇಡರಿ .... ಬ
ವಿಶ್ವಾಸ ಮೂಡಲಿ ಒಳಗೊಳಗ"[೧೧] .... ಡ

ಮೊದಲಿನ ಪದ್ಯವು ಸಾಂಗತ್ಯ ಸಮೀಪ ಮಟ್ಟಾಗಿದೆ. ೨ ಮತ್ತು ೪ನೆಯ ಚರಣಗಳಲ್ಲಿ ೨ನೆಯ ಗಣವೂ ವಿಷ್ಣುಗಣದ ಬದಲಿಗೆ ರುದ್ರಗಣ ಪರ್ಯಾಯವಾಗಿ ಬಂದಿದೆ. ಈ ಮಹಾಕಾವ್ಯದ ಅಂತಪ್ರಾಸವು ಪಾದಗಳ ಅನುಕ್ರಮಣಿಕೆಯಲ್ಲಿ ಹಲವೆಡೆ ಬರುವುದಿಲ್ಲ. ಬದಲಿಗೆ ಎರಡು ಪದ್ಯಗಳಲ್ಲೂ ೧, ೩ ಮತ್ತು ೨, ೪ ನೆಯ ಗಣಗಳಲ್ಲಿ ಅಂತ್ಯಪ್ರಾಸ ಬಂದಿದೆ. ಇದನ್ನು 'ಅರ್ಧಸಮಚತುಷ್ಪದಿಪ್ರಾಸ' ಎನ್ನಬಹುದು. ಈ ಪ್ರಾಸವು ಆಧುನಿಕ ಕಾವ್ಯಗಳಲ್ಲಿ ಕಂಡುಬರುವ ವೈಶಿಷ್ಟ್ಯತೆಗಳಲ್ಲಿ ಒಂದಾಗಿದೆ.

∪ ∪ ∪ – ∪ ∪ ∪ ∪ ∪ – ∪ ∪
ಜನನಿಯೆಂದಳು ಮಗನೆ ನಿನ್ನಯ ೩:೪:೩:೪
∪ ∪ ∪ ∪ ∪ ∪ ∪ – ∪ – ∪ ∪
ಧ್ವನಿಯು ಬಿರಿತುದರಿಂದ ಈಗಳೆ ೩:೪:೩:೪
∪ ∪ ∪ – ∪ ∪ ∪ ∪ ∪ – –
ಮದುವೆಯಾಗುವುದುಚಿತ ಕೇಳ್ಸೈ"[೧೨] ೩:೪:೩:೪

ಚಂದ್ರಶೇಖರ ಕಂಬಾರರ ಸಿರಿಸಂಪಿಗೆಯ ನಾಟಕದಲ್ಲೂ ಭಾಮಿನಿ ಛಂದೋಲಯವನ್ನು ಕಾಣಬಹುದು. ನಾಟಕವಾಗಲೀ, ಕಾವ್ಯವಾಗಲೀ ಕಂಬಾರರ ಕೃತಿಗಳಲ್ಲಿ ಗೇಯತೆಯ ಗುಣ ತೋರುತ್ತದೆ. ಕಾರಣ ಜಾನಪದ ಕವಿಗಳಾಗಿ ಲಯತಾಳ ಮಹತ್ವಗಳ ಅರಿವು ತಿಳಿದಿರುವುದೇ ಆಗಿದೆ.

"ಆಕಾಶದಣೆಕಟ್ಟು ೫:೫
ಒಡೆದಾಂಗ ಜಡಿದಾವು ೫:೫
ನೆಲಮುಗಿಲು ಬೆಸೆದಾವು ಸುರಿಮಳೆಗೆ ೫:೫:೫
ಚಂದಮುತ್ತನ ಹಾಡು ೫:೫
ಮುತ್ತಿನಾ ಮಳೆಯಾಗಿ ೫:೫
ಸುರಿದಾವು ತಂಪಾಗಿ ಭೂಮಿಯ ಧಗೆ"[೧೩] ೫:೫:೫:–

ಈ ಪದ್ಯದ ಮೂರನೆಯ ಚರಣದಲ್ಲಿ ಕೊನೆಗೊಂದು ಗುರು ಇಲ್ಲ. ಉಳಿದ ಎಲ್ಲಾ ಗಣಗಳ ಲಕ್ಷಣವೂ ಕುಸುಮ ಷಟ್ಪದಿಯಾಗಿದೆ. ಆದಿಪ್ರಾಸವನ್ನು ಕಳೆದುಕೊಂಡು ಅಂತ್ಯಪ್ರಾಸವನ್ನು ಅಲ್ಲಲ್ಲಿ ಉಳಿಸಿಕೊಂಡಿದೆ.

U U–U UU–U – U – – U U U
"ಕ್ಷಣನಕ್ಕು।ದಿನವೆಲ್ಲ।ಹುಬ್ಬುಗಂ।ಟಾಗುವನು ೫:೫:೫:೫
U U – U – UUU – U – U U U
ಹೃದಯಕ್ಕೆ।ಬಾಹಿ।ರಳಮಾಡಿ।ನೋಡುವನು ೫:೩:೫:೫
– U U U – U U U – U
ಮುಳ್ಳಿರುವ।ನೋಟ।ಗಳ ಬೀರಿ"[೧೪] ೫:೩:೫

"ಚಂದ್ರನ।ಕಲೆಯಂಥ।ಕಲೆಗಳು।ಮೂಡ್ಯವು ವಿ:ವಿ:ವಿ:ವಿ
ಕಂದನ।ಕೆನ್ನೆ।ಯಲಿ ದಿನವು।ಕಣ್ಣಲ್ಲಿ ವಿ:ಬ್ರ:ರು:ವಿ
ದಣಿದ ಸುಖ।ಆಕ।ಳಿಸತಾವು"[೧೫] ರು:ಬ್ರ:ವಿ

ಅಂಶಗಣಾತ್ಮಕವಾಗಿದ್ದ ತ್ರಿಪದಿಯು ಮಾತ್ರಾಘಟಿತವಾಗಿರುವುದನ್ನು ಮೊದಲನೆಯ ಪದ್ಯದಲ್ಲಿ ಸ್ಪಷ್ಟವಾಗಿ ತಿಳಿಯಬಹುದು. ವಿಷ್ಣುಗಣವು ೫ ಮಾತ್ರೆಯ ಗಣವನ್ನು ಬ್ರಹ್ಮಗಣವೂ ೩ ಮಾತ್ರೆಯ ಗಣವನ್ನು ಹೊಂದಿದೆ. ಎರಡನೆಯ ಪದ್ಯವು ಮಾತ್ರಗಣಕ್ಕೆ ಒಳಪಡದೇ ಅಂಶಗಣಾತ್ಮಕವಾಗಿಯೇ ಇರುವುದನ್ನು ಕಾಣಬಹುದು. ವಿಷ್ಣುಗಣಕ್ಕೆ ಪರ್ಯಾಯ ಗಣವಾಗಿ ರುದ್ರಗಣವೂ ಬಂದಿದೆ.

"ಬೆಳ್ಳಿಮೂಡಿ।ನಾವೆದ್ದು ಒ।ಡ ಮುರಿದೇಳು।ವಷ್ಟರಲ್ಲಿ ೬:೬:೬:೬
ಮುಂಗೋಳಿ।ಕೂಗಿ।ಮೂಡು।ಕೆಂಪಾಗಿ ೫:೩:೩:೫
ತುಂಬಿದ।ಸೋಮವಾರ।ಮಹಾ।ಶಿವರಾತ್ರಿಯ ೪:೬:೩:೬
ಹಗಲು।ಸೂರ್ಯ।ಉದಯ।ವಾದ।ರು"[೧೬] ೩:೩:೩:೩:ಗು

ಮೊದಲನೆಯ ಚರಣ "ಬಲು ಉತ್ಸಾಹದೊಡನೆ ವೇಗವಾಗಿ ಈ ಲಯ ಚಲಿಸುತ್ತದೆ. ಆದ್ದರಿಂದ ಇದಕ್ಕೆ 'ಅಧಿಕೋತ್ಸಾಹ'ವೆಂಬ ಹೆಸರು ತಕ್ಕುದು. ಆವೇಶದ ಅಭಿವ್ಯಕ್ತಿಗೆ ಸರಿಹೋಗುವ ಲಯವಿದು"[೧೭] ಈ ಲಯಕ್ಕೆ ಮಾದರಿ ನೋಡೋಣ.

"ಚೆಲ್ವಿನನೆಲೆ ಕಣ್ಗಳಬಲೆ ಸುಖದೊಜಿತೆಯ ಬನವಾಸೀ ೬:೬:೬:೬
ಬಳೆದಲೆದಾ, ಕಾನ್‌ಮಲೆಗಳನ್, ಆನ್‌ಮಜ್ಜಿವನೆ ಬನವಾಸೀ"[೧೮] ೬:೬:೬:೬

ಚತುಷ್ಪದಿಯಲ್ಲಿ ಮಿಶ್ರಲಯವು ಕಾವ್ಯಕ್ಕೆ ಸೊಬಗನ್ನು ನೀಡುತ್ತದೆ. ಭಾಮಿನಿ ಲಯ ಮತ್ತು ಮಂದಾನಿಲ ಪ್ರಭೇದ ಪ್ರಮುಖವು. ೨ನೆಯ ಚರಣವೂ ಮಂದಾನಿಲ ಪ್ರಭೇದ ಗಣಪಲ್ಲಟಗೊಂಡಿರುವುದನ್ನು ಕಾಣಬಹುದು. (೩:೫:೩:೫ ಮಂದಾನಿಲ ಪ್ರಭೇದದ ಸಾಮಾನ್ಯ ರೂಪ). ಒಟ್ಟಾರೆ ಈ ಪದ್ಯವು ಮಿಶ್ರಲಯ ಚತುಷ್ಪದಿ ಲಕ್ಷಣವನ್ನು ಹೊಂದಿರುವುದನ್ನು ಕಾಣಬಹುದು.

ಆಧುನಿಕ ಕನ್ನಡ ಮಹಾಕಾವ್ಯಗಳಲ್ಲಿ 'ಚಕೋರಿ' ವಿಶಿಷ್ಟ ಛಂದೋಲಯಗಳನ್ನು ಹೊಂದಿರುವ ಮಹತ್ತ್ವದ ಕಾವ್ಯವಾಗಿದೆ. ಚಂದ್ರಶೇಖರ ಕಂಬಾರರು ಮೂಲತಃ

ಜಾನಪದ ವಿದ್ವಾಂಸರು, ಗಾಯಕರು ಆಗಿರುವುದರಿಂದಲೇ ಕಾವ್ಯದಲ್ಲಿ ಗೇಯತೆಗುಣ ಮೇಳೈಸಿದೆ. ಪದಕಟ್ಟುವ ಜಾಣ್ಮೆ ಜಾನಪದ ಶೈಲಿಯ ಅನುಕ್ರಮಣಿಕೆಯಾಗಿದೆ. ಸಂದರ್ಭಕ್ಕೆ ಅನುಗುಣವಾಗಿ ತ್ರಿಪದಿ, ಸಾಂಗತ್ಯ, ಷಟ್ಪದಿ, ಚೌಪದಿ, ಮುಕ್ತ ಛಂದಸ್ಸನ್ನು ಸ್ವಾರಸ್ಯಪೂರ್ಣವಾಗಿ ಹೆಣೆದಿದ್ದಾರೆ.

'ಚಕೋರಿ' ಮಹಾಕಾವ್ಯವು ಸಾಂಪ್ರದಾಯಿಕ ಛಂದೋಬಂಧಗಳ ಬಿಗಿಬಂಧದೊಂದಿಗೆ ಗದ್ಯಪದ್ಯಗಳ ಸಂಮಿಶ್ರಣವಾಗಿದೆ. ಈ ಕಾವ್ಯವು ಸರ್ವಛಂದೋ ಸಮನ್ವಯವನ್ನು ಹೊಂದಿರುವುದರಿಂದ "ಆಧುನಿಕ ಕನ್ನಡದ ಚಂಪೂ ಮಹಾಕಾವ್ಯ" ಎಂದು ಕರೆಯಬಹುದು.

ಇವುಗಳ ಹಿನ್ನೆಲೆಯಲ್ಲಿ ಒಟ್ಟಾರೆ ಛಂದೋಬದ್ಧವಾದ ಕಾವ್ಯಗಳು ಮುಕ್ತ ಛಂದಸ್ಸಿನೆಡೆಗೆ ಸಾಗಿಬಂದಿರುವುದನ್ನು ಸಾಹಿತ್ಯದ ಇತಿಹಾಸದಿಂದ ಗಮನಿಸಬಹುದು. ಅಂತೆಯೇ ಮುಕ್ತ ಛಂದಸ್ಸಿನಿಂದ ಮತ್ತೆ ಛಂದೋಬದ್ಧಕಾವ್ಯದೆಡೆಗೆ ಸಾಹಿತ್ಯ ಮತ್ತೆ ಸಾಗಿ ಭವಿಷ್ಯದಲ್ಲಿ ಛಂದೋಬದ್ಧಕಾವ್ಯ ಸಾಹಿತ್ಯ ಸೃಷ್ಟಿಯಾಗಿ ಅದಕ್ಕೆ ಹೆಚ್ಚಿನ ಪುರಸ್ಕಾರ ಸಿಕ್ಕರೂ ಸಿಗಬಹುದು. ಏಕೆಂದರೆ ಛಂದೋಬದ್ಧ ಸಾಹಿತ್ಯದ ಪ್ರಕಾರವನ್ನು ಒಳ್ಳೆಯ ರಾಗ ಹಾಕಿ ಗಮಕದಲ್ಲಿ ಹಾಡಿದರೆ, ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವುದಷ್ಟೇ ಅಲ್ಲದೆ, ನೆನಪಿಟ್ಟುಕೊಳ್ಳಲು ಸಹ ಸಹಾಯವಾಗುತ್ತದೆ. ಅನೇಕ ಶಬ್ದಗಳಲ್ಲಿ ಹೇಳಬೇಕಾದುದನ್ನು ಕೇವಲ ಕೆಲಪದಗಳಲ್ಲಿಯೇ ಹೇಳಿದರೆ ಶಬ್ದಸೌಷ್ಠವ, ಗೇಯತೆ, ಸಂಕ್ಷಿಪ್ತತೆ, ಭಾವತೀವ್ರತೆ ಹೆಚ್ಚಿ ಹೃದಯಕ್ಕೆ ಹೆಚ್ಚು ಅಪ್ಯಾಯಮಾನವಾಗುತ್ತದೆ.

ಕೊನೆಟಿಪ್ಪಣಿಗಳು

೧. ಸೀತಾರಾಮಯ್ಯ ಎಂ.ವಿ. ಸಂ., ಉದಯಾದಿತ್ಯಾಲಂಕಾರಂ, ಪುಟ ೩೦.
೨. ಡಿ.ಎಲ್.ಎನ್., ಪೀಠಿಕೆಗಳು ಲೇಖನಗಳು, ಪುಟ. ೩೩೪.
೩. ಹೆಗಡೆ ಎಲ್.ಆರ್., ಕಾವ್ಯ ವ್ಯಾಸಂಗ, ಪುಟ. ೩೩.
೪. ಚಂದ್ರಶೇಖರ ಕಂಬಾರ, ಚಕೋರಿ, (ಪ್ರಾರ್ಥನೆ), ಪುಟ. ೧.
೫. ಅದೇ, ಪುಟ. ೪.
೬. ಅದೇ, ಪುಟ. ೧೬.
೭. ಪ್ರಸನ್ನಕುಮಾರ್ ಎಂ, ಶಬ್ದಾವಲೋಕನ, ಪುಟ. ೧೦೦.
೮. ಚಂದ್ರಶೇಖರ ಕಂಬಾರ, ಪೂರ್ವೋಕ್ತ, ಪುಟ. ೭೩.
೯. ಅದೇ, ಪುಟ. ೭೮.
೧೦. ಅದೇ, ಪುಟ. ೮೬.
೧೧. ಅದೇ, ಪುಟ. ೧೧೨.

೧೨. ಚಂದ್ರಶೇಖರ ಕಂಬಾರ, ಸಿರಿಸಂಪಿಗೆ, ಪುಟ. ೧೪.

೧೩. ಚಂದ್ರಶೇಖರ ಕಂಬಾರ, ಚಕೋರಿ, ಪುಟ. ೧೦೯.

೧೪. ಅದೇ, ಪುಟ. ೧೨೬.

೧೫. ಅದೇ, ಪುಟ. ೧೨೬.

೧೬. ಅದೇ, ಪುಟ. ೧೬೮.

೧೭. ಕೃಷ್ಣಕುಮಾರ್ ಸಿ.ಪಿ., ಹಾಮಾನಾ, ಕನ್ನಡ ಛಂದಸ್ಸಿನ ಚರಿತ್ರೆ, ಪುಟ. ೪೧೭.

೧೮. ಬಿ.ಎಂ.ಶ್ರೀ. ಅಶ್ವತ್ಥಾಮನ್, ಪುಟ. ೩೩.

ಪರಾಮರ್ಶನ ಗ್ರಂಥಗಳು

೧. ರಂ.ಶ್ರೀ ಮುಗಳಿ, **ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು**, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೮೫.

೨. ಸೀತಾರಾಮಯ್ಯ ಎಂ.ವಿ. ಸಂ., **ಉದಯಾದಿತ್ಯಾಲಂಕಾರಂ**, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೦.

೩. ಹಾ.ಮಾ.ನಾ, **ಕನ್ನಡ ಸಾಹಿತ್ಯ ಚರಿತ್ರೆ** (ಸಂ. ೨), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೫.

೪. ಚಂದ್ರಶೇಖರ ಕಂಬಾರ, **ಚಕೋರಿ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧.

೫. ರಂ.ಶ್ರೀ. ಮುಗಳಿ, **ಸಾಹಿತೋಪಾಸನ**, ಶಾರದಮಂದಿರ, ಮೈಸೂರು, ೧೯೫೫

೬. ವೆಂಕಟಾಚಲಶಾಸ್ತ್ರೀ ಟಿ.ವಿ., **ಕನ್ನಡ ಛಂದಃ ಸ್ವರೂಪ**, ಡಿ.ವಿ.ಕೆ ಮೂರ್ತಿ, ಮೈಸೂರು, ೨೦೧೧

೭. ಕರ್ಕಿ ಡಿ.ಎಸ್., **ಕನ್ನಡ ಛಂದೋ ವಿಕಾಸ**, ಮುಂಬಯಿ ವಿಶ್ವವಿದ್ಯಾಲಯ, ೧೯೪೯.

೮. ಸೀತಾರಾಮ ಜಾಗೀರ್‌ದಾರ್, **ಛಂದೋರಚನಾ ಸಂಶೋಧನೆಗಳು**, ವೆಂಕಟೇಶ ಪ್ರಕಾಶನ, ಬೆಂಗಳೂರು, ೧೯೮೪.

೯. ಡಿ.ಎಲ್.ಎನ್., **ಪೀಠಿಕೆಗಳು ಲೇಖನಗಳು**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೭೧.

❑❑❑

೩. ಯಶವಂತ ಚಿತ್ತಾಲರ ಕಾದಂಬರಿಗಳು : ಒಂದು ಸಮೀಕ್ಷೆ

– ವರುಣ್ ಎಂ.

ಹೊಸಗನ್ನಡ ಸಾಹಿತ್ಯದಲ್ಲಿ ಅತ್ಯಂತ ವಿಶಿಷ್ಟರೆನಿಸಿಕೊಳ್ಳುವ ಸಾಹಿತಿಗಳಲ್ಲಿ ಯಶವಂತ ಚಿತ್ತಾಲರು ಪ್ರಮುಖರಾಗಿದ್ದಾರೆ. ನವ್ಯ ಕಾದಂಬರಿಗಳ ಸೃಷ್ಟಿಶೀಲ ಪ್ರಯೋಗಶೀಲತೆಯಲ್ಲಿ ಇವರು ಸಾಧಿಸಿರುವ ಸಾಧನೆ ಅನನ್ಯ. ಕಲಾತ್ಮಕ ಅಭಿವ್ಯಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಚಿತ್ತಾಲರು ಬಹುಶಃ ನವ್ಯ ಕಾದಂಬರಿಕಾರರಲ್ಲೇ ಶ್ರೇಷ್ಠರು. ಸೃಜನಶೀಲತೆಯಲ್ಲಿ ಜೀವನದ ಹೊಸ ಸಾಧ್ಯತೆಗಳನ್ನು ಹುಡುಕಲು ತೊಡಗುವುದು ಇವರ ಹೆಚ್ಚುಗಾರಿಕೆ. ಗಾಢವಾದ ಮಾನವ ಸಂಬಂಧಗಳಲ್ಲಿ ಇರಬಹುದಾದ ಸಣ್ಣತನ, ನೋವು, ನಲಿವು, ಸೋಲು, ಹತಾಶೆ, ಅವಮಾನ, ಹಿಂಸೆ ಮುಂತಾದ ಸೂಕ್ಷ್ಮ ಚಿತ್ರಣಗಳನ್ನು ತೆರೆದು ತೋರಿಸುವಲ್ಲಿ ಇವರ ತಂತ್ರಗಾರಿಕೆ ಅದ್ವಿತೀಯವಾದದ್ದು. ಬದುಕು ಮತ್ತು ಸಾವು ಇವರನ್ನು ಕಾಡಿದ ವಸ್ತುಗಳು. ಇವು ಅವರ ಕಥಾಸಾಹಿತ್ಯದಲ್ಲಿ ತಿಳಿದುಬರುವ ಅಂಶ. ವ್ಯಕ್ತಿ ಕೇಂದ್ರಿತ ಗ್ರಹಿಕೆಗಳ ಹಿನ್ನೆಲೆಯಲ್ಲಿ ಸಾಮಾಜಿಕ ಮೌಲ್ಯಗಳನ್ನು ಕುರಿತು ಚರ್ಚಿಸುವ ಇವರ ರೀತಿ ವಿಶಿಷ್ಟಪೂರ್ಣವಾದುದು. ಒಟ್ಟಿನಲ್ಲಿ ವೈಚಾರಿಕ ಚಿಂತನೆ, ನಿಕಟವಾದ ಜೀವನಾನುಭವ, ಬದುಕಿನ ಬಗೆಗಿನ ತೀವ್ರವಾದ ಗ್ರಹಿಕೆ, ಭಾಷೆಯ ಮೇಲಿನ ಹಿಡಿತ ಚಿತ್ತಾಲರ ಹೆಸರನ್ನು ನವ್ಯ ಸಾಹಿತ್ಯದಲ್ಲಿ ಚಾರಿತ್ರಿಕವಾಗಿ ಗಟ್ಟಿಗೊಳಿಸಿದೆ.

“ಇಂದಿನ ಸಮಾಜದಲ್ಲಿ ನಾವು ಮನುಷ್ಯರಾಗಿ ಬಿಚ್ಚಿಕೊಳ್ಳಲು ಆರಿಸಿಕೊಳ್ಳಬಹುದಾದ ಜೀವಂತ ಮಾಧ್ಯಮಗಳಲ್ಲಿ ಸಾಹಿತ್ಯವೂ ಒಂದಾಗಿದೆ. ಮಾತ್ರವಲ್ಲ, ಮನುಷ್ಯ ತನ್ನ ಬದುಕಿನ ನಕಾಶೆಯಲ್ಲಿ ಮೂಡಿಸಿಕೊಳ್ಳಲೇಬೇಕಾದ ಅತ್ಯಂತ ಮೌಲಿಕ ಸಂಗತಿಗಳಲ್ಲಿ ಕೆಲವು ಸಂಗತಿಗಳು ಸಾಹಿತ್ಯದಿಂದ ಮಾತ್ರ ಒದಗಬಲ್ಲಂಥವುಗಳಾಗಿವೆ”[೧] ಎಂದು ತಮ್ಮ ಸೃಜನಶೀಲ ಸಾಹಿತ್ಯದ ಅಭಿವ್ಯಕ್ತಿಯ ಹಿಂದಿನ ಕಾರಣ ಮತ್ತು ಪ್ರೇರಣೆಯನ್ನು ವಿವರಿಸುವ ಚಿತ್ತಾಲರು, ತಮ್ಮ ಬದುಕು–

ಬರಹಗಳೆರಡರಲ್ಲೂ ಅನ್ಯೋನ್ಯ ಸಂಬಂಧವನ್ನು ಸ್ಥಾಪಿಸಿಕೊಂಡಿದ್ದರು. ಮೊದಲಿನಿಂದಲೂ ಇವರ ಸಂವೇದನೆ ಗತಿಶೀಲವಾದದ್ದು. ನಗರ ಬದುಕಿನ ಸಂಕೀರ್ಣತೆ, ಅಲ್ಲಿಯ ಯಾಂತ್ರಿಕ ಜೀವನ, ಮನುಷ್ಯನ ಸಣ್ಣತನ, ಏಕಾಂಗಿತನ, ಸಾವು, ಭ್ರಮೆ, ವಿಕೃತತೆ, ಕ್ರೌರ್ಯ, ನಿರಪರಾಧಿಯ ಯಾತನೆ–ಹೀಗೆ ಎಲ್ಲವೂ ಇವರ ಒಟ್ಟು ಸಾಹಿತ್ಯದಲ್ಲಿ ಪರಿಣಾಮಕಾರಿಯಾದ ಅಭಿವ್ಯಕ್ತಿಯನ್ನು ಪಡೆದಿವೆ. ಫ್ರಾಯ್ಡ್, ಕಾಮೂ, ಎರಿಕ್‌ಫ್ರಾಂ, ಸಾರ್ತ್ರೆ ಮುಂತಾದವರ ಚಿಂತನೆಗಳು ಇವರಲ್ಲಿನ ವೈಚಾರಿಕತೆಗೆ ಹೊಸ ಆಯಾಮವನ್ನು ನೀಡಿವೆ. ಹೀಗಾಗಿ ಚಿತ್ತಾಲರು ನವ್ಯ ಸಾಹಿತ್ಯದಲ್ಲೇ ಒಬ್ಬ ಪ್ರಯೋಗಶೀಲ ಕಾದಂಬರಿಕಾರರಾಗಿ ಗುರುತಿಸಿಕೊಂಡಿದ್ದಾರೆ.

ಯಶವಂತ ಚಿತ್ತಾಲರು ಈವರೆಗೆ ಒಟ್ಟು ಐದು ಕಾದಂಬರಿಗಳನ್ನು ರಚಿಸಿದ್ದಾರೆ. **ಮೂರು ದಾರಿಗಳು(೧೯೬೪), ಶಿಕಾರಿ(೧೯೭೯), ಛೇದ(೧೯೮೫), ಪುರುಷೋತ್ತಮ(೧೯೯೦)** ಮತ್ತು **ಕೇಂದ್ರ ವೃತ್ತಾಂತ(೧೯೯೬)**. ಸನ್ನಿವೇಶ, ವಸ್ತು, ಅಭಿವ್ಯಕ್ತಿ, ತಂತ್ರ, ಘಟನೆ, ಪಾತ್ರ ಮುಂತಾದವುಗಳ ದೃಷ್ಟಿಯಿಂದ ಈ ಕಾದಂಬರಿಗಳೆಲ್ಲವೂ ಹೊಸ ಪ್ರಯೋಗಗಳಿಗೆ ಸಾಕ್ಷಿಯಾಗಿವೆ. ನವೋದಯದ ನಿಶ್ಚಿತ ಮೌಲ್ಯಗಳು, ಪ್ರಗತಿಶೀಲರ ಸಾಮಾಜಿಕ ಪ್ರಜ್ಞೆ ಈ ಎರಡೂ ಅಂಶಗಳು ಇವರ ಕಾದಂಬರಿಗಳಲ್ಲಿ ಅರ್ಥಪೂರ್ಣವಾಗಿ ಪ್ರಯೋಗಗೊಂಡಿರುವುದು ಗಮನಾರ್ಹವಾದ ಅಂಶಗಳಾಗಿವೆ. ಚಿತ್ತಾಲರ ಅಖಂಡ ಜೀವನಾನುಭವ, ವಿಜ್ಞಾನದ ಅಭ್ಯಾಸದ ಹಿನ್ನೆಲೆ, ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಸಾಹಿತ್ಯದ ಅಧ್ಯಯನ, ಮನಶ್ಶಾಸ್ತ್ರ, ಮಾನವಶಾಸ್ತ್ರ, ಅರ್ಥಶಾಸ್ತ್ರ ಮುಂತಾದ ಅಧ್ಯಯನ ಕ್ಷೇತ್ರಗಳ ಪರಿಚಯ ಇವೆಲ್ಲವೂ ಇವರ ಒಟ್ಟು ಕಾದಂಬರಿಗಳಿಗೆ ಮೂಲ ದ್ರವ್ಯಗಳಾಗಿವೆ.

೧೯೬೪ರಲ್ಲಿ ಪ್ರಕಟಗೊಂಡ **'ಮೂರು ದಾರಿಗಳು'** ಚಿತ್ತಾಲರ ಮೊದಲ ಕಾದಂಬರಿಯಾಗಿದೆ. ಇದು ಸಿನಿಮಾ ಆಗಿಯೂ ಸಾಕಷ್ಟು ಪ್ರಶಂಸೆಗೆ ಪಾತ್ರವಾಗಿದೆ. ಹನೇಹಳ್ಳಿಯ ಪ್ರಾದೇಶಿಕ ವಿವರಗಳು, ಅಲ್ಲಿನ ರೂಢಿಗತ ಸಂಪ್ರದಾಯ, ಮಧ್ಯಮ ವರ್ಗದವರ ಸಂಸ್ಕೃತಿ, ಗ್ರಾಮ ಸಮಾಜದ ಸಂಕುಚಿತ ಭಾವನೆಗಳು ಇಲ್ಲಿ ಸೂಕ್ಷ್ಮವಾಗಿ ವ್ಯಕ್ತವಾಗಿದ್ದು, ಇದೊಂದು ಅಪ್ಪಟ 'ಹನೇಹಳ್ಳಿ ಕಾದಂಬರಿ'ಯಾಗಿ ಮೂಡಿಬಂದಿದೆ. ಚಿತ್ತಾಲರೇ ಹೇಳುವಂತೆ "ಉದ್ಭವಿಸಿದ ಒಂದು ಪ್ರಶ್ನೆಯನ್ನು ಬಿಡಿಸಲು ಮೂರು ವಿಭಿನ್ನ ಪ್ರಕೃತಿಯ ವ್ಯಕ್ತಿಗಳು ಕಂಡುಕೊಂಡ ದಾರಿಗಳು; ಇವು ಇವರು ಬದುಕನ್ನು ಎದುರಿಸುವ ರೀತಿಗಳೂ ಹೌದು; ಭೀತಿ, ಪ್ರೀತಿ, ಬಂಡಾಯ (ಆತ್ಮನಾಶ)– ಇವುಗಳ ಸೆಲೆ ಇವರ ವ್ಯಕ್ತಿತ್ವದ ಗರ್ಭದಲ್ಲಿ ಇವರು ಬೆಳೆದ ಪರಿಸರದ ಮಹತ್ವ ಇವರ ವ್ಯಕ್ತಿತ್ವ ರೂಪುಗೊಂಡ ರೀತಿಯನ್ನು ತಿಳಿಯುವಷ್ಟರ ಮಟ್ಟಿಗೆ ಮಾತ್ರ"[೨]

ಎಂಬ ಮಾತು ಕಾದಂಬರಿಯ ಸ್ಥೂಲ ರೂಪವನ್ನು ಹೇಳುತ್ತದೆ. ಈ ಮಾತನ್ನು ಸಮರ್ಥಿಸುವ ಹಾಗೆ ಕಾದಂಬರಿಯು 'ಹೆಜ್ಜೆ ಮೂಡದ ಹಾದಿಯಲ್ಲಿ', 'ತಥಾಸ್ತು ಎಂದಿತ್ತು ಪ್ರೀತಿ', 'ಸಿಡಿಮದ್ದಿನ ವಾಸನೆ' ಮತ್ತು 'ಕಾಲ ಸರಿದಂತೆ' ಎಂಬ ನಾಲ್ಕು ಶೀರ್ಷಿಕೆಗಳಲ್ಲಿ ವಿಂಗಡಿಸಲ್ಪಟ್ಟಿದೆ. ಈ ನಾಲ್ಕು ಭಾಗಗಳಲ್ಲಿ ಒಂದೊಂದು ಪಾತ್ರಕ್ಕೆ ಪ್ರಾಮುಖ್ಯತೆ ಸಿಗುವಂತೆ ಕಥಾನಕವನ್ನು ನಿರೂಪಿಸಲಾಗಿದೆ. ವಿಶ್ವನಾಥ ಶಾನಭಾಗ, ವಾಸುದೇವ ಮತ್ತು ನಿರ್ಮಲೆ ಈ ಮೂರು ಪಾತ್ರಗಳು ಉದ್ಭವಿಸಿದ ಸಮಸ್ಯೆಯೊಂದನ್ನು ಮೂರು ಭಿನ್ನ ನೆಲೆಗಳಲ್ಲಿ ಅರ್ಥೈಸಿಕೊಳ್ಳುವುದನ್ನು ಸಾಮಾಜಿಕ ಜಿಜ್ಞಾಸೆಗೆ ಗುರಿಪಡಿಸುವುದೇ ಇಲ್ಲಿನ ಉದ್ದೇಶವಾಗಿದೆ.

ಹನೇಹಳ್ಳಿಯ ವಿಶ್ವನಾಥ ಶಾನಭಾಗರ ಒಬ್ಬಳೇ ಮಗಳು ನಿರ್ಮಲೆ. ಇವಳು ಕಾರವಾರದ ತನ್ನ ಸೋದರತ್ತೆ ಚಂದ್ರಭಾಗಿಯ ಮನೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ಅದೇ ಊರಿನ ಲಫಂಗ ಫೋಟೋಗ್ರಾಫರ್ ರಂಗಪ್ಪನೊಂದಿಗೆ ಇವಳ ಸಂಬಂಧವಿದೆ ಎಂಬ ಸುದ್ದಿ ಊರಲ್ಲೆಲ್ಲಾ ಹರಡುತ್ತದೆ. ಇದು ವಿಶ್ವನಾಥರಲ್ಲಿ ಭೀತಿಯನ್ನು ಹುಟ್ಟಿಸುವುದಲ್ಲದೇ, ತಮ್ಮ ಮನೆತನದ ಮರ್ಯಾದೆಗೆ ಅಂಜಿ, ಹೆರವಟ್ಟೆಯ ವಾಸುದೇವನೆಂಬ ಶಿಕ್ಷಕನೊಂದಿಗೆ ನಿರ್ಮಲೆಯ ವಿವಾಹವನ್ನು ನಿಶ್ಚಯಿಸುತ್ತಾರೆ. ವಾಸುದೇವನ ಔದಾರ್ಯ ತುಂಬಿದ ನಡೆ ಅಪಮಾನದ ಸಂಗತಿಯಾಗಿ ನಿರ್ಮಲೆಯನ್ನು ಕಾಡುತ್ತದೆ. ಸಮಾಜದಲ್ಲಿ ತನ್ನ ವಿರುದ್ಧ ಕೆಟ್ಟ ಸುದ್ದಿ ಹರಡಲು ಕಾರಣನಾದ ರಂಗಪ್ಪನನ್ನು, ತನ್ನನ್ನು ಆರೋಪಿಯನ್ನಾಗಿ ಪರಿಗಣಿಸಿದ್ದ ಸಮಾಜವನ್ನು, ಸತ್ಯಾಸತ್ಯತೆಯ ವಿಚಾರ ತಿಳಿಯದೆ ಮಗಳಿಗಂಟಿದ ಕಳಂಕವನ್ನು ಹೋಗಲಾಡಿಸಲು ವಿವಾಹ ಮಾಡಲು ಆತುರದ ನಿರ್ಧಾರವನ್ನು ಕೈಗೊಂಡ ವಿಶ್ವನಾಥರ ಕ್ರಮವನ್ನು ಹಾಗೂ ಸಹಾನುಭೂತಿಯಿಂದ ಮಾತ್ರ ವಿವಾಹವಾಗಲು ಮುಂದೆ ಬಂದ ವಾಸುದೇವನನ್ನು ವಿರೋಧಿಸುತ್ತಾ ನಿರ್ಮಲೆ, ಆತ್ಮನಾಶದ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುವುದೇ ಕಾದಂಬರಿಯ ವಸ್ತುವಾಗಿದೆ.

ಮುಗ್ಧ ಹುಡುಗಿಯೊಬ್ಬಳನ್ನು ಶೋಷಣೆಗೊಳಪಡಿಸಿದ ಸಮಾಜದ ಕ್ರೌರ್ಯ, ಸಂಪ್ರದಾಯನಿಷ್ಠ ಮನೆತನದಲ್ಲಿ ಆಗುವ ದುರಂತ, ಅತೀ ಮಾನವೀಯತೆಯಿಂದಾಗುವ ಅನಾಹುತ ಇವೆಲ್ಲವೂ ಈ ಕಾದಂಬರಿಯಲ್ಲಿ ವಿಶಿಷ್ಟವಾಗಿ ಮೈತಾಳಿವೆ. ಈ ಕಾದಂಬರಿಯ ಬಗ್ಗೆ ಶ್ರೀರಂಗರ ಹೆಮ್ಮೆಯ ನುಡಿಗಳು ಹೀಗಿವೆ; "ಮೊದಲ ಕಾದಂಬರಿ ಎಂಬ ದೃಷ್ಟಿಯಿಂದ ಲೇಖಕರು ಹೆಮ್ಮೆಪಡುವಂತಿದೆ; ಬರಲಿರುವ ಕಾದಂಬರಿಗಳ ಸೂಚಕ ದೃಷ್ಟಿಯಿಂದ ಓದುಗರು ಹೆಮ್ಮೆಪಡುವಂತಿದೆ. ದಕ್ಷಿಣ ಕನ್ನಡದ ಜೀವನವನ್ನು ಚಿತ್ರಿಸಿದ ಕಾರಂತರ ಸ್ಥಾನಕ್ಕೆ ಉತ್ತರ ಕನ್ನಡದ ಜೀವನವನ್ನು ಚಿತ್ರಿಸಿದ ಚಿತ್ತಾಲರು ಸ್ಪರ್ಧಿಗಳಾಗಬಲ್ಲರು."[೩]

'ಮೂರು ದಾರಿಗಳು' ಪ್ರಕಟಗೊಂಡ ಹದಿನಾಲ್ಕು ವರ್ಷಗಳ ನಂತರ ಪ್ರಕಟಗೊಳ್ಳುವ **'ಶಿಕಾರಿ'** ಚಿತ್ತಾಲರ ಎರಡನೆಯ ಕಾದಂಬರಿಯಾಗಿದೆ. ಇಲ್ಲಿ ಮನುಷ್ಯನು ಮನುಷ್ಯನನ್ನು 'ಶಿಕಾರಿ'ಯಾಡುವ ನಗರ ಬದುಕಿನ ಕ್ರೌರ್ಯದ ಅನಾವರಣವಿದೆ. ಪ್ರೊ.ನಾಗನಾಥ(ನಾಗಪ್ಪ) ಎಂಬ ಕಥಾನಾಯಕನ ಹೆಸರಿನಲ್ಲಿ ಮುಂದುವರೆಯುವ ಈ ಕಾದಂಬರಿ ಹಲವು ಅಸ್ಮಿತೆಗಳನ್ನು ಪ್ರಶ್ನಿಸುತ್ತಲೇ ವಿಸ್ತೃತ ವ್ಯವಸ್ಥೆಯನ್ನು ಪರಾಮರ್ಶಿಸುತ್ತದೆ. ಮುಂಬೈನ ಮಹಾನಗರದ ಬದುಕು, ವೃತ್ತಿ ಜೀವನದಲ್ಲಿ ಎದುರಾಗುವ ಆತಂಕಗಳು, ನೌಕರಶಾಹಿಯಲ್ಲಿನ ಮತ್ಸರ; ಸ್ವಾರ್ಥದ ಕರಿನೆರಳು; ಪ್ರೀತಿಯ ಮುಖವಾಡದ ಹಿನ್ನೆಲೆಯಲ್ಲಿರುವ ಕ್ರೌರ್ಯದ ಮುಖಗಳು ಈ ಎಲ್ಲವುಗಳೊಂದಿಗೆ ಪರಸ್ಪರ ಸೆಣಸುತ್ತಲೇ ತನ್ನ ಅಸ್ತಿತ್ವದ ಬೇರುಗಳನ್ನು ಖಚಿತಪಡಿಸಿಕೊಳ್ಳಲು ಯತ್ನಿಸುವುದೇ ಇಲ್ಲಿನ ಕಥಾವಸ್ತು.

ಶಿಕಾರಿಯ ಕಾರ್ಯಕ್ಷೇತ್ರ ಮುಂಬಯಿ. ನಾಗಪ್ಪ ಮತ್ತು ಶ್ರೀನಿವಾಸ ಈ ಕಾದಂಬರಿಯ ಮುಖ್ಯಪಾತ್ರಗಳು. ಕಂಪನಿಯ ರಾಸಾಯನಿಕ ಘಟಕವೊಂದಕ್ಕೆ ಬಿದ್ದ ಬೆಂಕಿಯ ಗಂಭೀರ ಆಪಾದನೆಯ ಕಾರಣದಿಂದ ನಾಗಪ್ಪನನ್ನು ಕೆಲಸದಿಂದ ಸಸ್ಪೆಂಡ್ ಮಾಡುವ ಕಾರ್ಯದಿಂದ ಕಾದಂಬರಿ ಆರಂಭಗೊಳ್ಳುತ್ತದೆ. ಆ ದಿನಗಳಲ್ಲೇ ತನ್ನ ಬಾಲ್ಯದ ಪ್ರತಿಸ್ಪರ್ಧಿಯಾದ ಶ್ರೀನಿವಾಸನ ಚಾರಿತ್ರ್ಯದ ಕುರಿತು ಕಾದಂಬರಿ ಬರೆಯಲು ತೊಡಗಿದ್ದ ನಾಗಪ್ಪನಿಗೆ ಎದುರಾಗುವುದು ಬಂಡವಾಳಶಾಹಿ ವ್ಯವಸ್ಥೆಯ ಮೃತ್ಯುಸದೃಶ ಕ್ರೌರ್ಯಗಳು ಹಾಗೂ ಕುಲಮೂಲದ ಪ್ರಶ್ನೆಗಳು. ಜೊತೆಗೆ ಆತನ ಮೇಲೆ ಆರಂಭಗೊಳ್ಳುವ ಇಲಾಖಾ ತನಿಖೆ. ಇವೆಲ್ಲವುಗಳು ನಾಗಪ್ಪನನ್ನು ಅಧೀರನನ್ನಾಗಿಸುತ್ತವೆ; ಆತನಲ್ಲಿ ಅವ್ಯಕ್ತವಾದ ಭಯವನ್ನು, ಆತಂಕವನ್ನು ಸೃಷ್ಟಿಸುತ್ತವೆ. ಮೇಲಾಧಿಕಾರಿಗಳ ಪ್ರತಿಷ್ಠೆಯ ಚದುರಂಗದಾಟದಲ್ಲಿ ನಾಗಪ್ಪ ಬಲಿಪಶುವಾಗುತ್ತಾನೆ; ಬೇಟೆಗಾರರ ಕುತಂತ್ರಕ್ಕೆ ಮಣಿಯುತ್ತಾನೆ. ಪರಿಣಾಮ ಕೆಲಸಕ್ಕೆ ರಾಜೀನಾಮೆಯನ್ನು ಸಲ್ಲಿಸುತ್ತಾನೆ. ತಾನು ರಾಜೀನಾಮೆ ಕೊಟ್ಟಿದ್ದು ಬರಿಯ ನೌಕರಿಗಲ್ಲ, ನಮ್ಮ ನಮ್ಮ ಸ್ವಾರ್ಥಕ್ಕಾಗಿ, ಭಯಗಳಿಗಾಗಿ ಒಬ್ಬರನ್ನೊಬ್ಬರು ಉಪಯೋಗಿಸಿಕೊಳ್ಳುವಂತೆ ಮಾಡುವ ಈ ವ್ಯಾವಹಾರಿಕ ಲೋಕಕ್ಕೆ ಎಂದು ವಿಷಾದಿಸುತ್ತಾನೆ. ಕೊನೆಗೆ ನೌಕರಿಯಿಲ್ಲದೆ ಒಂಟಿಯಾಗಿದ್ದುಕೊಂಡೇ ಬದುಕಬಹುದೆಂಬುದನ್ನು ತೋರಿಸುತ್ತಾನೆ. ದ್ವೇಷ, ಅಸೂಯೆ, ಪೈಪೋಟಿ, ಭ್ರಷ್ಟಾಚಾರದ ಜಗತ್ತಿನಿಂದ ದೂರಾಗಿ ಪ್ರೀತಿಯ ನೆಲೆಯ ತಾಣಗಳನ್ನು ಹುಡುಕಿ ನಡೆಯುತ್ತಾನೆ. "ಶಿಕಾರಿ ಒಬ್ಬ ವ್ಯಕ್ತಿಯ ಬೆಳವಣಿಗೆಯನ್ನು ಅಪ್ರಬುದ್ಧತೆಯಿಂದ ಪ್ರಬುದ್ಧತೆಯ ಕಡೆಗೆ ಸಾಗಿದವನ ಹೆಜ್ಜೆ ಗುರುತುಗಳನ್ನು ಚಿತ್ರಿಸುವ ಮಟ್ಟಿಗೆ ಯಂಗ್‌ನ Individuation ಪರಿಕಲ್ಪನೆ ಅದರ ಸೃಷ್ಟಿಕಾರ್ಯದ ಒಳತಿರುಳಾಗಿದೆಯೆನ್ನಬಹುದು"[೪] ಎಂದು ಸ್ವತಃ ಚಿತ್ತಾಲರೇ ಕಾದಂಬರಿಯ

ಮೂಲಸೆಲೆಯನ್ನು ತಿಳಿಸುತ್ತಾರೆ. ಕಾದಂಬರಿಯ ತಂತ್ರ ಒಳಗೊಳ್ಳುವುದು ನಾಗಪ್ಪನ ಬದುಕಿನ ನೆಲೆಗಳನ್ನು ವಿಶಿಷ್ಟವಾಗಿ ಅನಾವರಣಗೊಳಿಸುವುದರಲ್ಲಿ ವ್ಯಕ್ತಗೊಳ್ಳುತ್ತದೆ. ಸಾಮಾನ್ಯವಾದ ಕಥಾಹಂದರವನ್ನು ವಿಶಿಷ್ಟ ತಂತ್ರಗಾರಿಕೆಯ ಹಿನ್ನೆಲೆಯಲ್ಲಿ ಹಿಡಿದಿಟ್ಟಿರುವುದು ಚಿತ್ತಾಲರ ಪ್ರತಿಭೆಯನ್ನು ಅನನ್ಯಗೊಳಿಸಿದೆ.

'ಛೇದ' ಚಿತ್ತಾಲರ ಮೂರನೆಯ ಕಾದಂಬರಿ. ಉಳಿದ ಕಾದಂಬರಿಗಳಿಗಿಂತ ಇದೇ ತುಂಬ ಚಿಕ್ಕಗಾತ್ರದ್ದು (೧೨೦ ಪುಟಗಳು). ಕಾದಂಬರಿಯ ವಸ್ತು ಒಂದು ಭೀಕರ ಕೊಲೆ ಮತ್ತು ಆ ಕೊಲೆಯನ್ನು ಕಣ್ಣಾರೆ ಕಂಡ ಯುವಕನೊಬ್ಬನ ತಲ್ಲಣ. ಇಂಥ ಭೀಕರ ಕೊಲೆಗೆ ತುತ್ತಾದವನು ಯಾರೆಂಬುದರ ರಹಸ್ಯ ಕಾದಂಬರಿಯ ಕೊನೆಯ ಹಂತದವರೆಗೆ ರಹಸ್ಯವಾಗಿ ಉಳಿಯುವುದರ ನೆಲೆಯಿಂದಲೇ ವಿಚಿತ್ರವಾದ ಸಂಬಂಧಗಳೆಲ್ಲ ಸೃಷ್ಟಿಗೊಳ್ಳುವುದು ಈ ಕಾದಂಬರಿಯ ವಿಶೇಷತೆ. ಮನುಷ್ಯ ಸೃಷ್ಟಿಸಿದ ಸಾಮಾಜಿಕ ವ್ಯವಸ್ಥೆಯಲ್ಲಿ ಮನುಷ್ಯನೇ ಸಿಕ್ಕಿಬಿದ್ದು ತೊಳಲಾಡುವ ದುರಂತ ವಿಪರ್ಯಾಸವನ್ನು ಇಲ್ಲಿ ಕಾಣುತ್ತೇವೆ. "'ಛೇದ' ಕೊಲೆಯೊಂದರ ಸುತ್ತ ಹೆಣೆದ ಕಾದಂಬರಿಯೆಂದು ಮೇಲುನೋಟಕ್ಕೆ ಅನ್ನಿಸಿದರೂ ಅದೇ ಅದರ ಮುಖ್ಯ ಆಶಯವಾಗಿಲ್ಲ. ಕೊಲೆಗಿಂತ ಹೆಚ್ಚಾಗಿ ಅದು ಈ ಕಾದಂಬರಿಯ ವಿವಿಧ ಪಾತ್ರಗಳ ಮೇಲೆ ಉಂಟುಮಾಡುವ ಪರಿಣಾಮ, ಈ ಕೊಲೆಯ ನಿಮಿತ್ತದಿಂದ ಹುಟ್ಟಿಕೊಳ್ಳುವ ಭೇಟಿಗಳು, ಈ ಭೇಟಿಗಳಲ್ಲಿ ವ್ಯಕ್ತವಾಗುವ ಸಂವಾದದ, ಸಂಪರ್ಕದ ಬಿಕ್ಕಟ್ಟುಗಳು, ಈ ಬಿಕ್ಕಟ್ಟಿನಿಂದ ಮೂಡಿಬರುವ ಬದುಕಿನ ಸತ್ಯಗಳು ಚಿತ್ತಾಲರಿಗೆ ಮುಖ್ಯವಾಗಿದೆ."[3]

ಕೇರಳದ ಕರುಣಾಕರನ್ ಪತ್ರಿಕೋದ್ಯಮಕ್ಕೆ ಸೇರಿ, ಕೊಲೆಯಾಗಿರಬಹುದೆಂದು ನಿರೀಕ್ಷಿಸಲಾಗಿದ್ದ ತನ್ನ ಅಣ್ಣ ವಾಸುದೇವನನ್ನು ಅನ್ವೇಷಿಸುತ್ತಾ, ಈ ಕಾರಣವಾಗಿ ಸುದೀರ್ಘ ಸೇವೆಯಿಂದ ಇನ್ನೇನು ನಿವೃತ್ತನಾಗಲಿರುವ ಬೆಹರಾಮ್ ಕೀಕೀ ಪೋಚಖಾನವಾಲರನ್ನು ಸಂಧಿಸುವುದರೊಂದಿಗೆ ಕಾದಂಬರಿ ಬಿಚ್ಚಿಕೊಳ್ಳುತ್ತದೆ. ಇಲ್ಲಿ ಕೊಲೆಯಾಗಿರಬಹುದಾದ ವ್ಯಕ್ತಿಗಿಂತ, ಅದನ್ನು ನಿಮಿತ್ತವಾಗಿಟ್ಟುಕೊಂಡು ಸೃಷ್ಟಿಯಾಗುವ ಸನ್ನಿವೇಶ ಭೀಕರವಾಗುತ್ತಾ ಹೋಗುತ್ತದೆ. ಪರಿಣಾಮ ಇದರಿಂದ ಬಾಧಿತರಾದ ವ್ಯಕ್ತಿಗಳು ಸಂಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಸನ್ನಿವೇಶದ ಕಠೋರತೆ ಎಷ್ಟಿತ್ತೆಂದರೆ ಕೊನೆಗೆ ಬೆಹರಾಮ್ ತನ್ನದಲ್ಲದ ತಪ್ಪಿಗೆ ಸಾಯಬೇಕಾಗುತ್ತದೆ. ಮುಂಬೈನ ಕ್ರೌರ್ಯ ತುಂಬಿದ ಕರಾಳ ಬದುಕು ವೃದ್ಧನೊಬ್ಬನ ಅಸ್ತಿತ್ವವನ್ನೆ ಅಲ್ಲಾಡಿಸುವ ಪ್ರಸಂಗಕ್ಕೆ ಈ ಕಾದಂಬರಿ ಸಾಕ್ಷಿಯಾಗುತ್ತದೆ.

ಚಿತ್ತಾಲರ ಸಾಹಿತ್ಯದ ಮೇಜರ್‌ಥೀಮ್ ಆದ 'ನಿರಪರಾಧಿಯ ಯಾತನೆ' ಬಹಳ ಸ್ಪಷ್ಟವಾಗಿ ಈ ಕಾದಂಬರಿಯಲ್ಲಿ ಅನಾವರಣಗೊಂಡಿದೆ. ಕೊಲೆಗೆ ತುತ್ತಾದ

ವ್ಯಕ್ತಿ ಮಾತ್ರ ಅಂತಿಮ ಭಾಗದವರೆಗೂ ನಿಗೂಢವಾಗಿ ಉಳಿಯುವುದು ಕಾದಂಬರಿಯ ವಿಶಿಷ್ಟ ತಂತ್ರವೆನಿಸುತ್ತದೆ. ಕೊಲೆಯನ್ನು ಕಣ್ಣಾರೆ ಕಂಡ ವ್ಯಕ್ತಿಯೊಬ್ಬನ ಸುತ್ತ ಬಿಚ್ಚಿಕೊಳ್ಳುವ ವಿಚಿತ್ರ ಮನುಷ್ಯ ಸಂಬಂಧಗಳು; ಕೊಲೆಯಾಗಿರುವೆನೆಂದು ಬರುವ ಅನಾಮಿಕ ಪತ್ರಗಳು; ಅದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಹೊರಡುವ ಯುವಕ; ಇವನ ಬೆನ್ನು ಹತ್ತುವ ಆಗಂತುಕ ಪಡೆ; ಈ ಯುವಕನನ್ನು ರಕ್ಷಿಸಲು ತನ್ನ ಮಾನಸಿಕ ನೆಮ್ಮದಿ ಹಾಳು ಮಾಡಿಕೊಳ್ಳುವ ಪಾರಸೀ ಮುದುಕ ಬೆಹರಾಮ್; ಇದ್ದಕ್ಕಿದ್ದಂತೆ ಎದುರಾಗುವ ಗೌರೀಪ್ರಸಾದ ಅಗರವಾಲ್–ಹೀಗೆ ಹಲವು ಘಟನೆ, ಸನ್ನಿವೇಶಗಳು ಆಧುನಿಕ ನಗರಗಳಲ್ಲಿ ಉದ್ಭವಗೊಂಡ ವ್ಯಕ್ತಿಯ ಬದುಕಿನ ಇಕ್ಕಟ್ಟು–ಬಿಕ್ಕಟ್ಟುಗಳನ್ನು ಹಾಗೂ ತಲ್ಲಣಗೊಳಿಸುವ ಭಯದ ನೆಲೆಗಳನ್ನು ಕಾದಂಬರಿ ಅನಾವರಣಗೊಳಿಸುತ್ತದೆ. ಪತ್ತೇದಾರಿಕೆಯ ಕುತೂಹಲವನ್ನು ಕೊನೆಯವರೆವಿಗೂ ಹಿಡಿದಿಟ್ಟುಕೊಳ್ಳುವುದರೊಂದಿಗೆ ಓದುಗರ ಕಲ್ಪನೆಯು ವಿಸ್ತಾರಗೊಳ್ಳುವಂತೆ ಮಾಡುವ ಈ ಕಾದಂಬರಿಯು ಚಿತ್ತಾಲರ ಹೊಸ ಪ್ರಯೋಗಗಳಿಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಹಾಗೆ ನೋಡಿದರೆ " 'ಛೇದ' ಚಿತ್ತಾಲರ ಕಾದಂಬರಿಗಳ ಸಂದರ್ಭದಲ್ಲಿ ಮಾತ್ರವಲ್ಲ, ಒಟ್ಟೇ ಅವರ ಸೃಜನಶೀಲ ಬದುಕಿನ ಸಂದರ್ಭದಲ್ಲಿ ಒಂದು ಅರ್ಥಪೂರ್ಣ, ಮುಂದುವರೆದ ಘಟ್ಟವನ್ನು ಸಾಂಕೇತಿಸುತ್ತದೆ. ಇಲ್ಲಿ ಬರುವ ಪಾತ್ರಗಳು ಕತೆ ಬರೆಯುವ ಇಲ್ಲವೆ ಕತೆ ಹೇಳುವ ಅಭಿವ್ಯಕ್ತಿಯ ಒಂದು ವಿಶಿಷ್ಟ ಕ್ರಮದ ಸೌಂದರ್ಯಾತ್ಮಕ ಪ್ರಶ್ನೆಗಳನ್ನೇನೂ ಎದುರಿಸುವುದಿಲ್ಲ. ಯಾವುದೋ ಸಂದರ್ಭದಲ್ಲಿ ಮುಖಾಮುಖಿಯಾಗುವ ಇವರು ತಾವು ಯಾವುದೋ ರಹಸ್ಯದ ಬೆನ್ನಟ್ಟಿ ಹೋಗುತ್ತಿದ್ದೇವೆಂದು ಅಂದುಕೊಳ್ಳುತ್ತಿರುವ ಪರಿಕ್ರಮದಲ್ಲೇ ಇತರರನ್ನು ಅರ್ಥಮಾಡಿಕೊಳ್ಳುವ, ತಮ್ಮನ್ನು ಇತರರಿಗೆ ಅರ್ಥಮಾಡಿಸುವ ಪ್ರಾಥಮಿಕ ಹಂತದಲ್ಲೇ ಎಡವಿ ಬೀಳುತ್ತಿರುವುದನ್ನು ಗ್ರಹಿಸುತ್ತಾ ಹೋಗುತ್ತಾರೆ."[೬]

೧೯೯೦ರಲ್ಲಿ ಪ್ರಕಟಗೊಂಡ **'ಪುರುಷೋತ್ತಮ'** ಚಿತ್ತಾಲರ ನಾಲ್ಕನೆಯ ಕಾದಂಬರಿಯಾಗಿದೆ. ಸುಮಾರು ೬೦೦ ಪುಟಗಳನ್ನೊಳಗೊಂಡಿರುವ ಬೃಹತ್ ಎನಿಸಿರುವ ಈ ಕಾದಂಬರಿಯನ್ನು ಕುರಿತಂತೆ ಸ್ವತಃ ಚಿತ್ತಾಲರು "ಪುರುಷೋತ್ತಮ ವೈಯಕ್ತಿಕವಾಗಿ ನನಗೆ ಬಹಳ ಸಂತೋಷ ಕೊಟ್ಟ ಕೃತಿ. ಬರೆಯುವ ಉತ್ಸಾಹ ಹೆಚ್ಚಿಸಿದ ಇದನ್ನು ನನ್ನ ಸಾಹಿತ್ಯಕ ಜೀವಮಾನದ ಶಿಖರಪ್ರಾಯ ಕೃತಿಯೆಂದು ತಿಳಿಯುತ್ತೇನೆ"[೭] ಎಂದು ಅಭಿಮಾನದಿಂದ ಹೇಳಿಕೊಂಡಿದ್ದಾರೆ. ಮುಂದುವರಿದು ಸೃಜನಶೀಲತೆಯ ಸರ್ವಸ್ವವನ್ನು ಧಾರೆಯೆರೆದು ಬರೆದ ಕೃತಿ ಇದು ಎಂದು ಮುನ್ನುಡಿಯಲ್ಲಿ ಬರೆದುಕೊಂಡಿದ್ದಾರೆ. 'ಶಿಕಾರಿ', 'ಛೇದ', 'ಕೇಂದ್ರ ವೃತ್ತಾಂತ'ದಂತೆ

ಇದು ಕೂಡ ಮುಂಬಯಿ ನಗರದ ಸಂಕೀರ್ಣ ಬದುಕನ್ನು ಕೇಂದ್ರೀಕರಿಸಿಕೊಂಡಿದ್ದರೂ ಉಳಿದೆರೆಡು ಕೃತಿಗಳಿಗಿಂತ ಗಾತ್ರ, ವಿಸ್ತಾರ, ಉದ್ದೇಶ ಹಾಗೂ ಜೀವನದರ್ಶನದಲ್ಲಿ ಭಿನ್ನವಾಗಿದೆ.

" 'ಪುರುಷೋತ್ತಮ'– ತಲೆಮಾರುಗಳ ಕಥೆ, ತಲೆ ಮಾರಿಕೊಂಡವರ ಕಥೆ ಅಥವಾ ತಲೆಗಾಗಿ ಹೃದಯ ಮಾರಿಕೊಂಡವರ ಕಥೆ. ಕನಸು ಕಳಕೊಂಡ ಇಂದಿನ ಭಯಾನಕ ಲೋಕದ ಉಳಿವಿನ ಏಕೈಕ ದಾರಿ ಹೃದಯದ್ದು– ತಲೆಯ ಹಂಗಿಲ್ಲದ ಹೃದಯದ್ದು ಎಂಬುದನ್ನು ಮನಗಾಣುವ ಕಥೆ"ಯಾಗಿದೆ. ಸುಮಾರು ಮುಕ್ಕಾಲು ಶತಮಾನಕ್ಕಿಂತ ಹಿಂದಿನ, ನಾಲ್ಕು ತಲೆಮಾರುಗಳ ಘಟನೆಗಳನ್ನೊಳಗೊಂಡ ಈ ಕೃತಿಯು ದಾಯಾದಿ ಮತ್ಸರವನ್ನು ಕುರಿತು ಹೇಳುತ್ತದೆ.

ಪಿತ್ರಾರ್ಜಿತ ಆಸ್ತಿಯಾದ ಮನೆಯೊಂದನ್ನು ಖರೀದಿಸಲು ಹಾತೊರೆಯುವ ವ್ಯಕ್ತಿಗಳ ಚಿತ್ರಣ(ಮಂಜುನಾಥ, ವೆಂಕಟದಾಸೂ, ರಾಮನಾಥಾನಿ ಮೊದಲಾದವರು) ಹಾಗೂ ತನ್ನ ಮನೆಯನ್ನು ಪ್ರೀತಿಸುವ ಮನುಷ್ಯನೊಬ್ಬನು ಹಣವನ್ನು ನಿರಾಕರಿಸುವ ಧೈರ್ಯವನ್ನು (ಪುರುಷೋತ್ತಮ), ರಾಜಕೀಯ ಕೈವಾಡವನ್ನು ಈ ಕೃತಿ ಸೊಗಸಾಗಿ ಕಟ್ಟಿಕೊಡುತ್ತದೆ. ಮನೆಯ ಸುತ್ತ ಹಗರಣವೊಂದು ಆರಂಭವಾಗಿ ಕ್ರಮೇಣ ಅದು ತನ್ನ ಕಬಂಧ ಬಾಹುವಿನಲ್ಲಿ ಸಂಬಂಧಪಟ್ಟವರೊಂದಿಗೆ, ಸಂಬಂಧಪಡದವರನ್ನು ಸೆಳೆದುಕೊಳ್ಳುತ್ತಾ ಕಡೆಗೆ ಕಗ್ಗಂಟಾಗಿ ಪರಿವರ್ತನೆ ಪಡೆದು ಸಾಮಾಜಿಕ ಅಶಾಂತಿಗೆ, ದುರಂತಕ್ಕೆ ಕಾರಣವಾಗುವ ಚಿತ್ರಣವನ್ನು ಈ ಕೃತಿ ಅತ್ಯಂತ ಸಮರ್ಥವಾಗಿ ಚಿತ್ರಿಸುತ್ತದೆ.

ಮುಂಬಯಿಯ ಪಿತ್ರಾರ್ಜಿತ ಮನೆಯಲ್ಲಿ ಸಾಕು ತಾಯಿ ಸಾವಿತ್ರಿಯೊಂದಿಗಿರುವ ಪುರುಷೋತ್ತಮ, ಕೆಮಿಕಲ್ ಎಂಜಿನಿಯರಿಂಗ್ ಪದವಿ ಮುಗಿಸಿ ಪ್ರತಿಷ್ಠಿತ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿದ್ದವನು. ತನ್ನ ಕೈಹಿಡಿದ ಹೇಮಾ ದೂರದ ಅಮೇರಿಕಾದಲ್ಲಿದ್ದರೂ ಒಂದಲ್ಲ ಒಂದು ದಿನ ತನ್ನ ಮಗಳು ಜಾನಕಿಯೊಂದಿಗೆ ಭಾರತಕ್ಕೆ ಬರಬಹುದೆಂಬ ನಿರೀಕ್ಷೆಯಲ್ಲಿದ್ದನು. ಆದರೆ ಹೇಮಾಳಿಂದ ಬಂದ ಪತ್ರ ಆಕೆಗೆ ಕ್ಯಾನ್ಸರ್ ಇರುವುದಾಗಿಯೂ, ಜಾನಕಿ ತನ್ನ ಮಗಳಲ್ಲವೆಂಬ ವಿಚಾರ ತಿಳಿಯುತ್ತದೆ. ಹೀಗೆ ತನ್ನ ವೈಯಕ್ತಿಕ ಜೀವನದಲ್ಲೇ ಸೋಲುಂಡ ಪುರುಷೋತ್ತಮನಿಗೆ ತನ್ನ ಈ ಪೂರ್ವಜರ ಮನೆಯೇ ಸರ್ವಸ್ವವಾಗಿ ಬಿಡುತ್ತದೆ. ಆ ಮನೆಯೊಂದಿಗೆ ತನಗೆ ಅರಿವಿಲ್ಲದೇನೇ ಭಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡು ಬಿಡುತ್ತಾನೆ. ಒಂದು ದಿನ ಇದ್ದಕ್ಕಿದ್ದಂತೆ ಮಂಜುನಾಥ, ಪುರುಷೋತ್ತಮನ ಮನೆಗೆ ಬಂದು ಆತನ ಹುಟ್ಟಿನ ರಹಸ್ಯವನ್ನು ತಿಳಿಸುತ್ತಾನೆ. ಜೊತೆಗೆ ಅವನ ಮನೆಯನ್ನು ಖರೀದಿಸಲು ಒಳಸಂಚನ್ನು ಹೂಡುತ್ತಾನೆ.

ಮಂಜುನಾಥನ ಪರವಾಗಿ ವ್ಯವಹರಿಸಲು ಬರುವ ನಾಥಾನಿಗಳು, ತಾವು ಯೋಜಿಸಿರುವ ಷಾಪಿಂಗ್‌ಸೆಂಟರ್‌ಗೆ ಇದೇ ಜಾಗ ಸೂಕ್ತವೆಂದು ಭಾವಿಸಿ ಮನೆ ಖರೀದಿಸಲು ಮುಂದೆ ಬರುತ್ತಾರೆ. ಇವರ ಜೊತೆಗೆ ವೆಂಕಟದಾಸೂ, ಅಹುಜಾರು ಮನೆ ಖರೀದಿ ವ್ಯವಹಾರವನ್ನು ಕಗ್ಗಂಟಾಗಿಸುತ್ತಾರೆ. ವಾಸ್ತವವಾಗಿ ಈ ಮನೆ ಮಾರುವ ವಿಚಾರ ಪುರುಷೋತ್ತಮನಿಗೆ ಇಲ್ಲದಿದ್ದರೂ ಅವನ ದಾಯಾದಿಗಳಿಗೆ, ವ್ಯಾಪಾರಿ ಉದ್ದಿಮೆದಾರರಿಗೆ, ರಾಜಕಾರಣಿಗಳಿಗೆ ಭಯಾನಕ ಪೈಪೋಟಿಯ ವಿಷಯವಾಗಿ ಮಾರ್ಪಟ್ಟು ಹಲವು ದುರಂತಗಳಿಗೆ ಕಾರಣವಾಗುತ್ತದೆ. ಸೀತೆಯ ಆತ್ಮಹತ್ಯೆ, ಕಮಲಾವತಿಯ ಗರ್ಭಪಾತ, ಮಂಜುನಾಥನ ಕೊಲೆ ಹೀಗೆ ಒಂದಾದ ಮೇಲೊಂದರಂತೆ ನಡೆದ ಹಲವು ಘಟನೆಗಳು ಪುರುಷೋತ್ತಮನನ್ನೂ ಚಿಂತೆಗೀಡು ಮಾಡುತ್ತವೆ. ಕಡೆಯದಾಗಿ ಹಣದ ಆಮಿಷವನ್ನು, ರಾಜಕಾರಣಿಗಳ, ಉದ್ದಿಮೆದಾರರ ಅಮಾನವೀಯ ದಾಳಿಯನ್ನು ಸಮರ್ಥವಾಗಿ ಎದುರಿಸಿ ನಿಲ್ಲುವ ಪುರುಷೋತ್ತಮ ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ಮುಂದಿನ ದಿನಗಳಲ್ಲಿ ಆ ಮನೆಯನ್ನು ಚಿಕಿತ್ಸಾಲಯವಾಗಿ ಮಾರ್ಪಡಿಸುವ ನಿರ್ಧಾರಕ್ಕೆ ಬರುತ್ತಾನೆ. ಹೀಗೆ ಪುರುಷೋತ್ತಮ ತನ್ನ ಬದುಕಿನ ಅನುಭವಗಳಿಂದ ಮಾಗಿ ಪ್ರಬುದ್ಧನಾಗುವ ಪ್ರಕ್ರಿಯೆ ಕಾದಂಬರಿಯ ಆಯಾಮವನ್ನು ವಿಸ್ತರಿಸುತ್ತದೆ. ಕಾದಂಬರಿಯಲ್ಲಿನ ಘಟನೆಗಳು ನಗರೀಕರಣದ ಬರ್ಬರ ಕ್ರೌರ್ಯದ ಹಿಂದಿನ ನಿಗೂಢ ಶಕ್ತಿಯ ಶೋಧವನ್ನೆ ಮಾಡುತ್ತದೆ.

'ಕೇಂದ್ರ ವೃತ್ತಾಂತ' ಚಿತ್ತಾಲರ ಕೊನೆಯ ಕಾದಂಬರಿಯಾಗಿದೆ. ವಸ್ತುವಿನ ದೃಷ್ಟಿಯಿಂದಲೂ, ನಿರೂಪಣಾ ತಂತ್ರದಲ್ಲಿಯೂ ಅನುಸರಿಸಿರುವ ಇಲ್ಲಿನ ಕ್ರಮ ವಿಭಿನ್ನವಾದುದು. 'ಮನುಷ್ಯನೆನ್ನುವ ಜೀವಿ ನಿಜಕ್ಕೂ ಅದೆಂಥಾ ಸೃಷ್ಟಿ? ಅವನ ನಿಜವಾದ ಸಾಧ್ಯತೆಗಳಾದರೂ ಏನು? ಎಂದು ಅರಿಯುವ ಅನನ್ಯ ಸಾಮರ್ಥ್ಯ ಹಾಗೂ ಕುತೂಹಲ ಕಾದಂಬರಿಯ ಉದ್ದಕ್ಕೂ ಕಂಡುಬರುತ್ತದೆ.' ಈ ಕೃತಿಯೂ ಕೂಡ ಮುಂಬಯಿ ನಗರದ ಸಂಕೀರ್ಣ ಬದುಕನ್ನೇ ಕೇಂದ್ರವಾಗಿಸಿಕೊಂಡಿದೆ. ಇದೊಂದು ಮನುಷ್ಯ ಕೇಂದ್ರಿತ ಕಾದಂಬರಿಯಾಗಿದೆ.

ಮುಂಬೈನ ಖೇತವಾಡಿಯ ಚಾಳಿನಲ್ಲಿ ವಾಸಿಸುತ್ತಿದ್ದ ರಾಮಾಜಿಭಾಯಿ ಮತ್ತು ಜಯಂತಿ ದಂಪತಿಗಳ ಮಗಳು ರೇಖಾ ಒಂದು ರಾತ್ರಿ ಯಾರಿಗೂ ಹೇಳದೆ ಕೇಳದೆ ಎನ್ನುವಂತೆ ಯಾರೊಡನೆಯೋ ಓಡಿಹೋದಳು ಎಂಬ ಘಟನೆಯೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಕ್ಷುಲ್ಲಕ ಎನಿಸುವ ಈ ಘಟನೆ ನಿರೂಪಕ ಅಭಿಜಿತ್‌ನ ಜೀವನದಲ್ಲಿ ಸುತ್ತಿಕೊಂಡು ಸಂದಿಗ್ಧ ಪರಿಸ್ಥಿತಿಯೊಂದನ್ನು ಸೃಷ್ಟಿಸುತ್ತದೆ. ರೇಖಾ ಯಾರೊಂದಿಗೆ ಓಡಿಹೋದಳೆಂಬ ಸುಳಿವು ಕಾದಂಬರಿಯ ಅಂತ್ಯದವರೆವಿಗೂ ನಿಗೂಢವಾಗಿಯೇ

3

ಉಳಿಯುತ್ತದೆ. ಅಭಿಜಿತ್‌ನೊಂದಿಗೆ ರೇಖಾ ಮತ್ತವಳ ಸಹೋದರಿಯರಾದ ಅರುಣಾ ಮತ್ತು ಉಜ್ವಲಾಳ ವ್ಯಕ್ತಪಡಿಸಲಾದ ತ್ರಿಕೋನ ಪ್ರೇಮಕಥೆಯು ಅಭಿಜಿತ್‌ನ ಜೀವನವನ್ನು ಕಗ್ಗಂಟಾಗುವಂತೆ ಮಾಡಿಬಿಡುತ್ತವೆ. ರೇಖಾ ಕಾದಂಬರಿಯ ಕಥಾ ನಾಯಕಿಯಾದರೆ, ಉಜ್ವಲಾ ದುರಂತ ನಾಯಕಿಯಾಗಿದ್ದಾಳೆ. ರೇಖಾಳ ನಿಗೂಢ ಕಣ್ಮರೆ, ಉಜ್ವಲಾಳ ಆತ್ಮಹತ್ಯೆ ಖೇತವಾಡಿಯ ಜನರ ಊಹೆ, ಕಲ್ಪನೆಗಳಿಗೆ ಆಹಾರವಾಗುತ್ತವೆ. ಪತ್ರಿಕೆಗಳಿಂದ ಈ ವಿಷಯಗಳು ಮತ್ತಷ್ಟು ಜಟಿಲವಾಗುತ್ತಾ ರಾಜಕೀಯ ತಿರುವನ್ನು ಪಡೆದುಕೊಳ್ಳುತ್ತದೆ. ಸಾಮಾನ್ಯ ಕುಟುಂಬದ, ಸಾಮಾನ್ಯ ಘಟನೆಯ ಸುತ್ತ ಕೇಂದ್ರೀಕೃತಗೊಳ್ಳುವ ರಾಜಕೀಯ ಶಕ್ತಿಗಳು ಆ ಕುಟುಂಬವನ್ನೇ ಒಕ್ಕಲೆಬ್ಬಿಸುವುದಲ್ಲದೆ, ಅವರ ಬದುಕನ್ನು ಮೂರಾಬಟ್ಟೆ ಮಾಡುವುದನ್ನು ಕಾದಂಬರಿಯು ವ್ಯಂಗ್ಯಭರಿತವಾಗಿ ಕಟ್ಟಿಕೊಡುತ್ತದೆ.

ತನ್ನದಲ್ಲದ ಸಮಸ್ಯೆಯನ್ನು ತನ್ನದಾಗಿ ಮಾಡಿಕೊಂಡು ಸಮಸ್ಯೆಯ ಕೇಂದ್ರದಲ್ಲಿ ಸಿಲುಕಿ, ಮಾನಸಿಕ ತೊಂದರೆಗಳಿಗೆ ಒಳಗಾಗುವ ಅಭಿಜಿತ್‌ನನ್ನು ಜಾಹ್ನವಿ ಮತ್ತು ಅವನ ಸೋದರತ್ತೆ ನೈತಿಕ ಸಹಾಯವನ್ನು ಒದಗಿಸಿ ರಕ್ಷಿಸುತ್ತಾರೆ. ರೇಖಾಳ ಅಪಹರಣದ ಬಗ್ಗೆ ತಲೆತಿರುಕನೊಬ್ಬ ಬರೆದನೆನ್ನಲಾಗಿದ್ದ ಮೂಕ ಪತ್ರ ಕಾದಂಬರಿಯ ಅಂತ್ಯದಲ್ಲಿ ಬಹಿರಂಗಗೊಂಡು, ಗೌಪ್ಯತೆ ರಟ್ಟಾಗುತ್ತದೆ. ಮೂಕ ಪತ್ರದ ವಿಚಾರವಾಗಿ ಹುಟ್ಟುವ ಕುತೂಹಲ ಓದುಗರನ್ನು ಕಡೆಯವರೆವಿಗೂ ಉಳಿಸಿಕೊಂಡು ಹೋಗುವಲ್ಲಿ ಯಶಸ್ವಿಯಾಗುತ್ತದೆ. "ಕೇಂದ್ರ ಹಾಗೂ . ಪರಿಧಿಗಳು ಒಂದೇ ಕಾಲಕ್ಕೆ ಚಲನಶೀಲವಾಗಿದ್ದುವು. ಮಾತ್ರವಲ್ಲ, ಪರಿಧಿಗಳು ಮೂಡಿ ಮೂಡಿದ ಹಾಗೆ ಕೇಂದ್ರದೊಳಗೆ ಲೀನವಾಗಿ ಬಿಡುತ್ತಿದ್ದುವು– ಕೇಂದ್ರ ಅವುಗಳನ್ನು ನುಂಗಿಬಿಡುತ್ತಿತ್ತು ಎನ್ನುವ ಹಾಗೆ ನುಂಗಲ್ಪಟ್ಟುವುಗಳ ಜಾಗದಲ್ಲಿ ಹೊಸ ಪರಿಧಿಗಳು ಹುಟ್ಟುಕೊಳ್ಳುತ್ತಿದ್ದುವು" ಎಂಬ ಮಾತುಗಳು ಸಮಸ್ಯೆಯ ಮೂಲ ಮತ್ತು ಅಂತ್ಯವನ್ನು ಕಾಣದ ಇಲ್ಲಿನ ಬಹುತೇಕ ಪಾತ್ರಗಳಿಗೆ ಸಂಪೂರ್ಣವಾಗಿ ಒಪ್ಪುತ್ತವೆ.

ಈ ಕಾದಂಬರಿಯು ಮನುಷ್ಯ ಸಂಬಂಧಗಳ ಸಾಚಾತನವನ್ನು ಎಳೆಎಳೆಯಾಗಿ ಚಿತ್ರಿಸುತ್ತದೆ. ನಗರದೊಳಗೆ ಹಳ್ಳಿಗಳಂತಿರುವ ಚಾಳುಗಳು, ಅಲ್ಲಿನ ನರಕ ಸದೃಶ್ಯ ಬದುಕು, ಮಧ್ಯಮ ವರ್ಗದ ಹೊಯ್ದಾಟಗಳು, ಜೀವನ ಮೌಲ್ಯಗಳ ಅಧಃಪತನ ಇವೆಲ್ಲವೂ ಸಹಜವಾಗಿ ಕಾದಂಬರಿಯಲ್ಲಿ ಅನಾವರಣಗೊಂಡಿದೆ.

ಒಟ್ಟಾರೆ ಚಿತ್ತಾಲರ ಸಾಹಿತ್ಯದಲ್ಲಿ ಮುಂಬೈ ನಗರ ಮಹತ್ವದ ಸ್ಥಾನ ಪಡೆದಿದೆ. ನಾಗರಿಕ ಬದುಕಿನ ಯಾಂತ್ರಿಕತೆ, ಮನುಷ್ಯರ ನಡುವೆ ಇರುವ ಕ್ರೂರ ಸ್ಪರ್ಧೆ, ಸಣ್ಣತನ, ವಿಕಾರಗಳು ಇವರ ಸಾಹಿತ್ಯದಲ್ಲಿ ದಾಖಲಾಗುತ್ತವೆ. ನಿರಪರಾಧಿಯ ಯಾತನೆ ಮತ್ತು ಸಾವು ಇವರ ಸಾಹಿತ್ಯದ ಜೀವಸೆಲೆಯಾಗಿ ನಿಂತಿವೆ. ಮಾನವನ ಮನಸ್ಸಿನ ಅಂತರಂಗದ ಸೂಕ್ಷ್ಮತೆಗಳೆಲ್ಲಾ ಇವರ ಸಾಹಿತ್ಯದಲ್ಲಿ ಬಯಲಾಗುತ್ತವೆ.

ಕೊನೆ ಟಿಪ್ಪಣಿಗಳು

೧. ಯಶವಂತ ಚಿತ್ತಾಲ: ಸಾಹಿತ್ಯದ ಸಪ್ತಧಾತುಗಳು, ಪುಟ-೩೭

೨. ಯಶವಂತ ಚಿತ್ತಾಲ: ಮೂರು ದಾರಿಗಳು: ಮುನ್ನುಡಿ

೩. ಶ್ರೀರಂಗ: ಮೂರು ದಾರಿಗಳು: ಹೆಮ್ಮೆಯ ಮೊದಲ ಹೆಜ್ಜೆ: ಯಶವಂತ ಚಿತ್ತಾಲ ಕೆಲವು ಅಧ್ಯಯನಗಳು, ಪುಟ-೧೬೬

೪. ಯಶವಂತ ಚಿತ್ತಾಲ: ಐವತ್ತೊಂದು ಕಥೆಗಳು, ಪುಟ-೫೫

೫. ಟಿ.ಪಿ.ಅಶೋಕ: ಸಾಹಿತ್ಯ ಸಂಪರ್ಕ, ಪುಟ-೧೦೫

೬. ಟಿ.ಪಿ.ಅಶೋಕ: ಸಾಹಿತ್ಯ ಸಂಪರ್ಕ, ಪುಟ-೧೦೫

೭. ಯಶವಂತ ಚಿತ್ತಾಲ: ಸಾಹಿತ್ಯದ ಸಪ್ತಧಾತುಗಳು, ಪುಟ-೫೫

೮. ಜಯಂತ ಕಾಯ್ಕಿಣಿ: ಯಶವಂತ ಚಿತ್ತಾಲ 'ಪುರುಷೋತ್ತಮ': ಯಶವಂತ ಚಿತ್ತಾಲರ ಸಾಹಿತ್ಯ ಲೋಕ, ಪುಟ-೩೮೧

೯. ಯಶವಂತ ಚಿತ್ತಾಲ: ಕೇಂದ್ರ ವೃತ್ತಾಂತ, ಪುಟ-೨೩೦

□□□

೪. ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು – ಸ್ವಾತಂತ್ರ್ಯದ ಪರಿಕಲ್ಪನೆ

– ಮಹದೇವಸ್ವಾಮಿ ಹೆಗ್ಗೊಠಾರ

ಕನ್ನಡ ಸಾರಸ್ವತ ಲೋಕಕ್ಕೆ ಬಸವರಾಜ ಕಟ್ಟೀಮನಿಯವರ ಕೊಡುಗೆ ಅಪಾರ. ಅವರು ಉತ್ತರ ಕರ್ನಾಟಕದ ಕೊಂಡಿಯಾಗಿ ಸಮಗ್ರ ಕರ್ನಾಟಕದ ಕಿಂಡಿಯಾಗಿ ಕ್ರಾಂತಿಯ ಕಿಡಿಯಾಗಿ ಸಾಹಿತ್ಯದ ದನಿಯಾಗಿ ಪತ್ರಕರ್ತರಾಗಿ ಜನ ಮಾನಸದಲ್ಲಿ ನೆಲೆಯಾದವರು. ಹಿಂಸೆ, ದಬ್ಬಾಳಿಕೆ, ಶೋಷಣೆ, ದಳ್ಳುರಿ, ಸುಲಿಗೆ ಮುಂತಾದ ಅಮಾನವೀಯತೆಗೆ ಸಿಂಹಸ್ವಪ್ನರಾದವರು. ನುರಿತ ಅನುಭವವನ್ನು ಹರಿತವಾದ 'ಕತ್ತಿಮೊನಿ'ಯಲ್ಲಿ ಅಭಿವ್ಯಕ್ತಿಸಿದವರು. ಕನ್ನಡದಲ್ಲಿಯೂ ಸಹ ಕೆಲಕಾಲವಷ್ಟೇ ಕ್ರಿಯಾಶೀಲವಾಗಿದ್ದರೂ ಚಿರಸ್ಮರಣೆಯಾಗುಳಿದ ಪ್ರಗತಿಶೀಲ ಪಂಥವನ್ನು ಒಪ್ಪಿಯೂ ಒಪ್ಪದೆ ತಮ್ಮದೇ ಪ್ರಗತಿಪಥದಲ್ಲಿ ಹೆಜ್ಜೆ ಹಾಕಿದವರು. ಕಾರ್ಲ್‌ಮಾರ್ಕ್ಸ್‌ನ ಸಾಮ್ಯವಾದ ಹಾಗೂ ಗಾಂಧೀ ಪ್ರಣೀತ ಸಮಾಜವಾದವನ್ನು ಅಪ್ಪಿಕೊಂಡು ಒಪ್ಪಿಕೊಂಡು ಅವೆರಡು ಕಣ್ಣುಗಳಿಂದ ತಮ್ಮದೇ ದೃಷ್ಟಿಯೊಂದನ್ನು ಹರಿಸಿದವರು. ನಡೆ–ನುಡಿಗಳಲ್ಲಿ ಶುದ್ಧತೆಯನ್ನು, ಆಚಾರ–ವಿಚಾರಗಳಲ್ಲಿ ಬದ್ಧತೆಯನ್ನು ಹೊಂದಿದ್ದ ಅವರ ವ್ಯಕ್ತಿತ್ವದಲ್ಲಿ ಹತ್ತಾರು ಮುಖಗಳಿವೆ. ಪತ್ರಕರ್ತ, ಸಂಪಾದಕ, ಸಾಹಿತಿ, ರಾಜಕಾರಣಿ, ಸಮಾಜವಾದಿ, ಸ್ವಾತಂತ್ರ್ಯ ಹೋರಾಟಗಾರ, ರೈತ, ಗೃಹಸ್ಥ– ಮುಂತಾದ ಈ ವೃತ್ತಿ–ಪ್ರವೃತ್ತಿಗಳು 'ಕನ್ನಡಕೊಬ್ಬನೇ ಕಟ್ಟೀಮನಿ–ಕತ್ತಿಮೊನಿ' ಎಂಬುದನ್ನು ಉತ್ಪ್ರೇಕ್ಷೆ ಇಲ್ಲದೆ ನಿಜವಾಗಿಸಿವೆ.

ಜಗತ್ತಿನ ಶ್ರೇಷ್ಠ ಸಾಹಿತಿಗಳನ್ನು ಅವಲೋಕಿಸಿದರೆ ಬರವಣಿಗೆಯ ಕಸುಬಿಗೆ ಅಗತ್ಯವಾಗಿ ಬೇಕಾದುದು ಹುಲುಸಾದ ಅನುಭವ ಹಾಗೂ ಅಭಿವ್ಯಕ್ತಿಯ ಕಲಾತ್ಮಕತೆ ಎನ್ನುವುದು ಸೂರ್ಯಸ್ಪಷ್ಟ. ಕೆಲವರು ದೊಡ್ಡವರಾಗಿ (ಶ್ರೀಮಂತರಾಗಿ) ಬದುಕಿ ಬರಹಗಾರರಾಗಿದ್ದಾರೆ, ಮತ್ತೆ ಕೆಲವರು ತಮ್ಮ ದರಿದ್ರ ಬದುಕನ್ನೇ

ದೊಡ್ಡದಾಗಿಸಿಕೊಂಡು ಬದುಕಿ ಬರಹಗಾರರಾಗಿದ್ದಾರೆ; ಬರಹ ಕೂಡ ಕೆಲವರಿಗೆ ಹಣ–ಸ್ಥಾನ–ಮಾನ–ಅಧಿಕಾರ ತಂದುಕೊಟ್ಟಿದೆ. ಅಂತಹವರಿಗೆ ಬರಹ ಕಸುಬು ಅಥವಾ ಉಪಕಸುಬಿದ್ದಂತೆ. ಆದರೆ ಬರೆದು ಹೊಟ್ಟೆ ಹೊರೆಯಬೇಕಾದ ಅನಿವಾರ್ಯತೆ ಇದ್ದವರಿಗೆ ಬರಹ ಮುಖ್ಯ ಕಸುಬು ಎಂಬುದು ನಿಸ್ಸಂಶಯ. ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ಬರಹದ ಸರಕನ್ನು ಉತ್ಪಾದಿಸಿ ಕೆಲವರು ಬಲುಬೇಗ ಜನಪ್ರಿಯ ಬರಹಗಾರರೆನಿಸಿದ್ದರೆ, ಕೆಲವರು ಮಾತ್ರ ವಾಸ್ತವತೆಗೆ ಬಣ್ಣ ಹಚ್ಚುವ (colouring of imagination) ಮೂಲಕ ಅದಕ್ಕೆ ಕನ್ನಡಿ ಹಿಡಿದು ಬರಹವನ್ನು ಪ್ರಸ್ತುತೀಕರಿಸಿದ್ದಾರೆ – ಈ ತಾತ್ವಿಕಾಂಶಗಳಲ್ಲಿ ಎರಡನೇ ಗುಂಪಿಗೆ ಕನ್ನಡ ಪ್ರಗತಿಶೀಲ ಪಂಥದ ಬಸವರಾಜಕಟ್ಟೀಮನಿ ಹಾಗೂ ನಿರಂಜನರು ಅಕ್ಷರಶಃ ಒಪ್ಪುವಂತಹವರು.

ಕಟ್ಟೀಮನಿಯವರ ಸೃಜನಶೀಲತೆ ಕವನ, ಕಥೆ, ಕಾದಂಬರಿಗಳಲ್ಲಿ ಮೂಡಿದ್ದರೂ ಅವರ ಪ್ರಮುಖಧಾರೆಯಾದದ್ದು ಮಾತ್ರ ಕಾದಂಬರಿ ಪ್ರಕಾರ. “ಅದರ ಬೆಳೆಯನ್ನೇ ಬೆಳೆದರು. ಅದರಿಂದಲೇ ಬದುಕಿದರು. ಅವರ ಮನ ಕಾದಂಬರಿಯಾಯಿತು, ಮನೆ ಕಾದಂಬರಿಯಾಯಿತು, ಉದ್ಯೋಗವೂ ಕಾದಂಬರಿಯಾಯಿತು. ಈ ಮೂರು ಮುಪ್ಪುರಿಗೊಂಡ ಅವರ ಜೀವನವೇ ‘ಕಾದಂಬರಿಕಾರನ ಕಥೆ’ಯಾಯಿತು.”[೧] ಪ್ರಸ್ತುತ ಕಾದಂಬರಿ ಪ್ರಕಾರವೇ ಅಪ್ರಸ್ತುತವೆನ್ನುವಷ್ಟರ ಮಟ್ಟಿಗೆ ವಿಮುಖವಾಗಿರುವಾಗ ಅಂದು ಆ ಪ್ರಕಾರವೇ ವಿಪುಲವಾಗಿ ಓದುಗ ವರ್ಗವನ್ನು ಸೃಷ್ಟಿಸಿದ್ದು ಇಂದಿನ ಸಾಹಿತ್ಯ ಚರಿತ್ರೆಯ ಭಾಗವಷ್ಟೆ. ನೆಲಮೂಲ ಸಂಸ್ಕೃತಿಯನ್ನು ವಾಸ್ತವಿಕವಾಗಿ ಬಗೆದು ಕಟ್ಟುವ ಕಟ್ಟೀಮನಿಯವರಿಗೆ ಕಲ್ಪನೆ, ಆದರ್ಶ, ಕನಸು, ಅವಾಸ್ತವ ಸಂಗತಿಗಳಾದವು; ಹುಸಿಭ್ರಮೆಗಳಾದವು. ಕಂಡದ್ದನ್ನು ಕಂಡಹಾಗೆ ಅಭಿವ್ಯಕ್ತಿಸಬೇಕೆಂಬ ಅವರ ಬರವಣಿಗೆಯ ಬದ್ಧತೆಯಲ್ಲಿ ನಯ–ವಿನಯಗಳಿಗೆ ಸೋಪಾನ ಕಟ್ಟಿಲ್ಲ. ನಾಜೂಕಿನ ಶೈಲಿಗೆ–ಸಿದ್ಧಾಂತದ ಕಟ್ಟಳೆಗೆ ಮಾರುಹೋಗಲಿಲ್ಲ. ಅವರು ಬಗೆದದ್ದೇ ಪ್ರಗತಿ ಪಥವಾಯಿತು. ಬರೆದದ್ದೆಲ್ಲವೂ ಪ್ರಗತಿಶೀಲವಾಯಿತು. ಆದ್ದರಿಂದಲೇ ಅವರ ಬರಹಗಳಲ್ಲಿ ಪ್ರಖರ ತೇಜಸ್ಸಿದೆ, ನಿರರ್ಗಳತೆಯ ಓಜಸ್ಸಿದೆ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಬೇಕಾದ ತುಡಿತ–ಹಂಬಲವಿದೆ. ಮೌಢ್ಯ, ಮತ–ಧರ್ಮಗಳ ವಿರುದ್ಧ ಅವರ ಲೇಖನಿ ಸೆಟೆದ ‘ಕತ್ತಿಮೊನೆ’ಯಾಗಿದೆ. ಈ ಎಲ್ಲದರ ಹಿಂದೆ ಗರ್ಭೀಕೃತವಾದ ಚಲನಶೀಲ ಗುಣಗ್ರಾಹಿ ಅಂಶವೆಂದರೆ, ಸರ್ವರಿಗೂ ಸಮಾನತೆ ನೀಡುವ ‘ಸ್ವಾತಂತ್ರ್ಯ’– ಎಂಬುದು ಮನವರಿಕೆಯಾಗುತ್ತದೆ. ಇದಕ್ಕೆ ನಿದರ್ಶನಪ್ರಾಯವಾಗಿ ಅ.ನ.ಕೃ. ಅವರು ನುಡಿದಿರುವ “ಹಲವಾರು ಸಾಮಾಜಿಕ ಸಮಸ್ಯೆಗಳು ನಮ್ಮನ್ನು ಕಾಡುತ್ತಿವೆ. ಆದರವು

ಸ್ವಾತಂತ್ರ್ಯ ಸಮಸ್ಯೆಯ ಪೆಡಂಭೂತದ ಮುಂದೆ ಅಣುರೂಪವನ್ನು ತಾಳುತ್ತವೆ"[೨] ಎಂಬುದನ್ನು ಸ್ಮರಿಸಬಹುದಾಗಿದೆ.

'ಸ್ವಾತಂತ್ರ್ಯ'ಕ್ಕೆ ಹತ್ತಾರು ಮುಖಗಳು – ವೈಯಕ್ತಿಕ, ಕೌಟುಂಬಿಕ, ಸಾಮುದಾಯಿಕ, ಸಾಂಸ್ಥಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ವರ್ಣ–ವರ್ಗ–ಲಿಂಗ – ಈ ಎಲ್ಲದರಲ್ಲೂ ಸ್ವಾತಂತ್ರ್ಯದ ಅಂತರ್ಜಲ ಉಕ್ಕಿ ಹರಿಯುತ್ತದೆ. ಅದು ಮಾನವನ ಧಮನಿ ಧಮನಿಗಳಲ್ಲಿ ಪ್ರವಹಿಸುವ ರಕ್ತದಂತೆ ಅಗೋಚರ, ಅಗಮ್ಯ. ಆದರೆ ಅಂತರಂಗ ಪ್ರವೇಶಿಸಿದರೆ ಅದರ ಪ್ರಖರತೆ ಅನನ್ಯ; ಅನೂಹ್ಯ. ಒಬ್ಬ ಸೃಜನಶೀಲ ಲೇಖಕ ಸಾಮಾನ್ಯವಾಗಿ ಏನೆಲ್ಲಾ ಸೃಷ್ಟಿಗೈದರೂ ಅದರ ಒಡಲಾಳ ಮಾತ್ರ ಮೇರು ಮಾನವತೆಯನ್ನು ಎತ್ತಿ ಹಿಡಿಯುವ ಸ್ವಾತಂತ್ರ್ಯವನ್ನೇ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರತಿಪಾದಿಸುತ್ತದೆ ಎಂಬುದನ್ನು ಕಟ್ಟೀಮನಿಯವರ ಕಾದಂಬರಿ ಜಗತ್ತು ಅರಿವಿಗೆ ತರುತ್ತದೆ.

'ಸ್ವಾತಂತ್ರ್ಯ'ವೆಂಬುದು ಕಟ್ಟೀಮನಿಯವರ ಕಾದಂಬರಿಗಳ ಸ್ಥಾಯೀಭಾವ. ಈ ಜೀವ ಪ್ರಜ್ಞೆಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಅವರ ಕೃತಿಗಳು ಮುಖವಾಣಿಯಾಗಿ ಚಲನಶೀಲವಾಗಿರುವುದನ್ನು ಕಾಣುತ್ತೇವೆ. ಅವರ ೪೨ ಕಾದಂಬರಿಗಳು, ಹತ್ತು ಕಥಾ ಸಂಕಲನಗಳು, ಎರಡು ಮಕ್ಕಳ ಕಥೆಗಳು 'ಸ್ವತಂತ್ರವ್ವ–೩೦', 'ಕಂಪೋಸಿಟರ್' – ಎಂಬೆರಡು ಕವನ ಸಂಕಲನಗಳು ಮುಂತಾದವು – ಇವೆಲ್ಲವನ್ನು ಅವಲೋಕಿಸಿದರೆ ಸ್ವಾತಂತ್ರ್ಯವನ್ನು ಕುರಿತ ಅವರ ಜಿಜ್ಞಾಸೆ ಕುತೂಹಲ ಉಂಟುಮಾಡದಿರದು. ಈ ಹಿನ್ನೆಲೆಯಲ್ಲಿ ಅವರಿಗೆ 'ಸ್ವಾತಂತ್ರ್ಯ' – ನಿರ್ಜೀವ ಸಂಗತಿಯಲ್ಲ, ಅದೊಂದು ಜೀವಿಧಾಯಿ ಪ್ರಜ್ಞೆ; ಹಣ, ಅಧಿಕಾರ, ಶಕ್ತಿ ಇದ್ದವರು ಮಾತ್ರ ಕೊಂಡುಕೊಳ್ಳುವ ಸರಕಲ್ಲ, ಅದು ಮಾನವೀಯತೆಯ ಸೆಲೆ; ಯಾಂತ್ರಿಕ–ತಾಂತ್ರಿಕ–ಕೃತಕ–ಸರಳೀಕೃತ, ಅಲಂಕೃತ, ಕೃತ್ರಿಮತೆಯ ಅಂಶವಲ್ಲ, ಅದು ತಾತ್ವಿಕವೂ ಸಹಜವೂ ಆದ ಅನುಭವಗಮ್ಯ ಅಮೂರ್ತ ಭಾವ. ಹೀಗೆ ಅದರ ತಾತ್ವಿಕ ರೂಪಕವನ್ನು ಅವರ ಕಾದಂಬರಿಗಳಲ್ಲಿ ಶೋಧಿಸಬಹುದಾಗಿದ್ದು ಎರಡು ಆಯಾಮಗಳಲ್ಲಿ ಚರ್ಚಿಸಬಹುದಾಗಿದೆ.

೧. ಪ್ರಭುತ್ವ ಮತ್ತು ವಸಾಹತುಷಾಹಿಯ ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳು.
೨. ಪ್ರಜಾಪ್ರಭುತ್ವ ಮತ್ತು ನವವಸಾಹತುಷಾಹಿಯ ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳು.

೧) ಭಾರತದ ಉಜ್ವಲ ಚರಿತ್ರೆಯಲ್ಲಿ ಪ್ರಭುತ್ವ ಮತ್ತು ವಸಾಹತುಷಾಹಿ ವ್ಯವಸ್ಥೆಗೊಂದು ಪ್ರಮುಖ ಸ್ಥಾನವಿದೆ. 'ರಾಜಾ ಪ್ರತ್ಯಕ್ಷ ದೇವತಾ' ಎನ್ನುವ ಆಳ್ವಿಕೆಗೆ

ಶರಣಾದುದು ಒಂದಾದರೆ, ಮತ್ತೊಂದು ವಸಾಹತುಗಳಿಗೆ ಕೆಂಪುಹಾಸಿಗೆಯನ್ನು ಹಾಸಿ ಅವರಿಂದ ಆಳಿಸಿಕೊಂಡದ್ದು. ಇವು ಮರತೇನೆಂದರೂ ಮರೆಯಲಾಗದ ಸಿಹಿ–ಕಹಿಗಳ ನೆನಪಿನ ಹೂರಣವಾಗಿವೆ. 'Tradition and Individual Talent' ಎಂಬ ಟಿ.ಎಸ್. ಎಲಿಯಟ್‌ನ ನುಡಿಗಾಣ್ಕೆ ನಮ್ಮ ಸಾಹಿತಿಗಳಲ್ಲೂ ಅನುರಣಿತವಾಗಿರುವುದನ್ನು ನಾವು ಗುರುತಿಸಬಹುದಾಗಿದೆ. ಅಂದರೆ ಚಾರಿತ್ರಿಕ ಪರಂಪರೆಯೊಂದಿಗೆ ಅನುಸಂಧಾನಗೈದು ವಾಸ್ತವತೆಗೆ ಧಕ್ಕೆಯಾಗದಂತೆ ಸಾಹಿತ್ಯ ನಿರ್ಮಿಸುವ ಹೊಣೆಗಾರಿಕೆ ಬಹು ದೊಡ್ಡದು. ಅಂತಹ ಅಪರೂಪದ ಕಾರ್ಯವನ್ನು ಮಾಡಿದವರಲ್ಲಿ ಕಟ್ಟೀಮನಿಯವರು ಒಬ್ಬರು. ಅವರ ಸಂಸ್ಥಾನದ ಉಳಿವಿಗಾಗಿ ಹೋರಾಟ ಮಾಡಿದ ಸಂಸ್ಥಾನಿಕರ ಚಿತ್ರಣವುಳ್ಳ ಐತಿಹಾಸಿಕ ಕಾದಂಬರಿಗಳು, ರಾಷ್ಟ್ರೀಯತೆಯನ್ನು ಮೈದುಂಬಿಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ್ದನ್ನು ಚಿತ್ರಿಸುವ ಕಾದಂಬರಿಗಳು ಹಾಗೂ ವಸಾಹತುಷಾಹಿ ವ್ಯವಸ್ಥೆಯೊಳಗಿದ್ದುಕೊಂಡೇ ಸ್ವಾತಂತ್ರ್ಯಕ್ಕಾಗಿ ಆಂತರಿಕ ಸಂಘರ್ಷ ನಡೆಸಿದ್ದನ್ನು ಸಾದರಪಡಿಸುವ ಕಾದಂಬರಿಗಳು ಈ ಗುಂಪಿನಲ್ಲಿ ಕಾಣುತ್ತೇವೆ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಐದುನೂರಕ್ಕೂ ಮಿಗಿಲಾಗಿದ್ದ ಸಂಸ್ಥಾನಗಳು ಒಳಗೆ ಮತ್ತು ಹೊರಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟ ನಡೆಸಿದವು. ಆ ಹೋರಾಟದಲ್ಲಿ ಕರ್ನಾಟಕದ ಕಿತ್ತೂರು, ಕೆಳದಿ, ನರಗುಂದ, ಮೈಸೂರು, ಕೊಡಗು ಮೊದಲಾದವು ಭಾಗಿಯಾಗಿದ್ದವು. ಈ ವಿಚಾರಗಳ ಹರಹುಳ್ಳ ಕಟ್ಟೀಮನಿಯವರು ಕಾದಂಬರಿಗಳನ್ನು ರಚಿಸುವ ಮೂಲಕ ಪರಂಪರೆಯೊಂದಿಗೆ ಅನುಸಂಧಾನ ನಡೆಸಿದ್ದಾರೆ. ಪ್ರಭುತ್ವದಲ್ಲಿ 'ಸ್ವಾತಂತ್ರ್ಯ' ಪ್ರಜ್ಞೆಯನ್ನು ಸಾರ್ವಭೌಮಾಧಿಕಾರದ ನೆಲೆಯಲ್ಲಿ ಕಾಣಿಸುವುದರ ಜೊತೆಗೆ ಶ್ರೀಸಾಮಾನ್ಯನ ಹೃದಯಮಂದಿರದಲ್ಲಿ ಗುಪ್ತಗಾಮಿನಿಯಾಗಿರುವುದನ್ನು ಗುರುತಿಸಿದ್ದಾರೆ. ಹಾಗೆ ನೋಡಿದರೆ 'ಪ್ರಭುತ್ವ' ಎನ್ನುವುದೇ ಸರ್ವಸ್ವಾತಂತ್ರ್ಯದ ಭಂಡಾರವಾಗಿ ತನ್ನ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವ ಐಹಿತ್ಯ ಗೃಹೀತವಾದುದು. ಆದರೂ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬಂದ ಸಂದರ್ಭಗಳಲ್ಲಿ ಸ್ವಾತಂತ್ರ್ಯವನ್ನು ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಅಥವಾ ವ್ಯಕ್ತಿಗತಗೊಳಿಸುವ ಹುನ್ನಾರಗಳನ್ನು ಸಂದರ್ಭೋಚಿತವಾಗಿ ಕಾಣಿಸುವ ಪ್ರಾಮಾಣಿಕ ಪ್ರಯತ್ನ ಕಟ್ಟೀಮನಿಯವರದ್ದಾಗಿದೆ.

ವ್ಯಾಪಾರಕ್ಕಾಗಿ ಬಂದ ವಿದೇಶಿಯರು ಕಾಲಕ್ರಮೇಣ ಭದ್ರವಾಗಿ ನೆಲೆಯೂರುವ ಸಂದರ್ಭದಲ್ಲಿ ಇಲ್ಲಿನ ಸ್ಥಳೀಯರಾದ ಕೆಲವು ನಾಡದ್ರೋಹಿಗಳ ಸ್ನೇಹ ಸಂಪಾದಿಸಿ ಯುದ್ಧವನ್ನು ಮಾಡಿ ಜಯಾಪಜಯಗಳನ್ನು ಹೊಂದಿದರು.

ಆ ಸಂದರ್ಭದಲ್ಲಿ ರಾಷ್ಟ್ರೀಯತೆ, ದೇಶಾಭಿಮಾನ, ರಾಷ್ಟ್ರಭಕ್ತಿ, ರಾಷ್ಟ್ರಪ್ರಜ್ಞೆ ಯಥೇಚ್ಛವಾಗಿ ಜಾಗೃತಗೊಳ್ಳದಿದ್ದರೂ ತಂತಮ್ಮ ಸಂಸ್ಥಾನ, ನಾಡಾಭಿಮಾನ, ಸ್ವದೇಶಾಭಿಮಾನ ಉಳಿಸಿಕೊಳ್ಳುವ ಬರದಲ್ಲಿ ಅರ್ಥಾತ್ ಅವರಿಂದ ಬಿಡುಗಡೆಗೊಂಡು ಸ್ವತಂತ್ರರಾಗುವ ನಿಟ್ಟಿನಲ್ಲಿ ಹೋರಾಡಿದ ಐತಿಹಾಸಿಕ ವೀರರ ಕಥೆ ಜನಜನಿತವಾಗಿ ದಾಖಲಾಗಿವೆ. ಅವುಗಳ ಎಳೆಯನ್ನು ಹಿಡಿದು ಕಾದಂಬರಿ ನಿರ್ಮಿಸಿದ ಕಟ್ಟೀಮನಿಯವರೇ ಕರೆದಿರುವ ಐತಿಹಾಸಿಕ ಕಾದಂಬರಿಗಳು ಸಹ ಇದೇ ಗುಂಪಿನಲ್ಲಿವೆ. ಪೌರುಷಪರೀಕ್ಷೆ, ಸಂಗೊಳ್ಳಿರಾಯ, ಸಮರಭೂಮಿ ಮೊದಲಾದವನ್ನು ಇಲ್ಲಿ ಪ್ರಾತಿನಿಧಿಕವಾಗಿ ಹೆಸರಿಸಬಹುದು.

ಬ್ರಿಟೀಷರಾದಿಂಯಾಗಿ ವಿದೇಶಿಂಯುರು ತಮ್ಮ ಕೋಠಿಗಳನ್ನು ಕಟ್ಟುವುದರೊಂದಿಗೆ ರಾಜ್ಯಗಳ ಕೋಟೆಯನ್ನು ಕಟ್ಟಿದ್ದು ಚಾರಿತ್ರಿಕ ಸಂಗತಿ. ಕಾಲಾನಂತರದಲ್ಲಿ ಸಂಸ್ಥಾನಿಕರು ಆಂತರ್ಯ ಹಾಗೂ ಬಾಹ್ಯದಲ್ಲಿ ಸೋಲುಂಡು, ನಿರ್ನಾಮಗೊಂಡು ಚದುರಿಹೋದರು. ಆ ಸನ್ನಿವೇಶದಲ್ಲಿ ಮಹಾತ್ಮ ಗಾಂಧೀಜಿ ಇಡೀ ಭಾರತಕ್ಕೆ ಹೋರಾಟದ ಮುಖಂಡತ್ವವನ್ನು ವಹಿಸಿದವರು. ಅವರನ್ನು ಆಬಾಲವೃದ್ಧರಾದಿಯಾಗಿ ಒಪ್ಪಿಕೊಂಡು ಹಿಂಬಾಲಿಸಿದರು. ಹೀಗೆ ಗಾಂಧೀಜಿಯವರ ಪ್ರವೇಶದೊಂದಿಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಧಿಕೃತ ಚಾಲನೆ ಸಿಕ್ಕಂತಾಯಿತು. ಹದಿನೆಂಟನೇ ಶತಮಾನದ ಕೆಲ ದಶಕಗಳು ಸೇರಿದಂತೆ ಸ್ವಾತಂತ್ರ್ಯ ಪಡೆಯುವ ತನಕ 'ರಾಷ್ಟ್ರೀಯತೆ'ಯನ್ನು ಮೈ–ಮನಗಳಲ್ಲಿ ತುಂಬಿಕೊಂಡು ಹೋರಾಟ ನಡೆಸಿದ್ದು ವೀರೋತ್ಸಾಹದ ಪ್ರತೀಕ ಮಾತ್ರವಲ್ಲ, ಅದೊಂದು ಜಗತ್ತಿನ ಐತಿಹಾಸಿಕ ಘಟನಾವಳಿ. ಹೀಗೆ ಸ್ವಾತಂತ್ರ್ಯ ಹೋರಾಟದ ಗತ ನೆನಪುಗಳನ್ನು ಸ್ವತಃ ಕಟ್ಟೀಮನಿಯವರು ಸೆರೆವಾಸ ಅನುಭವಿಸುವುದರೊಂದಿಗೆ ಪಡೆದುಕೊಂಡವರು. ಆ ಸ್ವಾನುಭವದ ವಾಸ್ತವತೆಯೊಂದಿಗೆ ಕಲ್ಪನೆಯ ಹಂದರವನ್ನು ಮೇಳವಿಸಿ ಕಟ್ಟಿದ ಕಟ್ಟೀಮನಿಯವರ ಕೆಲವು ಕಾದಂಬರಿಗಳನ್ನು ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳು'; 'ರಾಷ್ಟ್ರಿಯತಾವಾದದ ಕಾದಂಬರಿಗಳು'; 'ಸ್ವಾತಂತ್ರ್ಯ ಚಳವಳಿಯ ಕಾದಂಬರಿಗಳು'; ಮುಂತಾದ ರೀತಿಯಲ್ಲಿ ಕರೆಯುವುದುಂಟು. ಒಟ್ಟಿನಲ್ಲಿ ಈ ಎಲ್ಲಾ ಕಾದಂಬರಿಗಳು ವಸಾಹತುಷಾಹಿ ಕಾಲಘಟ್ಟದ ಸ್ವಾತಂತ್ರ್ಯ ಹೋರಾಟವನ್ನು ಉಸಿರಾಗುಳ್ಳ ಜೀವಂತ ಕೃತಿಗಳಾಗಿ ಗಮನ ಸೆಳೆಯುತ್ತವೆ. ಅವರ ಸ್ವಾತಂತ್ರ್ಯದೆಡೆಗೆ, ಮಾಡಿ ಮಡಿದವರು, ನಾನು ಪೋಲಿಸನಾಗಿದ್ದೆ ಮೊದಲಾದವನ್ನು ಪ್ರಾತಿನಿಧಿಕವಾಗಿ ದಾಖಲಿಸಬಹುದಾಗಿದೆ.

೨) ಭಾರತ ಅಂತಿಮವಾಗಿ ಬ್ರಿಟಿಷರಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದದ್ದು ಆಗಸ್ಟ್ ೧೫ರ ೧೯೪೭ರಂದು. ತರುವಾಯ ನಮ್ಮದೇ 'ಸಂವಿಧಾನ'ವನ್ನು

ರೂಪಿಸುವ ಸಲುವಾಗಿ ಅಂಬೇಡ್ಕರ್‌ರ ನೇತೃತ್ವದಲ್ಲಿ ಸಂವಿಧಾನ ಕರಡು ರಚನಾ ಸಮಿತಿ ನೇಮಿಸಿ ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದ ಸಂವಿಧಾನವನ್ನು ಜಾರಿಗೆ ತರಲಾಯಿತು. ಭಾರತ ಜಗತ್ತಿನಲ್ಲಿಯೇ ಹೆಸರು ಪಡೆಯುವಂತ 'ಜಾತ್ಯಾತೀತ' ರಾಷ್ಟ್ರವೆಂದು ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿಯೆ ಉಲ್ಲೇಖಿಸಲಾಯಿತು. ಆದರೆ ಸ್ವಾತಂತ್ರ್ಯ ನಂತರದ ಭಾರತದ ಸ್ಥಿತಿಯನ್ನು ಅವಲೋಕಿಸಿದರೆ 'ಸ್ವತಂತ್ರ ಭಾರತದ ಅತಂತ್ರ ಸ್ಥಿತಿ' ಎಲ್ಲರಿಗೂ ವೇದ್ಯ. ಸ್ವಾತಂತ್ರ್ಯ ಹೋರಾಟದ ಪೂರ್ವದಲ್ಲಿ ಹೊಂದಿದ್ದ ಜನರ ಭಾವನೆಗಳು ಭ್ರಮಾಧೀನಗೊಂಡವು; ಕನಸುಗಳು ಛಿದ್ರಗೊಂಡವು. ಬಡತನ, ದಾರಿದ್ರ್ಯ, ಹಸಿವು, ಅನಾರೋಗ್ಯ, ಅಕ್ಷರಹೀನ ಅವ್ಯವಸ್ಥೆ ಎಲ್ಲವೂ ತೊಲಗಿ ಸುಸ್ಥಿರ ಸಮಾಜ–ರಾಷ್ಟ್ರ ನಿರ್ಮಾಣ ಮಾಡುತ್ತೇವೆಂಬ ಆಶಾಭಾವನೆಗಳೆಲ್ಲ ಆಶಾಭಂಗಕ್ಕೆ ಕಾರಣವಾದವು. ಸ್ವಜನ ಪಕ್ಷಪಾತ, ಹಗಲು ದರೋಡೆ, ಭ್ರಷ್ಟಾಚಾರ, ಆಡಳಿತ ವೈಫಲ್ಯ, ಜಾತಿ–ಮತ–ಧರ್ಮಗಳ ವೈಷಮ್ಯ ಇತ್ಯಾದಿಗಳಿಂದ ಶೋಷಿತರು ಮತ್ತಷ್ಟು ಶೋಷಣೆಗೆ ಒಳಗಾದರೆ ವಿನಾ ಹೊರಬರಲಿಲ್ಲ. ಹೀಗೆ ಪ್ರಜಾಪ್ರಭುತ್ವವನ್ನೇ ಕೊಲೆ ಮಾಡುವ ರಾಜಕೀಯ ಪುಡಾರಿಗಳು, ಅಧಿಕಾರಿಗಳು, ಪ್ರತಿನಿಧಿಗಳು, ಧರ್ಮಗುರುಗಳು (ಖಾದಿ, ಖಾಕಿ, ಕಾವಿ), ಸರ್ಕಾರ, ಸಮಾಜ ಉಳ್ಳವರ ಸ್ವತ್ತಾಗಿ ಪರಿಣಮಿಸಿದ್ದರಿಂದ ಸಹಜವಾಗಿಯೇ ಅಸ್ವಸ್ಥ ಸಮಾಜ ರೂಪುಗೊಂಡಿತ್ತು. 'ಪ್ರಗತಿ'ಯನ್ನೇ ಧ್ಯೇಯವಾಗಿಸಿಕೊಂಡ ಕಟ್ಟೀಮನಿಯವರಿಗೆ ಆ ಜಗತ್ತಿನ ನಗ್ನ ಸತ್ಯಗಳು ವಾಸ್ತವಾನುಭವವನ್ನು ನೀಡಿದ್ದಲ್ಲದೆ ಕೆಲ ಕಾದಂಬರಿಗಳ ರಚನೆಗೆ ಪ್ರೇರಣೆ ನೀಡಿದವು. ಆ ಹಿನ್ನೆಲೆಯಲ್ಲಿ ಸೃಷ್ಟಿಗೊಂಡ ಪ್ರಜಾಪ್ರಭುತ್ವ ಹಾಗೂ ಗಾಂಧೀವಾದಕ್ಕೆ ಮಾರಕವಾದ ಸನ್ನಿವೇಶಗಳ ಚಿತ್ರಣವುಳ್ಳ ಸಾಮಾಜಿಕ ಕಾದಂಬರಿಗಳನ್ನು ಎರಡನೇ ಗುಂಪಿನಲ್ಲಿ ಅಧ್ಯಯನ ಮಾಡಬಹುದಾಗಿದೆ. ಇವು ಸಾಮಾಜಿಕ, ರಾಜಕೀಯ, ಧಾರ್ಮಿಕ ಅವ್ಯವಸ್ಥೆಯ ವಿರುದ್ಧ ಹೋರಾಟ ನಡೆಸುವ, ಜಾಗೃತಿ ಮೂಡಿಸಿದ ಕಥಾನಕವನ್ನು ಹೊಂದಿರುವ ಕಾದಂಬರಿಗಳಾಗಿವೆ. ಅವರ ಮಾಜಿಮಂತ್ರಿ, ಐದನೇ ದೇಶಾಯಿಣಿ ಜನಿವಾರ ಮತ್ತು ಶಿವದಾರ ಮುಂತಾದ ಕಾದಂಬರಿಗಳನ್ನು ಪ್ರಾತಿನಿಧಿಕವಾಗಿ ಉಲ್ಲೇಖಿಸಬಹುದಾಗಿದೆ.

ಮತ್ತೊಂದು ಮುಖ್ಯ ಆಯಾಮವೆಂದರೆ ನವ ವಸಾಹತುಷಾಹಿ ಕಾಲಘಟ್ಟದ ಸ್ವಾತಂತ್ರ್ಯ ಹೋರಾಟದ ಕಾದಂಬರಿಗಳು ಬ್ರಿಟಿಷರಾದಿಯಾಗಿ ವಿದೇಶಿಯರು ಭಾರತದಿಂದ ಕಾಲ್ಕಿತ್ತರೂ ಅವರ ವಸಾಹತು ಗುಣಲಕ್ಷಣಗಳು ಇಲ್ಲಿಯೇ ಉಳಿದುಕೊಂಡವು. ಆ ಪರಿಣಾಮವಾಗಿ ಆಧುನಿಕ ಸ್ವತಂತ್ರ ಭಾರತದಲ್ಲಿ ಸೃಷ್ಟಿಯಾದ ಔದ್ಯೋಗಿಕ ರಂಗ ಹಾಗೂ ವ್ಯಾಪಾರಿ ಜಗತ್ತು ನವ ವಸಾಹತುಷಾಹಿಗಳೆಂದರೆ

ತಪ್ಪಾಗಲಾರದು. ಹಣ ಅಧಿಕಾರ, ತೋಳ್ಬಲವುಳ್ಳ ಶ್ರೀಮಂತ ಜನ ಉದ್ದಿಮೆಗಳನ್ನು ಸ್ಥಾಪಿಸಿ ವ್ಯಾಪಾರ–ವಹಿವಾಟು ನಡೆಸುತ್ತಲೇ ಬಡ ಭಾರತೀಯರನ್ನು ಬ್ರಿಟಿಷರಿಗಿಂತ ಮಿಗಿಲಾದ ದೌರ್ಜನ್ಯಕ್ಕೆ ಒಡ್ಡಿದರು. ಹೀಗೆ ಸಿಕ್ಕಿ ನರಳಿದ ದಾರುಣ ಕಥೆಗಳ ವಾಸ್ತವತೆಗಳನ್ನು ಅರಿತಿದ್ದ ಕಟ್ಟೀಮನಿಯವರು ಸಚಿತ್ರವಾಗಿ ಚಿತ್ರಿಸಿದ್ದಾರೆ. ವಸಾಹತುಷಾಹಿಗಿಂತಲೂ ಭಿನ್ನವಾದ ಆ ಲೋಕಾನುಭವಗಳು ಕಟ್ಟೀಮನಿಯವರ ಲೇಖನಿಯಲ್ಲಿ ಕಲಾನುಭವವಾಗಿ ಮೂಡಿದ್ದು ಗಮನ ಸೆಳೆಯುತ್ತವೆ. 'ಜ್ವಾಲಾಮುಖಿಯ ಮೇಲೆ' ಕೃತಿಯಂಥವನ್ನು ಪ್ರಾತಿನಿಧಿಕವೆಂದು ಭಾವಿಸಬಹುದು.

ಕಟ್ಟೀಮನಿಯವರ ಕಾದಂಬರಿ ಲೋಕವೆ 'ಸ್ವಾತಂತ್ರ್ಯ' ಜಿಜ್ಞಾಸೆಯ ತವನಿಧಿ, ಅಲ್ಲಲ್ಲಿ ಅಗೆದಷ್ಟು–ಮೊಗೆದಷ್ಟು ಅದರ ನಾನಾ ರೂಪ–ರೂಪಗಳು ಅನಾವರಣ–ಉತ್ಖನನಗೊಳ್ಳುತ್ತವೆ. ಅವರು ಕಡೆದು ಕಟ್ಟಿದ್ದು ನಾಮ್ಕಾವಸ್ಥೆಯ ಕಲಾಕೃತಿಗಳನ್ನಲ್ಲ, ಸ್ವಾತಂತ್ರ್ಯದ ಬಿಂಬ–ಪ್ರತಿಬಿಂಬಗಳನ್ನು. ಸಂಗೊಳ್ಳಿರಾಯ, ಶೇಖರ–ಹೇಮ, ಶಾಂತಾ, ಚಂದ್ರಣ್ಣ ರತ್ನ ಮೊದಲಾದ ಪಾತ್ರ ಪಾತಳಿಯಲ್ಲಿ ಸ್ವಾತಂತ್ರ್ಯದ ಸ್ವೋಪಜ್ಞತೆಯನ್ನೇ ಕಾಣುತ್ತೇವೆ.

ಸ್ವಾತಂತ್ರ್ಯವನ್ನು ಮೂಲವಾಗಿಸಿಕೊಂಡ ಲೇಖಕ ಪಾತ್ರಗಳಲ್ಲಿ ಪರಕಾಯಪ್ರವೇಶ ಮಾಡಿದ್ದರೆ ಆಶ್ಚರ್ಯಪಡಬೇಕಿಲ್ಲ. ಅಷ್ಟರಮಟ್ಟಿಗೆ ಅವರ ಸ್ವಾತಂತ್ರ್ಯದ ಅರಿವು–ಇರುವು–ನಿಲುವು ಗಟ್ಟಿಯಾಗಿದೆ ಎಂದೇ ಅರ್ಥೈಸಬೇಕಾಗುತ್ತದೆ. ಅವರ ಕಾದಂಬರಿಗಳನ್ನು ಒಟ್ಟಾಗಿಸಿ ಒಳಹೊಕ್ಕರೆ ಕಟ್ಟೀಮನಿಯವರದು ಮೂಲತಃ ಸ್ವಾಭಿಮಾನಿಗಳ ದಾರಿ; ಸ್ವಾತಂತ್ರ್ಯ ಪ್ರೇಮಿಗಳ ದಾರಿ (ಪೌರುಷಪರೀಕ್ಷೆ ಪು–೧೭೨) ಆ ಕಾರಣಕ್ಕಾಗಿಯೇ ಅವರು, ನನ್ನ ಬಾಳೆಲ್ಲ ಮೀಸಲು ಹಳ್ಳಿಯ ಬಡಜನಕ್ಕೆ. ಅವರ ಅಜ್ಞಾನ ಅಳಿದು, ಬಡತನ ಕಳೆದು, ಪಾರತಂತ್ರ್ಯ ಹೋಗಿ ಸ್ವಾತಂತ್ರ್ಯ ಬಂದು, ಸಮತೆ ಬೆಳೆದಾಗಲೇ ನನಗೆ ಸುಖ–ಅಂದೇ ನನಗೆ ವಿರಾಮ–ಅದೂವರೆಗೂ–ದುಡಿತ! ದುಡಿತ! ಹಗಲಿರುಳು ದುಡಿತ! ಹೋರಾಟ ! ಹೋರಾಟ! ಸತತ ಹೋರಾಟ! (ಸ್ವಾತಂತ್ರ್ಯದೆಡೆಗೆ ಪು–೧೭೩) ಎಂದು ಪಣತೊಟ್ಟವರು. "ಆರ್ಥಿಕ ವಿಷಮತೆ ನಾಶವಾಗದ ಹೊರತು ಜನತೆಗೆ ನಿಜವಾದ ಸ್ವಾತಂತ್ರ್ಯ ಬರಲಾರದು ಅಂತೆಯೇ ಪೂರ್ಣ ಸ್ವಾತಂತ್ರ್ಯಕ್ಕಾಗಿ ನಡೆದಿರುವ ಹೋರಾಟ ಇದು" (ಜ್ವಾಲಾಮುಖಿಯಾಗಿ ಮೇಲೆ ಪು–೧೬೦–೧೬೧) ಎಂದು ಭಾವಿಸಿದವರು. ನಾ ಸಾಯುವ ತನಕ ಸ್ವಾತಂತ್ರ್ಯಕ್ಕಾಗಿ ದುಡಿತೇನೆ (ಮಾಡಿ ಮಡಿದವರು– ಪು.೧೯೬) ಎಂಬ ಪ್ರತಿಜ್ಞಾವಿಧಿ ಸ್ವೀಕರಿಸಿ, ಅದನ್ನು ಅಧ್ಯಾಪಿಸಿದ್ದು ಹೀಗೆ, "ಎಲ್ಲಿಯವರೆಗೂ, ಈ ದೇಶದ ಒಬ್ಬನೇ ಒಬ್ಬ ಪ್ರಜೆಯೂ ಅನ್ನವಿಲ್ಲದೆ, ವಸತಿಯಿಲ್ಲದೆ, ಬಟ್ಟೆಯಿಲ್ಲದೆ,

ಸಾರ್ವಜನಿಕ ಉದ್ಯಾನದಲ್ಲಾಗಲಿ, ಅಂಗಡಿಗಳ ಮುಂಭಾಗದಲ್ಲಾಗಲೀ ಬಿದ್ದುಕೊಂಡು ಇರುಳು ಕಳೆಯಬೇಕಾದ ಪರಿಸ್ಥಿತಿಯಿರುವುದೋ ಅಲ್ಲಿಯವರಿಗೂ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ (ಮಾಜೀಮಂತ್ರಿ–೧೦೫)." ಅತ್ಯಾಚಾರ, ದೌರ್ಜನ್ಯ, ಕಿರುಕುಳ ಮೊದಲಾದವು ತಾಂಡವವಾಡುತ್ತಿರುವ ಇಂದಿನ ಸಂದರ್ಭದಲ್ಲಿ ಸ್ತ್ರೀ ಸ್ವಾತಂತ್ರ್ಯ, ಸಮಾನತೆ ಎಂದರೇನೆಂಬುದಕ್ಕೆ ಅವರ ಒಲವು ನಿಲುವು ಹೀಗೆ. "ಗಂಡನ ದಾಸಿಯಾಗಿರಬಾರದು ಹೆಂಡತಿ. ಅವಳಿಗೆ ಎಲ್ಲಾ ವಿಚಾರದಲ್ಲೂ ಸ್ವಾತಂತ್ರ್ಯವಿರಬೇಕು. ಸ್ವತಂತ್ರ್ಯವಾಗಿ ಅವಳು ವಿಚಾರ ಮಾಡುತ್ತಿರಬೇಕು, ಸ್ವತಂತ್ರವಾಗಿ ವರ್ತಿಸುತ್ತಿರಬೇಕು. ಗಂಡನಾದವ ಅವಳನ್ನು ಮರ್ಯಾದೆಯಿಂದ ಗೌರವದಿಂದ, ಸಮಾನತೆಯಿಂದ ನಡೆಸಿಕೊಳ್ಳಬೇಕು. ನನ್ನ ವಿಚಾರದೊಳಗ ಗಂಡ ಹೆಂಡಿರೆಂದರೆ ಬರೀ ಲಗ್ನ ಬಂಧನದಿಂದ ಒಂದಾದ ಬೇರೆ ಬೇರೆ ಜೀವಗಳಲ್ಲ– ಅವರಿಬ್ಬರೂ ಕಾಮ್ರೇಡ್ಸ್. ಸರಿ ಸಮ್ಯಾರು (ಸ್ವಾತಂತ್ರ್ಯದೆಡೆಗೆ ಪು–೧೬೬)."

ಹೀಗೆ ಸಾಮ್ಯವಾದಿ, ಸಮಾಜವಾದಿ, ಗಾಂಧೀವಾದಿ, ರಾಷ್ಟ್ರೀಯವಾದಿಯಾಗಿ ಕಟ್ಟೀಮನೀ ಕನ್ನಡದ ಕಟ್ಟಾಳು, ಹುಟ್ಟು ಹೋರಾಟಗಾರ, ಕಟ್ಟಾ ಸ್ವಾತಂತ್ರ್ಯ ಪ್ರೇಮಿ ಎಂಬುದನ್ನು ಅವರ ಸಾಹಿತ್ಯ ನಿರ್ಮಿತಿಯೇ ಬಲವಾಗಿ ಸಾಕ್ಷೀಕರಿಸುತ್ತವೆ.

ಕೊನೆ ಟಿಪ್ಪಣಿಗಳು

೧. ಡಾ. ಬಸವರಾಜ ಸಾದರ: ಬಸವರಾಜ ಕಟ್ಟೀಮನಿಯವರ ಕಾದಂಬರಿಗಳು ಪ್ರ: ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗ (೨೦೧೧) ಪು. ೯೭.

೨. ಅ.ನ. ಕೃಷ್ಣರಾಯ: ಪ್ರಗತಿಶೀಲ ಸಾಹಿತ್ಯ (ಸಂ): ಮುನ್ನುಡಿ. ಪು– XVIII.

□□□

೫. ಜಿ.ಎಸ್. ಶಿವರುದ್ರಪ್ಪನವರ ಕಾವ್ಯದಲ್ಲಿನ ಕಾವ್ಯತತ್ತ್ವ ಕುರಿತ ನಿಲುವುಗಳು

– ಡಾ. ಜಿ.ಎಸ್. ಅಶೋಕ

ಕವಿ–ಕಾವ್ಯ ಕುರಿತ ಚರ್ಚೆ ಇಂದಿನದಲ್ಲ, ಅದು ಪುರಾತನ ಸಂಸ್ಕೃತ ಕಾವ್ಯ ಮೀಮಾಂಸಕರಿಂದ ಬಂದುದಾಗಿದೆ. ಕವಿ ಎಂದರೆ ಯಾರು? ಕಾವ್ಯ ಹೇಗೆ ಹುಟ್ಟುತ್ತದೆ? ಕವಿತೆ ಬರೆಯಲು ಆಕರಗಳು ಯಾವುವು?ಕವಿಯು ಪ್ರಕೃತಿಯಲ್ಲಿ ಕಂಡದ್ದನ್ನು ಹೇಗೆ ಕಾವ್ಯವಾಗಿಸುತ್ತಾನೆ?ರವಿ ಕಾಣದ್ದನ್ನು ಕವಿ ಹೇಗೆ ಕಂಡ? ಋಷಿಯಲ್ಲದವನು ಹೇಗೆ ಕವಿಯಾಗಲಾರನು ಮತ್ತು ಕವಿಯು ದರ್ಶನವುಳ್ಳವನಾಗಿರಬೇಕೆಂಬ ವಿಚಾರ ಕುರಿತು ತಮ್ಮ ಕವನಗಳಲ್ಲಿ ಜಿ.ಎಸ್.ಎಸ್. ಹಾಗೂ ಚೆನ್ನವೀರ ಕಣವಿಯವರು ಹುಡುಕಲು ಹೊರಟಿದ್ದಾರೆ.

೧ ಕವಿ–ಕಾವ್ಯ

'ಕವಿಯ ಕಣ್ಣು ಕಾವ್ಯದ ದೃಷ್ಟಿಯಲ್ಲಿ' ಎಂಬಂತೆ ಕವಿತೆಯ ಕಣ್ಣುವಸ್ತುವಿನ ದೃಷ್ಟಿಯಲ್ಲಿ, ವಸ್ತುವಿನ ದೃಷ್ಟಿ ಅಲಂಕಾರದಲ್ಲಿರುತ್ತದೆ.ಈ ಅಲಂಕಾರಗಳಲ್ಲದೆ ಕವಿಗೆ ಕವಿತೆಯ ಆಕರ, ಪ್ರತಿಭೆ ಸ್ಫೂರ್ತಿ ಮುಂತಾದವುಗಳು ಇದ್ದಾಗ ಮಾತ್ರ ಸಮರ್ಥ ಕವಿಯಾಗಲು ಸಾಧ್ಯ.ಇವೆಲ್ಲವುಗಳನ್ನು ಹೊಂದಿದ ಜಿ.ಎಸ್. ಶಿವರುದ್ರಪ್ಪನವರು ಕವಿಯಾಗಿ ದೊಡ್ಡ ಸಾಧನೆ ಮಾಡಿದವರು.ಕವಿಯಾಗಬೇಕೆಂದು ಶಾಲಾ ದಿನಗಳಿಂದಲೇ ಹಂಬಲಿಸಿದವರು. ಕುವೆಂಪು ಅವರಂತಹ ಕವಿಯನ್ನು ಆದರ್ಶವಾಗಿರಿಸಿಕೊಂಡವರು.ಜೀವನದುದ್ದಕ್ಕೂ ಕಾವ್ಯಾಭಿವ್ಯಕ್ತಿಯ ಕೃಷಿಯನ್ನು ಅತ್ಯಂತ ಸಮರ್ಥ ಮತ್ತು ಗಾಂಭೀರ್ಯದಿಂದ ಮಾಡಿಕೊಂಡು ಬಂದವರು. ತಮ್ಮ ಕಾವ್ಯಾಭಿವ್ಯಕ್ತಿಗೆ ದೊರಕಿದ ಪ್ರೋತ್ಸಾಹ ಮತ್ತು ಪರಿಸರಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವರು. ಕವಿಯಾಗಬೇಕಾದವರಿಗೆ ಕೇವಲ ಪ್ರೋತ್ಸಾಹ, ಪರಿಸರಗಳಿದ್ದರಷ್ಟೇ ಸಾಲದು. ಪ್ರತಿಭೆ, ಕಲ್ಪನೆಗಳೂ

ಇರಬೇಕು.ಭಾಷೆಯನ್ನು ಪೂರಕವಾಗಿ ಬಳಸಿಕೊಳ್ಳುವ ಸಾಮರ್ಥ್ಯವೂ ಇರಬೇಕು. ಜಿ.ಎಸ್.ಎಸ್. ಈ ಎಲ್ಲಾ ದ್ರವ್ಯಗಳನ್ನು ಅತ್ಯಂತ ಸಮರ್ಥವಾಗಿ ಬಳಸಿಕೊಂಡು ಬೆಳೆದ ಕವಿಯಾಗಿದ್ದಾರೆ.

ಜಿ.ಎಸ್.ಎಸ್. ಶಾಲಾ ದಿನಗಳಿಂದಲೇ ಕವಿತೆ ಕಟ್ಟುವ ಪ್ರಯತ್ನ ಮಾಡಿದ್ದರು.ಆದರೆ ಅವರ ಕಾವ್ಯ ರಚನೆಗೆ ಮುಕ್ತ ಅವಕಾಶ ದೊರಕಿದ್ದು ಅವರು ಬಿ.ಎ.ಆನರ್ಸ್ ಮಾಡಲು ಮೈಸೂರಿಗೆ ಬಂದ ಮೇಲೆಯೇ ಎಂಬುದನ್ನು ಮರೆಯುವಂತಿಲ್ಲ. ಅವರ ಪ್ರಥಮ ಕವನ ಸಂಕಲನ 'ಸಾಮಗಾನ' ಪ್ರಕಟವಾದದ್ದು ೧೯೫೧ರಲ್ಲಿ. ಅಲ್ಲಿಂದ ೨೦೦೧ರಲ್ಲಿ ಪ್ರಕಟವಾದ 'ವ್ಯಕ್ತಮಧ್ಯ'ದವರೆಗೆ ಒಟ್ಟು ಹದಿಮೂರು ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ನವೋದಯ ಕಾಲಘಟ್ಟದಲ್ಲಿ ಅವರು ಕಾವ್ಯರಚನೆ ಆರಂಭಿಸಿದರು. ಅನಂತರ ವಿವಿಧ ಕಾಲಘಟ್ಟಗಳಲ್ಲಿ ಮೂಡಿಬಂದ ನವ್ಯ, ದಲಿತ, ಬಂಡಾಯದ ಎಲ್ಲಾ ಸಂವೇದನೆಗಳನ್ನೂ ಅರಗಿಸಿಕೊಂಡು ಕಾವ್ಯ ರಚಿಸಿದ್ದಾರೆ.ಕವಿಗಳಿಗೆ ಚಿರಂತನ ಸ್ಫೂರ್ತಿ ಕೊಡುವ ಪ್ರಕೃತಿಸೌಂದರ್ಯ, ಚಂದ್ರೋದಯ, ಸೂರ್ಯೋದಯ, ಋತು ವೈಭವಗಳು ಇತ್ಯಾದಿಗಳ ಬಗ್ಗೆ ಜಿ.ಎಸ್.ಎಸ್. ಮೊದಲು ಬರೆಯತೊಡಗಿದರು.ಭಾವಗೀತಾ ಪ್ರಕಾರದ ಅತ್ಯಂತ ಉತ್ಕರ್ಷದ ಕಾಲದಲ್ಲಿ ಭಾವತೀವ್ರತೆ ಹಾಗೂ ಗೇಯತೆ ಇವೆರಡಕ್ಕೂ ಪ್ರಾಶಸ್ತ್ಯ ನೀಡಲೇಬೇಕಾದ ಅನಿವಾರ್ಯತೆಯಿತ್ತು.ಇವೆರಡರ ಮಧ್ಯೆ ಚಿಂತನಾಂಶವು ಕೆಲವೊಮ್ಮೆ ಗೌಣವಾಗಿ ಬಿಡುತ್ತಿತ್ತು. ಅಲ್ಲದೆ ಈ ಕಾವ್ಯವಸ್ತುಗಳನ್ನು ವರ್ಣಿಸುವುದಕ್ಕೆ ಅನೇಕ ಬಾರಿ ಒಂದು ಪದ್ಯ ಸಾಕಾಗುತ್ತಿರಲಿಲ್ಲ. ಈ ಸಾಹಿತ್ಯ ರಚನೆಯ ಸಂದರ್ಭದಲ್ಲಿ ಜಿ.ಎಸ್.ಎಸ್.ರವರು ಹೂವಿನ ಬಗ್ಗೆ, ಯುಗಾದಿಯ ಬಗ್ಗೆ, ಪ್ರಕೃತಿಯ ಬಗ್ಗೆ ಅನೇಕಾನೇಕ ಕವನಗಳನ್ನು ರಚಿಸಿದ್ದಾರೆ.

ನವೋದಯ ಕಾಲದ ಎಲ್ಲಾ ಕವಿಗಳು ಹೆಚ್ಚೂ ಕಡಿಮೆ ಪ್ರಕೃತಿ ಸೌಂದರ್ಯ, ಆದರ್ಶಮೌಲ್ಯಗಳ ಬಗ್ಗೆ ಬರೆಯತೊಡಗಿ, ಕ್ರಮೇಣ ವ್ಯಕ್ತಿ ಕೇಂದ್ರೀಕೃತ ನೆಲೆಯ ಕಡೆ ಹೋಗುತ್ತಾರೆ. ಆನಂತರ ಸಮಾಜಮುಖಿ ನೆಲೆಯ ಕಡೆ ಚಲಿಸುತ್ತಾರೆ. ಇದು ನವೋದಯದ ಸಂದರ್ಭದಲ್ಲಿ ಬಂದ ಕವಿಗಳಿಗೆ ಹೆಚ್ಚು ಅನ್ವಯಿಸುತ್ತದೆ. ಈ ಮನೋಭಾವದ ಜೊತೆ ಜೊತೆಗೆ ಅವರ ಕಾವ್ಯ ಸ್ವರೂಪದಲ್ಲೂ ಬದಲಾವಣೆಗಳಾಗುತ್ತಿರುತ್ತವೆ. ಜಿ.ಎಸ್.ಎಸ್. ರವರ ಕಾವ್ಯದ ಬೆಳವಣಿಗೆಯಲ್ಲಿ ಈ ಗುಣಗಳನ್ನು ಕಾಣಬಹುದು.**'ಋಷಿಯಲ್ಲದವನು ಕವಿಯಾಗಲಾರ'** ಎಂಬ ಮಾತಿದೆ. ಜಿ.ಎಸ್.ಎಸ್. ರವರು **'ಆದಿ ಕವಿಗೆ'** ಎಂಬ ತಮ್ಮ ಕವನದಲ್ಲಿ ಪ್ರಕೃತಿಯನ್ನು ಕಂಡು ರೋಮಾಂಚನಗೊಂಡು, ಉಳಿದೆಲ್ಲಾ ಕವಿಗಳಿಗೂ ಕಾಮಧೇನುವಾದ

ಆದಿಕವಿ ವಾಲ್ಮೀಕಿಯನ್ನು ಸ್ಮರಿಸುತ್ತಾರೆ. ಮುಂದೆ **'ಒಳದನಿ'** ಎಂಬ ಕವನದಲ್ಲಿ ಕವಿಯಾಗುವ ಮೊದಲು ವಿಶಿಷ್ಟ ಪ್ರತಿಭೆ, ಪಾಂಡಿತ್ಯ ಮುಂತಾದವುಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಹೇಳುತ್ತಾರೆ.

ಪ್ರತಿಯೊಬ್ಬ ಕವಿಗೂ ಒಂದು ಜಿಜ್ಞಾಸೆ ಇರುತ್ತದೆ.ತಾನು ಬರೆಯುವ ಕಾವ್ಯದ ಬಗೆಗೆ ಮತ್ತು ಕವಿ ಕಾವ್ಯ ಮಧ್ಯದ ಸಂಬಂಧದ ಬಗ್ಗೆ ಜಿಜ್ಞಾಸೆ ಇರುತ್ತದೆ. ನಾನೇಕೆ ಕಾವ್ಯ ಬರೆಯುತ್ತೇನೆ? ನನ್ನ ಕಾವ್ಯ ಎಂತಹದು? ಅದರ ಸ್ವರೂಪ ಹಾಗೂ ಆಶಯಗಳು ಎಂತವು? ಎಂಬ ಅಂಶಗಳು ಪ್ರತಿಯೊಬ್ಬ ಕವಿಯನ್ನೂ ಕಾಡುತ್ತಿರುತ್ತವೆ. ಜಿ.ಎಸ್.ಎಸ್.ರವರು ಕೂಡ ಈ ಕಾಡುವ ಪ್ರಶ್ನೆಗಳಿಗೆ ಅನೇಕ ಕವನಗಳಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದಾರೆ. **'ಕವಿಯ ಮನಸು'** ಎಂಬ ಕವನದಲ್ಲಿ ಅವರು ಹೀಗೆ ಹೇಳುತ್ತಾರೆ.

ಪ್ರಕೃತಿಯಂತೆ ಕವಿಯ ಮನಸು
ವಿಪುಲ ರೂಪ ಧಾರಿಣಿ ಬ್ರಹ್ಮನೆದೆಯ ಕನಸಿನಂತೆ
ಕೋಟಿ ಕಲ್ಪ ಗಾಮಿನಿ – *(ಕವಿಯ ಮನಸು–ಸಾಮಗಾನ)*

ಕವಿಯ ಮನಸು ಜಿ.ಎಸ್.ಎಸ್.ರವರ ಪ್ರಕಾರ ವಿಶ್ವತೋಮುಖಿಯಾದುದು. ಎಲ್ಲದಕ್ಕೂ ತೆರೆದುಕೊಳ್ಳುವ, ಎಲ್ಲವನ್ನೂ ಗ್ರಹಿಸುವ 'ವಿಪುಲ ರೂಪಧಾರಿಣಿ' ಮತ್ತು 'ಕೋಟಿ ಕಲ್ಪಗಾಮಿನಿ'ಯಾಗಿರುತ್ತದೆ. ಉತ್ತಮ ಸಹೃದಯನಾಗದವನು ಉತ್ತಮ ಕವಿಯಾಗಲಾರ. ಪ್ರಕೃತಿಯಲ್ಲಿ ಕಂಡದ್ದನ್ನು ಆಸ್ವಾದಿಸಿ, ಆನಂದಿಸಿ, ಉತ್ತಮ ಸೌಂದರ್ಯಾರಾಧಕನಾಗಲು ಪ್ರಕೃತಿಯೇ ಕಾರಣ. **'ಪ್ರಕೃತಿ ಕವಿ'** ಎಂಬ ಕವನದಲ್ಲಿ ಸಹೃದಯ ಹೇಗೆ ಕವಿಯಾಗುತ್ತಾನೆ ಎಂಬುದನ್ನು ಜಿ.ಎಸ್.ಎಸ್. ಅವರು ಹೀಗೆ ಹೇಳುತ್ತಾರೆ.

ವ್ಯೋಮ ಕೇಶನಿಂದ ಗಂಗೆ
ಭಗೀರಥನ ಹತ್ತಿರ
ಇಳಿದು ಬಂದ ಹಾಗೆ
ಪ್ರಕೃತಿ ಬಂತು ಕವಿಯ ಹತ್ತಿರ
ಅದುವರೆಗೂ ಪಡೆಯದಿದ್ದ ತೃಪ್ತಿಯನ್ನು ಪಡೆಯಿತು
ಕವಿಯ ಕೊರಳಿನಲ್ಲಿ ತಾನೆ ಲಹರಿ ಲಹರಿ ಹೊಮ್ಮಿತು.

– (ಪ್ರಕೃತಿ ಕವಿ–ಚೆಲುವು–ಒಲವು)

ಪ್ರಕೃತಿಯ ಸಾನಿಧ್ಯದಿಂದ ಸಹೃದಯ ಕವಿಯಾಗುತ್ತಾನೆ. ಸಾಮಾನ್ಯ ಒಂದು ಬೀಜ ಭೂಮಿಯಲ್ಲಿ ಬಿದ್ದು ಮಳೆ, ಗಾಳಿ, ಶಾಖ ಮತ್ತು ಋತುಗಳ ಬದಲಾವಣೆಯಿಂದ ಹೇಗೆ ಮರವಾಗಿ ಬೆಳೆದು ಫಲಕೊಡುತ್ತದೋ ಅದೇ ರೀತಿ

ಪ್ರಕೃತಿಯಿಂದ ಸಾಮಾನ್ಯನು ಕವಿಯಾಗುತ್ತಾನೆ. ಪ್ರಕೃತಿಸೌಂದರ್ಯ, ಬಡವ-ಬಲ್ಲಿದರ ನೋವು-ನಲಿವುಗಳನ್ನು ಪ್ರಕೃತಿಯಲ್ಲಿ ಕಂಡು ಜೊತೆಗೆ ತನ್ನತನವನ್ನು ಅರಗಿಸಿಕೊಂಡು ಸಾಮಾಜೀಕರಣಗೊಳಿಸಿ ಕಾವ್ಯವಾಗಿಸುವುದು ಕವಿ ಮನೋಧರ್ಮವಾಗಿದೆ.

ಅವರ **'ನಾನೇಕೆ ಬರೆಯುತ್ತೇನೆ?'**ಎನ್ನುವ ಕವನವನ್ನು ಎರಡು ಕಾರಣಗಳಿಂದ ಗಮನಿಸಬಹುದು. ಮೊದಲನೆಯದಾಗಿ ಜಿ.ಎಸ್.ಎಸ್.ರವರು ತಮ್ಮ ಕಾವ್ಯವನ್ನು ಹೇಗೆ ಪ್ರತಿನಿಧಿಕರಿಸಿಕೊಂಡಿದ್ದಾರೆ ಎಂಬ ದೃಷ್ಟಿಯಿಂದ ಹಾಗೂ ಎರಡನೆಯದಾಗಿ ಅದು ಸಾಧಿಸಿರುವ ಶಬ್ದಾರ್ಥ ಸರಳತೆಯ ದೃಷ್ಟಿಯಿಂದ ಕವನ ಉತ್ತರ ನೀಡುತ್ತದೆ.

> **ನಾನು ಬರೆಯುತ್ತೇನೆ**
> **ಸುಮ್ಮನಿರಲಾರದ್ದಕ್ಕೆ**
> **ನನ್ನ ವೇದನೆ ಸಂವೇದನೆಗಳನ್ನು**
> **ಕ್ರಿಯೆ ಪ್ರತಿಕ್ರಿಯೆಗಳನ್ನು**
> **ದಾಖಲು ಮಾಡುವುದಕ್ಕೆ.**- ***(ನಾನೇಕೆ ಬರೆಯುತ್ತೇನೆ-ಕಾಡಿನಕತ್ತಲಲ್ಲಿ)***

ಜಿ.ಎಸ್.ಎಸ್.ರವರೇ ಹೇಳುವಂತೆ "ಇದೊಂದು ಗದ್ಯಗಂಧಿಯಾದ ಪದ್ಯ. ಕವಿ ಬರೆದಿರುವ ಸಾಲುಗಳನ್ನು ಒಡೆಯದೇ ಹಾಗೆ ಬರೆದುಕೊಂಡು ಹೋದರೆ ಅವು ಪರಿಪೂರ್ಣ ವಾಕ್ಯಗಳೇ. ಆದರೆ ಕವಿ ಅದನ್ನು ಒಡೆದು ಜೋಡಿಸಿರುವ ರೀತಿ ಮತ್ತು ಅದಕ್ಕಿಂತ ಹೆಚ್ಚಾಗಿ ಒಟ್ಟಾರೆ ಸೌಷ್ಟವದಲ್ಲಿ ಅದು ಹೊರಡಿಸುವ ಅರ್ಥ ಮಹತ್ತರವಾದುದು"[7] ಎಂಬ ಅವರ ಈ ಅಭಿಪ್ರಾಯ ಕವನ ಸಂರಚನಾ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ.ಕವಿಯ ಮನೋವ್ಯಾಪಾರಗಳಿಗೆ ಬಿಡುಗಡೆಯ ಕವಾಟಗಳು ಒಂದೇ, ಎರಡೇ? ಕವಿ ಏಕೆ ಬರೆಯುತ್ತಾನೆ? ಕವನದ ತತ್ತಿಯೊಡೆಯಬೇಕಾದರೆ ಯಾವುದಾದರೊಂದು ಕಾವು ಬೇಕೆಬೇಕು.ಅದು ಜಿ.ಎಸ್.ಎಸ್. ಹೇಳಿದಂತೆ ಖುಷಿಯೋ, ನೋವೋ, ಹುಚ್ಚೋ, ಕಿಚ್ಚೋ ಯಾವುದಾದರು ಆಗಬಹುದು.ಯಾವುದೇ ಇರಲಿ, ಕವಿಯು ಪ್ರತಿಭಾಶಾಲಿಯಾದರೆ ಕಾವ್ಯರಚನೆಯ ಪರಿಣಾಮವು ರಮಣೀಯವೆನಿಸುತ್ತದೆ ಎಂಬುದನ್ನು ಗಮನಿಸಬಹುದು.

ಕಾವ್ಯ ಹುಟ್ಟುವ ಸಂದರ್ಭವನ್ನು **'ಸಂಭವ'** ಎಂಬ ಕವನದಲ್ಲಿ **'**ಶಬ್ದರಹಿತ ನಿರಾಕಾರದೊಳಗೊಬ್ಬನೇ ಕೂತು ಕಾಯುತಿದ್ದೆ ಕವಿತೆಗೆ' ಎಂದು ತಿಳಿಸುತ್ತಾರೆ. ನೀಲಾಕಾಶದಲ್ಲಿ ಮೋಡಗಳನ್ನು ಹುಡುಕಿದ ಹಾಗೆ ಕಾವ್ಯಸೃಷ್ಟಿಗಾಗಿ ಶಬ್ದಕ್ಕೆ ಹುಡುಕಾಡುತ್ತಿದ್ದೆ ಎಂದು ಹೇಳಿ ಶೂನ್ಯದಲ್ಲಿ ಬೋಳುಮರ ನೀಲಾಕಾಶಕ್ಕೆ ಕೈಚಾಚಿ ಮೋಡಗಳ ಹುಡುಕುವ ರೀತಿ ಕವಿತೆ ಬರೆಯಲು ಕವಿಯ ಮನಸ್ಸು ಹುಡುಕುತ್ತಿತ್ತು

ಎಂದು ಅಭಿಪ್ರಾಯ ಪಡುತ್ತಾರೆ. ವಿವಿಧ ವಕ್ರಾಭಿವಕ್ರಗಳಿಂದ ಕಾವ್ಯದ ರಚನೆಗೆ ಕವಿಯ ಮನಸ್ಸು ಕಾತರದಿಂದಿರುತ್ತದೆ. ಈ ಕಾತರ ಎಷ್ಟೆಂದರೆ **'ಗಾಳ'** ಎಂಬ ಕವನದಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ಬರಗಾಲದಲ್ಲಿ ಉರಿಯುವ ಸೂರ್ಯ ಬಿಳಿ ಆಕಾಶದ ನಿರ್ಭಾವದ ಮಧ್ಯೆ ಗಾಳ ಹಾಕಿ ಮೀನ ಹಿಡಿದರೂ ಒಂದೂ ಮೀನು ಗಾಳದಲ್ಲಿ ಬೀಳುವುದಿಲ್ಲ. ಅದೇ ರೀತಿ ಕಾತರದಿಂದ ಕವಿತೆ ಬರೆಯಲು ಕವಿಯ ಮನಸ್ಸು ಕಾಯುತ್ತಿರುತ್ತದೆ. ಈ ದ್ವಂದ್ವದ ಮಧ್ಯೆ ಕವಿಯ ಮನಸ್ಸು ಕಾವ್ಯ ಬರೆಯಲು ಕೆಲವು ವೇಳೆ **'ಶಿಕಾರಿ'** ಹೊರಡುತ್ತದೆ. ಬೇಟೆಗಾರನು ನದಿ ಹಳ್ಳ-ಕೊಳ್ಳಗಳಲ್ಲಿ, ಬೆಟ್ಟ-ಗುಡ್ಡಗಳಲ್ಲಿ, ಪ್ರಾಣಿ-ಪಕ್ಷಿಗಳು ಮತ್ತು ಬೆಳ್ಳಕ್ಕಿಗಳನ್ನು ಬೇಟೆಯಾಡುವ ರೀತಿ ಕವಿಯ ಮನಸ್ಸು ಕಾವ್ಯ ಬರೆಯಲು ಈ ನಿಸರ್ಗವನ್ನು ಪರಿಕರವನ್ನಾಗಿ ಮಾಡಿಕೊಂಡು ಕಾವ್ಯ ರಚಿಸಲು ಹೊರಡುತ್ತದೆ. ಕೆಲವೊಮ್ಮೆ ಕಾವ್ಯ ರಚನೆ ನಿದ್ದೆಯ ಲೋಕವನ್ನು ದಾಟಿ ಕನಸಿನ ಲೋಕಕ್ಕೆ ಲಗ್ಗೆಯಿಟ್ಟು ಎಚ್ಚರದಲ್ಲಿ ಧ್ಯಾನಿಸುವ ಪ್ರಜ್ಞಾವಿಶೇಷವೊಂದರ ನಿರೂಪಣೆ ಎಂಬುದು ಅವರ **'ಕನಸಿನಿಂದ ನನಸಿಗೆ'** ಎಂಬ ಕವಿತೆಯಲ್ಲಿ ವ್ಯಕ್ತವಾಗಿದೆ. ಕನಸಿನಾಚೆ ದಾಟುವ ಮನಸ್ಸು ಮತ್ತು ಧ್ಯಾನಿಸುವ ಪ್ರಜ್ಞೆಗಳ ಕೂಡಲ ಸಂಗಮವನ್ನಿಲ್ಲಿ ಮನಗಾಣಬಹುದು. ಮುಂಗಾರಿನಲ್ಲಿ ಮೊದಲು ಪಾದವನ್ನಿಟ್ಟು ಆರಂಭವಾಗುವ ಮಳೆ ಕ್ರಮೇಣ ನಾಲ್ಕು ಪಾದಗಳನ್ನೂರಿ ಇಳೆಯನ್ನು ತಣಿಸುವ ಪರಿ ಅನನ್ಯವಾದುದು. ಅಂತೆಯೇ, ಕವಿಯೊಬ್ಬನಿಗೆ ಕನಸಿನಲ್ಲೆಂಬಂತೆ ಹೊಳೆಯುವ ಮೊದಲಪಾದ ಕ್ರಮೇಣ ನಾಲ್ಕು ಪಾದಗಳಾಗಿ ಪರಿವರ್ತನೆಗೊಳ್ಳುವ ಪರಿಯೊಂದನ್ನು ಭಾವಲಹರಿಯ ಮೂಲಕ ಮನಗಾಣಿಸಲಾಗಿದೆ.ಈ ಕವನವನ್ನು ಕುರಿತ ವಿ. ಚಂದ್ರಶೇಖರ ನಂಗಲಿಯವರ "ಗಗನದ ಚಂದ್ರನಿಗೂ ನೆಲದ ಜೇಡನಿಗೂ ನಡುವೆ ಕಲ್ಪಿಸಿದ ಅಭೇದ ಕಲ್ಪನೆ ಈ ಕವಿತೆಯಲ್ಲಿದೆ.ಜೇಡನ ಒಡಲನೂಲಿನ ಜಾಲ ಮತ್ತು ಚಂದ್ರನ ಬೆಳದಿಂಗಳ ನೂಲಿನ ಬಲೆ ಇಲ್ಲಿ ಅಖಂಡವಾಗಿ ಬೆರತು ಹೋಗಿದೆ"[೨] ಎಂಬ ಅಭಿಪ್ರಾಯ ಕವನದ ವ್ಯಾಪ್ತಿಯನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಜಿ.ಎಸ್.ಎಸ್. ಅವರ ಮೂರನೆಯ ಕವನ ಸಂಕಲನ **'ದೇವಶಿಲ್ಪ'**ವು, ಕನ್ನಡ ನಾಡು, ನುಡಿ, ಸಾಂಸ್ಕೃತಿಕ ಪರಂಪರೆಯ ವೈಭವವನ್ನು ಪ್ರತಿನಿಧಿಸುತ್ತದೆ. ಈ ಸಂಕಲನದಲ್ಲಿ **'ಕವಿ ಕಾವ್ಯಕ್ಕೆ'** ಎಂಬ ಕವಿತೆಯಲ್ಲಿ ಜಿ.ಎಸ್.ಎಸ್. ಅವರು ಕವಿಗೂ ಸಹೃದಯನಿಗೂ ಇರುವ ಸಂಬಂಧದಂತೆ, ಕವಿಗೂ-ಕಾವ್ಯಕ್ಕೂ ಇರುವ ಸಂಬಂಧ ಅವ್ಯಾಜವಾದುದು. ಅದು ಬಲ್ಬು ಸ್ವಿಚ್ಚುಗಳಿದ್ದಂತೆ. ಈ ನಂಟು ಇರದಿದ್ದರೆ ಕವಿಯ ವ್ಯಕ್ತಿತ್ವ ಬರಿ ಗಾಜಿನ ಬುರುಡೆಯಂತಾಗುತ್ತದೆ.ಅಂದರೆ ಕವಿಗೂ-ಕಾವ್ಯಕ್ಕೂ ಮೀರಿದ ಒಂದು ಮೂಲಶಕ್ತಿ ಕವಿಯ ಮನಸ್ಸಿನ ಒಳಗೆ ನಿಂತು ಬೆಳಕನ್ನು ನಿರ್ಮಿಸುತ್ತದೆ. ಪ್ರತಿಭೆಯಿಂದಲೇ ಕಾವ್ಯದ ಸೃಜನಕ್ರಿಯೆ ನಿರಂತರವಾಗುತ್ತದೆಯೆಂದು

ಮಾರ್ಮಿಕವಾಗಿ ಹೇಳಿದ್ದಾರೆ. ಕವಿ ಮತ್ತು ವೇದಾಂತಿಗಳು ವಿಭಿನ್ನ ಮನೋಧರ್ಮದವರು. ಕವಿಯು ಕನಸು ಕಾಣುವ ಪ್ರಜ್ಞೆಯುಳ್ಳವನು. ಪ್ರೀತಿ, ಪ್ರೇಮ, ಪ್ರಣಯ ಮುಂತಾದವುಗಳಲ್ಲಿ ನಂಬಿಕೆಯುಳ್ಳವನು. ನಿಸರ್ಗಪ್ರೇಮ ಹಾಗೂ ಸೌಂದರ್ಯಾರಾಧಕ. ಆದರೆ ವೇದಾಂತಿಯು ಸದಾ ತಾತ್ವಿಕತೆಯನ್ನೊಳಗೊಂಡ ಯೋಗಿಯ ಗುಣಉಳ್ಳವನು. ತತ್ವಜ್ಞಾನಿ ಪ್ಲೇಟೋ ತನ್ನ ಆದರ್ಶ ಗಣರಾಜ್ಯದಿಂದ ಕವಿಗಳನ್ನು ದೂರವಿರಿಸಬೇಕು, ಇವರು ಬರಿ ಕಲ್ಪನಾಲೋಕದಲ್ಲಿರುವವರು ಎಂದು ಹೇಳುತ್ತಾನೆ. ಇದನ್ನೇ ಜಿ.ಎಸ್.ಎಸ್.ಅವರು **'ಕವಿ–ವೇದಾಂತಿ'** ಕವನದಲ್ಲಿ ಭಿನ್ನವಾಗಿ ಚಿತ್ರಿಸಿದ್ದಾರೆ. ವೇದಾಂತಿಗೆ ಎಲ್ಲವೂ ನಶ್ವರಭಾವ. ಆದರೆ ಕವಿ ಎಲ್ಲದರಲ್ಲೂ ಏನೋ ಇದೆ ಎಂದು ಕಾತರವುಳ್ಳವನು.

ವೇದಾಂತಿ ಹೇಳಿದನು;
ಈ ಹೆಣ್ಣು ಮಾಯೆ
ಕವಿಯು ಕನವರಿಸಿದನು
ಓ ಇವಳು ಚೆಲುವೆ
ಇವಳ ಜೊತೆಯಲಿ ನಾನು
ಸ್ವರ್ಗವನೆ ಗೆಲುವೆ –*(ಕವಿ–ವೇದಾಂತಿ–ದೇವಶಿಲ್ಪ)*

ಈ ಮನುಷ್ಯ ಜನ್ಮದಲ್ಲಿ ಹುಟ್ಟಿದ ನಾನು ಧನ್ಯ ಎಂದ ಜಿ.ಎಸ್.ಎಸ್.ಅವರು ಕವಿ ಮತ್ತು ವೇದಾಂತಿಯ ವಿಭಿನ್ನ ತಾತ್ವಿಕತೆ ಕುರಿತು ಇಲ್ಲಿ ಹೇಳಿದ್ದಾರೆ. ನಂತರ **'ಈ ಕವಿತೆ'** ಎಂಬ ಕವನದಲ್ಲಿ, ಕವಿತೆ ಕೇವಲ ಪ್ರಣಯಾಲಾಪಗಳಲ್ಲ, ಕೇವಲ ಹೆಣ್ಣಿನ ಸೌಂದರ್ಯದ ಚಿತ್ರಣವಲ್ಲ, ಯೌವನದ ಭ್ರಮೆಗಳಲ್ಲ, ಕೋಡಂಗಿ ವೇಷಧಾರಿಯಲ್ಲ, ಇದು ಜಡಿ ಮಳೆಗೆ ಹದಮಾಡಿದ ಕೃಷಿ ಭೂಮಿಯ ರೀತಿ ಕವಿತೆಯು ಹಲವಾರು ವರ್ಷಗಳಿಂದ ವಿವಿಧ ಮಜಲುಗಳಲ್ಲಿ ಮಡುಗಟ್ಟಿದ ಭಾವನೆ ಎಂದು ಹೇಳುತ್ತಾರೆ. ಯುಗ–ಯುಗಾಂತರದಿಂದ ಮನುಷ್ಯ ಬೆತ್ತಲೆ ಜಗತ್ತಿನಲ್ಲಿ ಹೇಗೆ ಬಟ್ಟೆ ತೊಡುತ್ತಾನೆಯೋ ಅದೇ ರೀತಿ **'ಬೆತ್ತಲೆ'** ಕವನದಲ್ಲಿ ಕವಿ ತನ್ನ ಕಾವ್ಯ ರಚನೆಯಲ್ಲಿ ಪ್ರಕೃತಿ ಎಂಬ ಬೆತ್ತಲೆ ಜಗತ್ತಿಗೆ ಸೌಂದರ್ಯದ ಶಬ್ದಾರ್ಥದ ಮಾತಿನ ಅಂಗಿತೊಡಿಸಿ ಕಾವ್ಯ ರಚಿಸುತ್ತಾನೆ.

'ಕಾವ್ಯೋದಯ' ಎಂಬ ಕವನದಲ್ಲಿ ಜಿ.ಎಸ್.ಎಸ್. ರವರು 'ಆಕಾರವಿರದ ಬಂಡೆ ಹೇಗೆ ವಿಗ್ರಹವಾಗಿ ರೂಪ ಪಡೆಯುತ್ತದೆಯೋ ಹಾಗೆಯೇ, ಗೊಬ್ಬರದ ಗಬ್ಬುನಾತದ ಮಧ್ಯೆ ಗಿಡವು ಹೇಗೆ ಹೂವು ಬಿಡುತ್ತದೆಯೋ, ಅದೇ ರೀತಿ ಕಾವ್ಯ ಹುಟ್ಟುತ್ತದೆ ಎಂದು ಹೇಳುತ್ತಾರೆ. ಪ್ರತಿಭೆ ಇರುವವನ ಮನಸ್ಸಿನ ಆಳದಲ್ಲಿ ಕಾವ್ಯವು ಹಲವಾರು ದಿನಗಳ ಮೌನದಲ್ಲಿ ಸಮ್ಮಿಲನವಾಗಿ ಕಾವ್ಯೋದಯವಾಗುತ್ತದೆ. ಈ

ಕವಿತೆಗೆ ಶಾಸ್ತ್ರದ ಹಂಗೇಕೆ? ಭೂಮಿಗೆ ಭೂಗೋಳವೇಕೆ? ದಿಕ್ಕುಗಳಿಲ್ಲದೆ ಹರಿವ ನದಿಗೆ ಕೈಮರವೇಕೆ? ಅದೇ ರೀತಿ ಕಾವ್ಯಕ್ಕೆ ಶಾಸ್ತ್ರದ ಹಂಗೇಕೆ? ಎಂದು **'ಕಾವ್ಯಮಾರ್ಗ'** ಕವನದಲ್ಲಿ ತಿಳಿಸುತ್ತಾರೆ. ಕಾವ್ಯವು, ಕೆಲವು ಕಾಲ ಉದಯವಾಗದಿದ್ದಾಗ, ಪ್ರಕೃತಿಯನ್ನು **'ಆವಾಹನೆ'** (ಕವನ) ಮಾಡುವುದರ ಮೂಲಕ ಕಾವ್ಯ ರಚಿಸುತ್ತಾರೆ. 'ಎಲ್ಲೋ ದೂರದಿ ಜಿನುಗುವ ಹನಿಗಳೆ ಬನ್ನಿ ಬನ್ನಿ ಬಿರುಮಳೆಯಾಗಿ ಬಂದು ಕೆರೆ ಹಳ್ಳ ನದಿಗಳು ತುಂಬಿ ಹಸಿರು ವ್ಯಾಪಿಸಲಿ. ಎಲ್ಲೋ ದೂರದಿ ಜಿನುಗುವ ಹನಿಗಳೆ ಬನ್ನಿ ಬನ್ನಿ ರಸಗೀತೆಗಳಾಗಿ ಕಾವ್ಯ ಹೊರಹೊಮ್ಮಲಿ ಹಣತೆಯು ಬೆಳಕನ್ನು ಹಚ್ಚುವ ತೆರದಿ ಕಾವ್ಯ ಚಿಮ್ಮಲಿ. ಕೆಲಕಾಲ ಪ್ರತಿಭೆ ಮಡುಗಟ್ಟಿದಾಗ ಕವನ ಬರೆಯಲಾಗುವುದಿಲ್ಲ. ಕುವೆಂಪು ಅವರಿಗೆ ಶ್ರೀ ರಾಮಾಯಣದರ್ಶನಂ ಬರೆಯುತ್ತಿರುವ ವೇಳೆ ಸುಮಾರು ಆರು ತಿಂಗಳು ಕಾವ್ಯ ಬರೆಯಲಾಗಲಿಲ್ಲ. ಒಮ್ಮೆ ತಮ್ಮ ಮೊಮ್ಮಗನ ಅಳುವನ್ನು ಕಂಡ ಕುವೆಂಪು ಅವರಿಗೆ ರಾಮಾಯಣದಲ್ಲಿ ರಾಮಚಂದ್ರನು ಬಾಲ್ಯದಲ್ಲಿ ಚಂದ್ರನು ಬೇಕೆಂದು ಅಳುತ್ತಿರುವ ವೇಳೆ ಮಂಥರೆಯು ಕನ್ನಡಿಯ ಮೂಲಕ ಚಂದ್ರನ ಬಿಂಬವನ್ನು ತೋರಿಸುತ್ತಾಳೆ. ಈ ಸನ್ನಿವೇಶ ನೆನಪಾಗಿ **"ಮಮತೆಯಸುಳಿ ಮಂಥರೆ"** ಎಂಬ ಕಾವ್ಯಭಾಗವನ್ನು ಆರಂಭಿಸಿದರು. ಇದೇ ರೀತಿ ಜಿ.ಎಸ್.ಎಸ್.ಅವರು **'ಸ್ವಗತ'** ಕವನದಲ್ಲಿ ಈ ರೀತಿ ನಿವೇದಿಸಿಕೊಳ್ಳುತ್ತಾರೆ. 'ಏನನ್ನಾದರು ಬರೆಯಬೇಕೆಂದು ಕೂತರೆ ಈಚೀಚೆಗೆ ಏನೇನೂ ತೆರೆಯುವುದೇ ಇಲ್ಲ' ಎಂದು ಆರಂಭವಾಗುವ ಕವನ, ಮನೆ ಅಂಗಳದಲ್ಲಿ ನೀರೆತ್ತುವ ಪಂಪು, ವ್ಯವಸಾಯ, ದನಕಾಯುವವನು, ಪ್ರಕೃತಿ–ನಿಸರ್ಗ ಮುಂತಾದವುಗಳನ್ನು ನೆನಪು ಮಾಡಿಕೊಂಡು ಕವನವನ್ನು ಬರೆಯಲು ಹೊರಟರೆ ಬರೆಯದೆ ಬೆಚ್ಚಗೆ ಹೊದ್ದು ಸುಮ್ಮನೆ ಕೂತು ಬಿಡಬೇಕು ಎನ್ನುತ್ತಾರೆ.

ಜಿ.ಎಸ್.ಎಸ್. ಅವರು ಗಾಢ ತಲ್ಲೀನತೆಯಲ್ಲಿ ಕವಿತೆ ಬರೆಯುವಾಗ **'ನನ್ನ ಮಾತು'** ಎಂಬ ಕವನದಲ್ಲಿ 'ನನ್ನ ಮಾತು ನನ್ನ ಸುತ್ತಲಿನವರಿಗೆ ಮತ್ತು ಹತ್ತಿರದವರಿಗೆ ಕೇಳಿಸುವುದಿಲ್ಲ. ಅವರ ಮಾತು ಕೂಡ ನನಗೆ ಕೇಳಿಸುವುದಿಲ್ಲ. ಅವರು ತಿಳಿದುಕೊಂಡಿದ್ದರೂ ಅದು ನಾನು ಹೇಳಿದ ವಿಚಾರವಾಗಿರುವುದಿಲ್ಲ' ಎಂದು ಹೇಳುತ್ತಾರೆ. ಪ್ರಕೃತಿಯಲ್ಲಿ ಕವಿತೆ ಬರೆಯಲು ಏನಾದರೂ ಎತ್ತಿಕೊಳ್ಳಬಹುದು, ಆದರೆ, ತತ್ವಸಿದ್ಧಾಂತಗಳ ಹಂಗು ಬೇಡ. 'ನೂರಾರು ಭಾವದ ಬಾವಿ; ಎತ್ತಿಕೋ ನಿನಗೆ ಬೇಕಾದಷ್ಟು ಸಿಹಿನೀರ' ಎಂದು **'ಹಿನ್ನುಡಿ'** ಕವನದಲ್ಲಿ ಕವಿಯ ಕಾವ್ಯ ಪರಿಕರದ ಬಗ್ಗೆ ಹೇಳುತ್ತಾರೆ. ಕಾವ್ಯ ರಚನೆಯ ಪರಿಕರವು ನಿಸರ್ಗದತ್ತವಾದರೂ, ಅದನ್ನು ಕಾವ್ಯ ಪ್ರತಿಮೆಗಳಾಗಿಸಿ ವರ್ಣಿಸುವುದು ಪ್ರತಿಭೆಯುಳ್ಳ ಕವಿಯದ್ದು ಎಂದು

'ಪ್ರತಿಮೆಗಳು' ಎಂಬ ಕವನದಲ್ಲಿ 'ಹಣತೆಯನ್ನು ಕಣ್ಣಾಗಿಸಿ, ಮುಂಜಾವದ ಇಬ್ಬನಿಯನ್ನ ಎಣ್ಣೆಯಾಗಿಸಿ, ಹಣತೆಯ ಬೆಳಕನ್ನೆಲ್ಲಾ ಕಣ್ಣಿನ ತೇಜಸ್ಸಾಗಿಸಿ, ಕಣ್ಣಿನ ಹಣತೆಯಲ್ಲಿ ನಿನ್ನೆಯ ಆಸೆಗಳು, ನಾಳೆಯ ಕನಸುಗಳು ಕಾಯುತ್ತವೆ' ಎಂದು ಹೇಳುತ್ತಾರೆ.

'ನಾನು ಬರೆಯುತ್ತೇನೆ' ಎಂಬ ಕವನದಲ್ಲಿ ಮೇಲಿನ ಎಲ್ಲವುಗಳನ್ನು ಕುರಿತ ಕಾವ್ಯ ಬರೆಯುವುದಲ್ಲದೆ 'ನಾನು ಬರೆಯುತ್ತೇನೆ ಕಾಳ ರಾತ್ರಿಗಳಲ್ಲಿ ಒಂದು ಧ್ವನಿಯನ್ನು ಕುರಿತು, ಕೀರ್ತಿಗೆ ಕಚ್ಚಾಡುವವರನ್ನು, ಕನಸು ಕಾಣುವವರನ್ನು, ಕಾಲಚಕ್ರದಲ್ಲಿ ಮರದೆಲೆ ಉದುರಿ ಬೋಳಾಗುವುದನ್ನು ಕುರಿತ ಕಾವ್ಯ ಬರೆಯುತ್ತೇನೆ' ಎನ್ನುತ್ತಾರೆ.

ಜಿ.ಎಸ್.ಎಸ್. ಅವರ ಕೆಲವು ಕವನಗಳಂತೂ ಕಾವ್ಯಮೀಮಾಂಸೆಯ ಕವನಗಳೇನೋ ಎನ್ನುವಂತಿವೆ. ಪ್ರಸ್ತುತ **'ತೃಪ್ತಿ'** ಕವನವು ಭಾಷೆಯ ಮೂಲಕ ಕಾಲಗಣನಾ ವ್ಯಾಪಾರದೊಂದಿಗೆ ಕವಿ–ಕಾವ್ಯ, ಪ್ರತಿಭೆ–ಸ್ಫೂರ್ತಿಯ ಬಗ್ಗೆ ತಿಳಿಸುತ್ತದೆ. ವಯಸ್ಸಾಗುವುದು ಕವಿಗೆ ಕವಿತೆಗಳಿಗಲ್ಲ ಎಂಬ ಭಾವ ಇಲ್ಲಿ ವ್ಯಕ್ತವಾಗಿದೆ. ಏನೇ ಆಗಲಿ ಕಾಲಕ್ಕೆ ಸೆಡ್ಡುಹೊಡೆದು ನಿತ್ಯವೂ ಹೊಸದಾಗುವ ಭಾವಲೋಕದ ಕಾಲವನ್ನು ಮೀರುವ ಮತ್ತು ಮೀರಲಾರದ ಸ್ಥಿತಿಗಳ ನಡುವಿನ ಸೂಕ್ಷ್ಮ ತಲ್ಲಣವೊಂದು ಇಲ್ಲಿ ವ್ಯಕ್ತವಾಗಿದೆ. ಬಾಲ್ಯದಲ್ಲಿ ಪುಟಿವ ಜೀವಂತಿಕೆಯ ವಿವರಗಳು ಹಾಡುವ ಹಕ್ಕಿ, ಮಧುಮಾಸದ ಮರ, ಓಡುವ ಜಿಂಕೆ, ರೆಕ್ಕೆಬಿಚ್ಚಿ ಭೂಮಿ ಬಿಟ್ಟು ಹಾರಲು ಹಾತೊರೆಯುವ ಚಿಟ್ಟೆ ಇವೆಲ್ಲಾ ನಿಯಮಗಳನ್ನು ಮೀರುತ್ತಿರುವ ಸೂಚನೆಯನ್ನು ದಾಖಲಿಸಿವೆ. ನಂತರ ಕಾಲದ ನಿಯಮಕ್ಕೆ ಬದ್ಧನಾದ ಕವಿಯ ಹಲ್ಲುಹೋಗಿ, ಬೆನ್ನುಬಾಗಿ, ಸಂಜೆ ನೆಲಕ್ಕಂಟಿಕೊಂಡಿರುವ ಮುದಿತನವು ಮತ್ತಷ್ಟು ಗಾಢವಾಗಿ ಇಲ್ಲಿ ವ್ಯಕ್ತವಾಗಿದೆ. ಈ ಎರಡರ ಮಧ್ಯೆ ಉಂಟಾಗಿರುವ ತಳಮಳವೆ ಈ ಕವಿತೆಯ ಮೂಲವಸ್ತುವಾಗಿದೆ. ಮೇಲುನೋಟಕ್ಕೆ ಈ ಕವಿತೆಯು ಕವಿಯನ್ನು ಕುರಿತಂತೆ ಭಾಸವಾದರೂ ಇದು ಕಾಲವನ್ನು ಕುರಿತ ಕವಿತೆಯಾಗಿದೆ ಎಂಬುದನ್ನು ಮರೆಯುವಂತಿಲ್ಲ.

ಬಿ.ಸಿ. ರಾಮಚಂದ್ರ ಶರ್ಮರು 'ಜಯನಗರದ ಹಿರಿಯ ಪ್ರಜೆಗಳು' ಎಂಬ ತಮ್ಮ ಕವನದಲ್ಲಿ "ನಿವೃತ್ತರಲ್ಲ ಪ್ರವೃತ್ತರು, ಪ್ರಬುದ್ಧರು, ಹುತ್ತ ಕಟ್ಟುವರೆಲ್ಲಾ ಮಿನಿ ಋಷಿಗಳು"[೩] ಎಂಬ ಆಶಾ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಕವಿಯು ಕವಿತೆ ಬರೆಯಲು ಹೇಗೆ ಲೋಕದಲ್ಲಿನ ವಿಚಾರಗಳನ್ನು ಅನುಸಂಧಾನಗೊಳಿಸಿ, ಕವನಗಳನ್ನು ಸಹೃದಯನಾಗಿ ಬೆಲೆಕಟ್ಟಿ ತೂಗಿ, ರಸಿಕತೆಯಿಂದ ಆಸ್ವಾದಿಸಿ, ಪ್ರಬುದ್ಧರ ಮನಸ್ಸಿನಲ್ಲಿ ಅನೇಕಾರ್ಥಗಳನ್ನು ಹೊಳೆಯಿಸುತ್ತ ಅಪ್ಸರೆಯರ ಸೊಬಗ ಸೂರೆಗೊಳ್ಳುವಂತೆ ರಚಿಸುತ್ತಾನೆ ಎಂಬ ಕವಿತೆ ರಚನೆಯ ಸೊಬಗನ್ನು **'ಮುಗಿಯದ ಬಯಲಲ್ಲಿ'** ಎಂಬ ಕವನದಲ್ಲಿ ಕಾಣಬಹುದಾಗಿದೆ.

ಕಾವ್ಯದ ಸೃಷ್ಟಿಕ್ರಿಯೆಗೆ ಸಂಬಂಧಪಟ್ಟ ಜೇಡನ ರೂಪಕ ಕುವೆಂಪು ಅವರಲ್ಲಿ ಇಡೀ ಸೃಷ್ಟಿ ರಚನೆಯ ಕುಶಲತೆ ಚಂದಕೆ, ಜಗದಚ್ಚರಿಯ ಅಂದದ ಒಪ್ಪಂದಕ್ಕೆ ಅಭಿವ್ಯಕ್ತಿಯಾಗಿ ಮೂಡಿಬಂದಿದೆ; "ನೆಯ್ದಾಳುತಿದೆ ಜಗವನೊಂದತಿ ವಿರಾಟ್‌ಮನಂ ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ ಜೀವಿಗಳ್ಗಿಚ್ಚೆಯಾ ಸ್ವಾತಂತ್ರ್ಯ ಭಾವವಂ ನೀಡಿ" ಎಂಬ ನುಡಿಗಳನ್ನಿಲ್ಲಿ ಜ್ಞಾಪಿಸಿಕೊಳ್ಳಬಹುದು. ಇದೇ ಬಗೆ ಉಪನಿಷತ್ತುಗಳ 'ಋಷಿವಾಣಿ' ಯಲ್ಲಿರುವುದನ್ನು ಕುವೆಂಪು ಅವರೇ ಉದಾಹರಿಸಿದ್ದಾರೆ.

ಜಿ.ಎಸ್.ಎಸ್. ಅವರೇ ಹೇಳಿದಂತೆ, "ಕವಿಯು ಕೆಲವು ವೇಳೆ ಕವನ ಬರೆಯುವುದು ಅನ್ಯ ಸಾಹಿತ್ಯ ಪ್ರೇರಣೆಯಿಂದ, ಕೆಲವು ವೇಳೆ ಲೋಕ ಘಟನೆಗಳಿಗೆ ತೋರುವ ತತ್‌ಕ್ಷಣದ ಪ್ರತಿಕ್ರಿಯೆಗಳಿಂದ, ಕೆಲವು ವೇಳೆ ಗಾಢವಾದ ಚಿಂತನೆಯಿಂದ, ಕೆಲವು ವೇಳೆ ಬಹುಕಾಲದ ಪರಿಭಾವನೆಯಿಂದ, ಕೆಲವು ವೇಳೆ ನಮ್ಮ ಎಚ್ಚರದಾಚೆಯ ನಿಗೂಢ ನೆಲೆಗಳಿಂದ ಹುಟ್ಟಿಕೊಳ್ಳುವ ಒಂದು ವಿಸ್ಮಯವಾಗಿದೆ. ಒಟ್ಟಿನಲ್ಲಿ ನಾನೇಕೆ ಬರೆಯುತ್ತೇನೆ ನಾನು ಹೇಗೆ ಬರೆಯುತ್ತೇನೆ ಎನ್ನುವುದನ್ನಾಗಲೀ ಖಚಿತವಾಗಿ ಹೇಳಲು ಸಾಧ್ಯವೇ ಇಲ್ಲ. ಆದರೆ ಇಷ್ಟು ಮಾತ್ರ ನಿಜ; ಅದು ಹೇಗೊ ನನ್ನ ಅನುಭವಗಳನ್ನು, ಭಾವನೆಗಳನ್ನು, ಚಿಂತನೆಗಳನ್ನು ಕವಿತೆಯ ಮಾಧ್ಯಮದಲ್ಲಿ ಅಭಿವ್ಯಕ್ತಪಡಿಸುವ ಸಾಮರ್ಥ್ಯವೊಂದು ನನಗೆ ದತ್ತವಾಗಿದೆ. ಇದರ ಪರಿಣಾಮವಾಗಿ ನನ್ನದೇ ಆದ ಅನುಭವ ವಿಶೇಷವನ್ನು ನನ್ನ ಸುತ್ತಣ ಸಮಾಜದೊಂದಿಗೆ ನಾನು ಹಂಚಿಕೊಳ್ಳಲು ಸಾಧ್ಯವಾಗಿದೆ. ಹೀಗೆ ನನ್ನ ಅನುಭವದೊಂದಿಗೆ ಇತರರೂ ಪಾಲ್ಗೊಳ್ಳುವಂತಾಗುವುದು ನನಗೆ ಅತ್ಯಂತ ಪ್ರಿಯವಾದ ಸಂಗತಿಯಾಗಿದೆ.ಕಾವ್ಯ ಮೂಲತಃ ಒಂದು ಸಂವಾದ.ಮೊದಲು ಜಗತ್ತಿನೊಂದಿಗೆ; ಅನಂತರ ಸಹೃದಯರೊಂದಿಗೆ"[೪] ಎಂಬ ಕವಿ ನೀಡಿದ ಈ ವಿವರಣೆ ಹೆಚ್ಚು ಸಮಂಜಸವಾಗಿದೆ ಎಂದು ತಿಳಿಯಬಹುದಾಗಿದೆ.

೨. ಪ್ರತಿಭೆ–ಸ್ಫೂರ್ತಿ

ಕನ್ನಡ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದಲೂ ಪ್ರತಿಭೆ–ಸ್ಫೂರ್ತಿಗೆ ಸಂಬಂಧಿಸಿದ ವಿಚಾರಗಳು ಇರುವುದನ್ನು ನಾವು ಗಮನಿಸಿದ್ದೇವೆ. ಆದಿಕವಿ ಪಂಪನಲ್ಲಿ ಮೊದಲು ಪ್ರತಿಭೆಯ ಮಾದರಿಯನ್ನು ಗುರುತಿಸಬಹುದು. ಪಂಪಭಾರತದಲ್ಲಿ 'ಬೆಳಗುವೆನಿಲ್ಲಿ ಲೌಕಿಕಮನ್ ಅಲ್ಲಿ ಜಿನಾಗಮಮಂ' ಎಂದ ಪಂಪ ಲೌಕಿಕ ವಿಚಾರದಲ್ಲಿ 'ಕರ್ಣರಸಾಯನಮಲ್ತೆ ಭಾರತಂ'[೫] ಎಂದು ಹೇಳುವಲ್ಲಿ ತನ್ನನ್ನು ತಾನು ಕಾವ್ಯವಸ್ತುವಿಗೆ ಸಂಪೂರ್ಣ ಒಪ್ಪಿಸಿಕೊಂಡು ತಲ್ಲೀನ ನೆಲೆಯಲ್ಲಿ ಕೃತಿ ರಚನೆಮಾಡಿದ್ದಾನೆ. ಹರಿಹರನು ಪ್ರತಿಭೆಯನ್ನು ಕಾವ್ಯವಸ್ತುವಿಗೆ ಇಡಿಯಾಗಿ ಒಪ್ಪಿಸಿಕೊಳ್ಳದೆ ಅದನ್ನು ತನ್ನ ಉದ್ದೇಶಕ್ಕೆ

ತಕ್ಕಂತೆ ಬಳಸಿಕೊಳ್ಳುತ್ತಾನೆ. ಕಾವ್ಯ ರಚಿಸುವಾಗ ಪ್ರತಿಭೆಯಿಂದ ಸ್ಫೂರ್ತಿಗೊಂಡು ಭಕ್ತಿ ಪರವಶವಾಗಿ ಕಾವ್ಯ ರಚಿಸುತ್ತಾನೆ.

ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಎರಡೂ ಮಾದರಿಗಳನ್ನು ನಾವು ಕಾಣಬಹುದು.ಕುವೆಂಪು ಮತ್ತು ಪಂಪ ಮಾದರಿಯನ್ನು 'ತನ್ಮಯ ಪ್ರತಿಭೆ'ಯ ಧಾರೆಗೆ ಸೇರಿಸಿದರೆ, ಜಿ.ಎಸ್.ಎಸ್. ರವರು ಹರಿಹರ ಮಾದರಿಯ 'ನಿಯಂತ್ರಿತ ಪ್ರತಿಭೆ'ಯ ಗುಂಪಿಗೆ ಸೇರುತ್ತಾರೆ. ಕುವೆಂಪು ತಮ್ಮ ಕಾಲದ ಸಾಂಸ್ಕೃತಿಕ ಸವಾಲುಗಳಿಗೆ ಇಡಿಯಾಗಿ ತಮ್ಮನ್ನು ಒಪ್ಪಿಸಿಕೊಂಡವರು ಮತ್ತು ಮುಖಾಮುಖಿಯಾದವರು. ಅವೈದಿಕ ನೆಲೆಯಿಂದ ಬಂದ ಕುವೆಂಪು ವೈದಿಕ ಪರಿಸರದ ಪ್ರಭಾವವನ್ನು ಒಪ್ಪಿಕೊಂಡು ತಮ್ಮ ಅನನ್ಯತೆಯನ್ನು ಸ್ಥಾಪಿಸಿದ ಕ್ರಮ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಘಟನೆಗಳಲ್ಲೊಂದು. ಏಕಲವ್ಯನ ಗುರುಭಕ್ತಿಯನ್ನು ಒಪ್ಪಿಕೊಂಡೂ ಹಾಗೂ ಅರ್ಜುನ–ದ್ರೋಣರ ಕ್ಷಾತ್ರ–ವೈದಿಕ ಅಧಿಕಾರವನ್ನು ಪ್ರಶ್ನಿಸುವ 'ಬೆರಳ್‌ಗೆ ಕೊರಳ್' ನಾಟಕವನ್ನು ನಾವಿಲ್ಲಿ ನಿದರ್ಶನಕ್ಕಾಗಿ ಗಮನಿಸಬಹುದು. ಕುವೆಂಪು ಅವರ ಸಮಗ್ರಸಾಹಿತ್ಯ ಸೃಷ್ಟಿಯ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಒತ್ತಾಯದ ತುರ್ತಿನಿಂದ ಕುವೆಂಪು ಪ್ರತಿಭೆ ಅದನ್ನು ಸ್ವೀಕರಿಸಿದೆ. ಹಾಗೆ ನೋಡಿದರೆ ಜಿ.ಎಸ್.ಎಸ್. ರವರು ನವೋದಯ ಸಾಹಿತ್ಯ ಸಂದರ್ಭದಲ್ಲಿ ಮೈಸೂರು ಸಾಂಸ್ಕೃತಿಕ ಕೇಂದ್ರದಲ್ಲಿ ರೂಪುಗೊಂಡ ಅವೈದಿಕ ಪ್ರತಿಭೆಗಳಲ್ಲಿ ಒಬ್ಬರು.ಕುವೆಂಪು ಅವರಂತೆಯೇ ಇವರಿಗೂ ಕೆಲವು ಸಾಂಸ್ಕೃತಿಕ ಸವಾಲುಗಳಿದ್ದವು. ಜೊತೆಗೆ ಕುವೆಂಪು ಅವರ ಮಾದರಿಯೂ ಕಣ್ಣ ಮುಂದಿತ್ತು. ಆದರೆ ಜಿ.ಎಸ್.ಎಸ್. ರವರ ಪ್ರತಿಭೆ ತನ್ನ ಕಾಲದ ಸಾಂಸ್ಕೃತಿಕ ಸವಾಲುಗಳನ್ನು ಕುವೆಂಪು ಸ್ವೀಕರಿಸಿದ ಹಾಗೆ ಸ್ವೀಕರಿಸಿದಂತೆ ತೋರುವುದಿಲ್ಲ. ಒಂದು ರೀತಿಯಲ್ಲಿ ಜಿ.ಎಸ್.ಎಸ್.ರವರ ಪ್ರತಿಭೆ 'ನಿಯಂತ್ರಿತ ಪ್ರತಿಭೆ' ಧಾರೆಗೆ ಸೇರುವಂಥಹುದು.

ಪ್ರತಿಭೆಯು ಒಬ್ಬ ಸಹೃದಯನಿಗೆ ಹೇಗೆ ಬರುತ್ತದೆ? ಪ್ರತಿಭೆ ಇಲ್ಲದವನು ಕವಿಯಾಗಲಾರನು. ಸ್ಫೂರ್ತಿಯು ಎಲ್ಲರಿಗೂ ಬರುತ್ತದೆಯೇ? ಆದರೆ ಸ್ಫೂರ್ತಿ ಹೆಚ್ಚಾದಾಗ ಹೇಗೆ ಸಹೃದಯನು ಪ್ರತಿಭೆಯಿಂದ ಕವಿಯಾಗುತ್ತಾನೆ, ಸ್ಫೂರ್ತಿಯು ಕೆಲವು ವೇಳೆ ದೈವಿಶಕ್ತಿಯನ್ನು ಒಳಗೊಂಡಿರಬಹುದು. "ಪ್ರತಿಭೆಯು ಕವಿಗೆ ಮಾತ್ರ ನಿಜವಾಗಿಯೂ ಒಂದು ರೀತಿಯ ದೃಷ್ಟಿಯ ಕಾರ್ಯ. ಅದು ಬುದ್ಧಿಯ ಕಣ್ಣಲ್ಲ, ಹೃದಯದ ಕಣ್ಣು. ಕವಿಯು ಈ ಒಳಗಣ್ಣು ತೆರೆದಾಗ ವಿಶ್ವದ ಹೃದಯವೇ ಅವನಿಗೆ ತೆರೆಯುತ್ತದೆ"[೩] ಎಂಬ ಅಭಿನವಗುಪ್ತನ ಹೇಳಿಕೆಯನ್ನು ಗಮನಿಸಬಹುದು. ಈ ಪ್ರತಿಭೆ–ಸ್ಫೂರ್ತಿಯನ್ನು ಕೆಲವು ಕವನಗಳ ಮೂಲಕ ಜಿ.ಎಸ್.ಎಸ್. ರವರು ಹುಡುಕಲು ಹೊರಟಿದ್ದಾರೆ.

'ಪ್ರತಿಭೆ–ಸ್ಫೂರ್ತಿ' ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಸ್ಫೂರ್ತಿಯನ್ನು ಕುರಿತು **'ಇರುಳ ಮೌನಗಳಲ್ಲಿ'** ಎಂಬ ಕವನದಲ್ಲಿ ಕಗ್ಗತ್ತಲಾವರಿಸಿ, ತಾರೆಗಳುದಯಿಸಿ, ಗಾಳಿ ಜೋಗುಳ ಹಾಡಿ, ಜಗಕೆ ಶಾಂತಿಯನೂಡಿ ಮೌನವನು ತೊಟ್ಟಿಲಲಿ ತೂಗಿದಾಗ ಕಡಲಿನಾಳದಿಂದ, ಯಾವ ಭಾವವೋ ಬಂದು, ತಲೆಯ ಬಳಿ ನಿಂದು ರೂಪ ಕೊಡು ಎಂದು ಸ್ಫೂರ್ತಿ ಎಚ್ಚರಿಸುತ್ತದೆ ಮತ್ತು ಜಗತ್ತೆಲ್ಲಾ ನೀರವ ಮೌನವಾಗಿ ನಿದ್ರಿಸಿ ಕನಸ ಕಾಣುವಾಗ ಚಂದಿರನ ಬೆಳಕಿನಲ್ಲಿ ಜೀವಿಗಳೆಲ್ಲಾ ತನ್ಮಯತೆಯಿಂದ ಇರುವ ವೇಳೆ ಸ್ಫೂರ್ತಿ ಬಂದು ಕಾವ್ಯ ರಚಿಸಲು ಕಾತರಿಸುತ್ತದೆ ಎಂದು ಚಿತ್ರಿಸುತ್ತಾರೆ.

> **ಇರುಳ ಮೌನಗಳಲ್ಲಿ**
> **ನಿದ್ರಾ ಸಮುದ್ರದಲಿ ಜಗ ಮುಳುಗಿದಲ್ಲಿ**
> **ನೀರವದ ಲೋಕದಲಿ**
> **ದಿವ್ಯತಮ ಶಾಂತಿಯಲಿ**
> **ಸೃಷ್ಟಿಯೇ ತಪಸ್ಸೈಯಲನುವಾಗುವಲ್ಲಿ**
> **'ರೂಪಕೊಡು' ಎಂದೆನ್ನ ಪೀಡಿಸುವುದು.–––(ಇರುಳ ಮೌನಗಳಲ್ಲಿ –ಸಾಮಗಾನ)**

ಪ್ರತಿಭೆ–ಸ್ಫೂರ್ತಿ ಸದಾ ಮಡುಗಟ್ಟಿಕೊಂಡು ಕಾವ್ಯ ಉದಯಿಸುವ ಲಕ್ಷಣವನ್ನು ವಿವರವಾಗಿ ಜಿ.ಎಸ್.ಎಸ್. ಅವರು ಹೇಳಿದ್ದಾರೆ. ಇಂಥ ಮುಕ್ತಮನಸ್ಸಿನ ತಮ್ಮ ಅನುಭವಗಳನ್ನು ಕಾವ್ಯವಾಗಿಸಲು ಬೇಕಾಗಿರುವುದು ಸ್ಫೂರ್ತಿ ಮತ್ತು ಪ್ರತಿಭೆಯನ್ನು ಜಿ.ಎಸ್.ಎಸ್. ಅವರು **'ಸ್ಫೂರ್ತಿ–ಪ್ರತಿಭೆ'** ಎಂಬ ತಮ್ಮ ಎರಡೇ ಸಾಲಿನ ಕವನದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೇಳುತ್ತಾರೆ.

> **ಸ್ಫೂರ್ತಿಯ ಕರು ಬಾಯಿಕ್ಕಲು ಪ್ರತಿಭೆಯ ಕೆಚ್ಚಲಿಗೆ**
> **ಶಬ್ದಾರ್ಥದ ಹಾಲಿಳಿವುದು ಕವಿಪಾತ್ರೆಯ ಒಳಗೆ– (ಸ್ಫೂರ್ತಿ–ಪ್ರತಿಭೆ)**

ಪ್ರತಿಭೆ–ಸ್ಫೂರ್ತಿಯ ಮೂಲಕ ಹೊರಹೊಮ್ಮುವ ಭಾವಾಭಿವ್ಯಕ್ತಿಗೆ ಶಬ್ದಾರ್ಥದ ನೆರವು ಅತ್ಯಗತ್ಯ.ಜಿ.ಎಸ್.ಎಸ್ ಅವರ ಕಾವ್ಯದ ವೈಶಿಷ್ಟ್ಯತೆ ಇರುವುದೇ ಶಬ್ದಾರ್ಥಗಳ ನೇರ ಸಂಬಂಧದಲ್ಲಿ.ಇದನ್ನು ಕೆ. ವಿ. ನಾರಾಯಣ ಅವರು ಜಿ.ಎಸ್.ಎಸ್. ಅವರ 'ಸಮಗ್ರ ಕಾವ್ಯ'ದ ಪ್ರಥಮ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ ಹೀಗೆ ಸೂಕ್ತವಾಗಿ ಗುರುತಿಸಿದ್ದಾರೆ."ಜಿ.ಎಸ್.ಎಸ್. ಅವರ ಹಲವು ಜನಮೆಚ್ಚಿದ ಕವಿತೆಗಳಲ್ಲಿ ಎದ್ದು ಕಾಣುವುದು ಪ್ರಸಾದ ಗುಣ.ಇವರ ಕವನ ಸಮುದಾಯದ ಅಧಿಕತಮ ಕವಿತೆಗಳ ಸಾಧಾರಣ ಧರ್ಮವನ್ನು ಗಮನಿಸಿದರೆ ಕವಿ ಕಾವ್ಯ ಶರೀರವನ್ನು, ಪದ ಸಂಯೋಜನೆಯನ್ನು ಬಳಸುವುದು ಅರ್ಥವನ್ನು ಓದುಗನಿಗೆ ಸಂವಹನಗೊಳಿಸುವ ಪಾರದರ್ಶಕ ಮಾಧ್ಯಮವನ್ನಾಗಿ ಎಂಬುದು ಸ್ಪಷ್ಟವಾಗುತ್ತದೆ. ಕಾವ್ಯಶರೀರ 'ಅರ್ಥ'ವನ್ನು ಮುಚ್ಚಿಡಲು ರೂಪಗೊಂಡುದಲ್ಲ. ಹಾಗೆಯೇ 'ಅರ್ಥ'ವನ್ನು

ಗ್ರಹಿಸಿಕೊಳ್ಳಲೆಂದೇ ಕಾವ್ಯ ಶರೀರವನ್ನು ರೂಪಿಸುವ ನವ್ಯಕವಿಗಳಲ್ಲಿ ಕೆಲವರ ಬಗೆಯೂ ಇವರದ್ದಲ್ಲ. ಇದರಿಂದಾಗಿ ತಿಳಿಯುವುದಿಷ್ಟು; ಕವಿ ತನ್ನ ಅನುಭಾವಜನ್ಯ ಭಾವ ಇಲ್ಲವೇ ಅರ್ಥಗಳನ್ನು ಭಾಷಿಕವಾಗಿ ನಿರೂಪಿಸುತ್ತಾರೆ; ಆ ಮೂಲಕ ಅನುಭವದ ಗ್ರಹಿಕೆಯನ್ನು ಕವಿತೆಯ ರಚನೆಯ ಮೂಲಕ ದಾಖಲಿಸಿ ಬಿಡುಗಡೆ ಮಾಡುತ್ತಾರೆ ಮತ್ತು ಅವರ ಕಾವ್ಯದಲ್ಲಿ ಕಂಡುಬರುವ ಪ್ರಸಾದ ಗುಣ, ಪಾರದರ್ಶಕತೆ ಮತ್ತು ಸರಳತೆ"[೮] ಎಂಬುದರ ಮೂಲಕ ಜಿ.ಎಸ್.ಎಸ್. ಕಾವ್ಯದ ಸ್ವರೂಪವನ್ನು ಕೆ.ವಿ.ನಾರಾಯಣ ಸ್ಪಷ್ಟವಾಗಿ ವಿದಿತಗೊಳಿಸಿದ್ದಾರೆ.ಭಾಷೆಯು ಅಲಂಕಾರಿಕವಾದಷ್ಟೂ ಕೇಳುಗರನ್ನು, ಓದುಗರನ್ನು ಮೋಸಗೊಳಿಸಲು ಯತ್ನಿಸುತ್ತಿರುತ್ತದೆ. ಭಾಷೆಯು ಸರಳವಾದಷ್ಟೂ ಪಾರದರ್ಶಕ ಗುಣಗಳು ಸ್ವಲ್ಪಮಟ್ಟಿಗಾದರೂ ಇದ್ದರೆ ಅದು ಓದುಗರನ್ನು ಆಕರ್ಷಿಸುತ್ತದೆ.ಇದಕ್ಕೆ ಹನ್ನೆರಡನೇ ಶತಮಾನದ ವಚನಗಳೇ ಸಾಕ್ಷಿ ಎನ್ನಬಹುದು.

ಶಿವರುದ್ರಪ್ಪನವರ ಮೊದಲ ಕವಿತಾ ಸಂಕಲನ 'ಸಾಮಗಾನ'ದ ಕವಿತೆಗಳಲ್ಲಿ ಪ್ರತಿಭೆ–ಸ್ಫೂರ್ತಿ ಮತ್ತು ಕಾವ್ಯದ ಸೃಷ್ಟಿಕ್ರಿಯೆಯ ಮಹತ್ವವನ್ನು **'ಕಾವ್ಯ ಕೃಪೆ'** ಎಂಬ ಕವಿತೆಯು ಕವಿಯ ಅಂತರಂಗ ಕಾವ್ಯಾಗಮನಕ್ಕಾಗಿ ಸತತವಾಗಿ ಮಟಿಯುತ್ತಿರುವುದನ್ನು ತಿಳಿಸುತ್ತದೆ. ಪ್ರತಿಯೊಬ್ಬ ಕವಿಗೂ ಕಾವ್ಯ ಸಂಸಾರದಲ್ಲಿ ಪ್ರವೇಶಿಸಿದೊಡನೆಯೇ ಅನಂತಲೋಕದ ದರ್ಶನವಾಗುತ್ತದೆ. ಕಾವ್ಯಕೃಪೆಪಡೆದು ಕೃತಾರ್ಥನಾಗಬೇಕೆಂಬ ಹಂಬಲ ಮಹತ್ತರವಾಗುತ್ತದೆ. ಜಿ.ಎಸ್.ಎಸ್. ಅವರೇ ಅಭಿಪ್ರಾಯಪಡುವಂತೆ ಕಾವ್ಯ ರಚನೆಯಲ್ಲಿ ಕವಿಯು "ಹೃದಯಾಂತರಾಳದಲ್ಲಿ ಹೊಮ್ಮುವ ನೋವನ್ನು, ಶ್ರೀಮಂತವಾದ ಅನುಭವಸಾರವನ್ನು ಶಾಂತವಾದ ಭಾಷೆಯಲ್ಲಿ ಪ್ರಕಟಿಸುವ ಕವಿಕಾರ್ಯ ಬಹುದೊಡ್ಡದು. ಜಗದ ಶ್ರೀಮಂತಿಕೆಯನ್ನು ಅಂತರಂಗದ ಅನಂತ ಧೀಮಂತಲೋಕದಲ್ಲಿ ತನ್ನದಾಗಿಸುತ್ತ ಸಾಗುವ ಕವಿಯು ಕಾರ್ಯ ಲೋಕಸಂಗತಿಯನ್ನು ಮಿಡಿಯುತ್ತದೆ. ಅದಕ್ಕಾಗಿಯೇ ಒಳದನಿಯನ್ನು ಪ್ರತಿನಿಧಿಸುವ ಕಾವ್ಯ ಕೃಪೆಗೆ ಕವಿಹೃದಯ ಸದಾ ಮಣಿಯುವುದೆಂದು"[೯] ಜಿ.ಎಸ್.ಎಸ್. ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕವಿತೆ ಕುರಿತು ಜಿ.ಎಸ್.ಎಸ್. ಅವರ ಚಿಂತನೆ ಆಕರ್ಷಕವಾದುದು.ಕಾವ್ಯ ಸ್ಫೂರ್ತಿಯ ಫಲ. ಈ ಕಾವ್ಯಸ್ಫೂರ್ತಿ ಸದಾ ಚಂಚಲೆಯೆಂಬುದು ಕವಿಯ ಭಾವ. ತಾನು ಹೃದಯ ತೆರೆದು ಬರೆಯಲಾರೆ. ಮಿಂಚಿನ ಕ್ಷಣಗಳನ್ನು ಹಿಡಿದಿಡಲಾಗುವುದಿಲ್ಲ. ಬೂದಿಯಲ್ಲಿ ಬಿದ್ದ ಕಿಡಿಗಳನ್ನು ಹುಡುಕಲಾಗುವುದಿಲ್ಲ. ಆದ್ದರಿಂದ ಕವಿಗೆ ಯಾರ ಕೃಪೆಯೂ ಬೇಕಿಲ್ಲ. ಯಾರ ಹಂಗಿಗೂ ಒಳಗಾಗುವುದು ಬೇಡ. ಯಾಕೆಂದರೆ ಈ

ಕಾವ್ಯಸ್ಫೂರ್ತಿ ಚಂಚಲೆ ಎಂದು **'ಕವಿತೆಗೆ'** ಎಂಬ ಕವನದಲ್ಲಿ ತಿಳಿಸಿದ್ದಾರೆ. ಹಾಗೆಯೇ **'ಪ್ರತಿಭೆ-ಪಾಂಡಿತ್ಯ'** ಎಂಬ ಕವಿತೆಯಲ್ಲಿ ಅವೆರಡರ ಸಂಬಂಧದ ಮೂಲಕ ಕಾವ್ಯ ಸಾಧಿಸುವ ಉತ್ಕೃಷ್ಟತೆಯನ್ನು ಶಿವರುದ್ರಪ್ಪನವರು ವರ್ಣಿಸಿದ್ದಾರೆ. ಋತುಪರ್ಣ ಮಹಾರಾಜನನ್ನು ಕಾರ್ಕೋಟಕನ ವಿಷ ಹಿಡಿದ ನಳ (ಬಾಹುಕ) ಒಂದೇ ಸುಳಿಯಲ್ಲಿ ಸ್ವಯಂವರಕ್ಕೆ ಸಾಗಿಸಿದ್ದು ಮಿಂಚಿನ ಪ್ರತಿಭೆ. ನಳನ ಈ ಅಶ್ವ ವಿದ್ಯೆ ಋತುಪರ್ಣನನ್ನು ಮೆಚ್ಚಿಸಿತು.ಆತನು ತನ್ನ ಪಾಂಡಿತ್ಯ ಪ್ರದರ್ಶಿಸಲು ಶಾಖೋಪ ಶಾಖೆಗಳಲ್ಲಿ ಚಾಚಿರುವ ಮರದಲ್ಲಿ ಎಲೆಗಳೆಷ್ಟೆಂಬುದನ್ನು ಕ್ಷಣಾರ್ಧದಲ್ಲಿ ಹೇಳಬಲ್ಲೆ ಎಂದು ಮರದ ಎಲೆಗಳ ಸಂಖ್ಯೆ ಎಂಬತ್ತು ಸಹಸ್ರ ಲಕ್ಷದ ಮೇಲೆ ನಾನೂರು ತೊಂಬತ್ತು ಎಂದ. ಋತುಪರ್ಣನ ಪಾಂಡಿತ್ಯಕ್ಕೆ ಬಾಹುಕ ತಲೆದೂಗಿದ. ಹೀಗೆ ಪ್ರತಿಭೆ ಪಾಂಡಿತ್ಯಗಳೆರಡೂ ನಳ-ಋತುಪರ್ಣರ ಸಂಬಂಧದಂತೆ ವಿಶಿಷ್ಟ ಶಕ್ತಿ ವಿಶೇಷಗಳಾಗಿವೆ. ಅವೆರಡೂ ಸಹೃದಯನನ್ನು ಸದಾ ಬೆರಗುಗೊಳಿಸುತ್ತಿರುತ್ತದೆ ಎಂಬುವುದರಲ್ಲಿ ಸಂದೇಹವಿಲ್ಲ.

ಜಿ.ಎಸ್.ಎಸ್. ರವರನ್ನು ಸಂದರ್ಶನದ ವೇಳೆ ನಾನೊಂದು ಪ್ರಶ್ನೆ ಕೇಳಿದೆ. "ತಮ್ಮ ಭಾವಗೀತ ಕವನಗಳಲ್ಲಿ ಕವಿ-ಕಾವ್ಯ, ಪ್ರತಿಭೆ-ಸ್ಫೂರ್ತಿ, ಕಾವ್ಯ ಪ್ರಯೋಜನ ಮುಂತಾದ ವಿಚಾರಗಳಿಗೆ ಭಾರತೀಯ ಕಾವ್ಯಮೀಮಾಂಸೆ ಪ್ರಭಾವ ಬೀರಿದೆಯಾ ಸರ್? ಎಂಬ ಪ್ರಶ್ನೆಗೆ, ಇರಬಹುದು ಎಂದರು. ಜಿ.ಎಸ್.ಎಸ್. ರವರು ಶ್ರೇಷ್ಠ ಕವಿಯೂ ಹಾಗೂ ಉತ್ತಮ ಕಾವ್ಯಮೀಮಾಂಸಕರೂ ಆಗಿರುವುದರಿಂದ ಅವರ ಬಹುತೇಕ ಕವನಗಳಲ್ಲಿ ಕವಿ-ಕಾವ್ಯ, ಪ್ರತಿಭೆ-ಸ್ಫೂರ್ತಿಗೆ ಸಂಬಂಧಿಸಿದ ವಿಚಾರಗಳೇ ಹೆಚ್ಚಾಗಿವೆ. ಕವಿ-ಕಾವ್ಯ, ಪ್ರತಿಭೆ-ಸ್ಫೂರ್ತಿ ಮತ್ತು ಕಾವ್ಯ ಪ್ರಾಯೋಜನಗಳಿಗೆ ಸಂಬಂಧಿಸಿದ ಚರ್ಚೆ ಪ್ರಾಚೀನ ಭಾರತೀಯ ಕಾವ್ಯಮೀಮಾಂಸೆಯಿಂದಲೇ ಇದೆ. ಆದರೆ ಜಿ.ಎಸ್.ಎಸ್. ರವರು ಕೆಲವು ಕವಿತೆಗಳ ಮೂಲಕ ಕಾವ್ಯಾನುಭಾವದ ಚರ್ಚೆ ನಡೆಸಿರುವುದು ವಿಶಿಷ್ಟತೆಯಾಗಿದೆ.

೩. ಕಾವ್ಯ ಪ್ರಯೋಜನ-ಇತರ ವಿಚಾರಗಳು

ಪ್ರಾಚೀನ ಕಾಲದಲ್ಲಿ ಕಾವ್ಯ ಬರೆದ ಮೇಲೆ ರಾಜರ ಆಸ್ಥಾನದ ಪಂಡಿತರ ಸನ್ನಿಧಿಯಲ್ಲಿ ಮಂಡನೆಯಾದ ನಂತರವೇ ಪ್ರಜೆಗಳಿಗೆ ತಲುಪುತ್ತಿತ್ತು. ಜಿ.ಎಸ್.ಎಸ್. ಅವರಿಗೆ ತಾವು ಬರೆದ ಕವಿತೆಗಳನ್ನು ಜಿ.ಪಿ. ರಾಜರತ್ನಂ ಅವರಿಗೆ ತೋರಿಸಬೇಕೆಂಬ ಆಸೆ, ಆದರೆ ಅಳುಕು. ಎಲ್ಲಾ ಮರಿ ಕವಿಗಳಿಗೂ ಇರುವ ಆತಂಕವಿದು. ಅಷ್ಟು ಹೊತ್ತಿಗಾಗಲೇ ಅವರು ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳನ್ನು ಓದಿ ಪ್ರಭಾವಿತರಾಗಿ ಕೆಲವು ಪದ್ಯ ಬರೆದಿದ್ದರು. ಕಡೆಗೊಂದು ದಿನ ಧೈರ್ಯ ಮಾಡಿ ತಮ್ಮ ಕವಿತೆಗಳ ಕಟ್ಟನ್ನು ಜಿ.ಪಿ. ರಾಜರತ್ನಂ ಅವರ ಕೈಗೆ ಇಟ್ಟರು. ಮರುದಿನ ಜಿ.ಎಸ್.ಎಸ್.

ಅವರನ್ನು ಕರೆದು ಕೂರಿಸಿಕೊಂಡು ರಾಜರತ್ನಂ ಅವರು ಕವನಗಳ ಬಗ್ಗೆ ಚರ್ಚಿಸಿದ್ದಲ್ಲದೆ, ಕವನ ರಚಿಸುವುದು ಹೇಗೆ? ಅದಕ್ಕೆ ಪೂರಕವಾಗಿ ಯಾವ ಪುಸ್ತಕ ಓದಬೇಕು? ಇತ್ಯಾದಿ ವಿಚಾರಗಳನ್ನು ಹೇಳಿ, ಇವರ ಕವಿತೆಯ ಕಟ್ಟಿನಿಂದ ಒಂದು ಪದ್ಯ ತಾವೇ ಆರಿಸಿ ಮಾಸ್ತಿಯವರು ಸಂಪಾದಿಸುತ್ತಿದ್ದ 'ಜೀವನ'ಪತ್ರಿಕೆಗೆ ಕಳುಹಿಸಿಕೊಟ್ಟರು.ಆ ಕವನದ ಸಾಲುಗಳು ಹೀಗಿವೆ.

ಕಡಲಿನ ಕತ್ತಲ ಗವಿಯಲ್ಲಿ
ಅಡಗಿಹವೆಷ್ಟೋ ರತ್ನಗಳು
ಘೋರಾರಣ್ಯದ ತರುಗಳಲಿ...
ಕುಸುಮದ ಕಂಪನು ಸೇವಿಪರಾರು.

ತುಂಬಿದ ಕಾನನ ಮಧ್ಯದಲಿ –*ಸಾಹಿತ್ಯ ನಿಧಿ*

ಹೀಗೆ ಕವಿ ಹೃದಯವನ್ನು ಪ್ರೋತ್ಸಾಹಿಸುವ ಗುಣ ಅತ್ಯವಶ್ಯಕವಾಗಿದೆ. ಕವಿ, ಸಹೃದಯ ಹಾಗೂ ಕಾವ್ಯ ಪ್ರಯೋಜನ ಕುರಿತಾಗಿರುವುದು **'ತೃಪ್ತಿ'** ಎಂಬ ಕವನ. ಜಿ.ಎಸ್.ಎಸ್. ಅವರು ತಮ್ಮ ಆತ್ಮಕಥನ **'ಚದುರಂಗ'**ದಲ್ಲಿ ಹೇಳಿರುವಂತೆ ಈ ಕವಿತೆ ಅವರ ವಿದ್ಯಾಗುರು ತ.ಸು. ಶಾಮರಾಯರನ್ನು ಕುರಿತು ಬರೆದ ಪದ್ಯ.ಈ ಕವಿತೆಯಲ್ಲಿ ತಮ್ಮ ವಿದ್ಯಾಗುರುವಿನ ಬಗ್ಗೆ ಇರುವ ಅನನ್ಯ ಶ್ರದ್ಧಾಭಕ್ತಿ ಒಂದೆಡೆ ಕಾಣಿಸಿದರೆ, ಮತ್ತೊಂದೆಡೆ ಗುರುಗಳಿಗೆ ಶಿಷ್ಯನ ಮೇಲೆ ಇದ್ದ ಶಿಷ್ಯವಾತ್ಸಲ್ಯವೂ ಕಾಣಿಸುತ್ತದೆ. ಕಾವ್ಯ ರಚನೆಯ ಆರಂಭದ ದಿನಗಳಲ್ಲಿ ಜಿ.ಎಸ್.ಎಸ್. ಅವರಿಗೂ ಉದ್ವೇಗ, ಆತಂಕ ಮುಂತಾದವುಗಳು ಸಹಜವಾಗಿಯೇ ಇದ್ದವು. ಅಂತಹ ಸನ್ನಿವೇಶದಲ್ಲಿ **'ತೃಪ್ತಿ'** ಎಂಬ ಕವಿತೆಯನ್ನು ಎದೆತುಂಬಿ ಹಾಡಿದಾಗ ಅವರ ಗುರುಗಳಾದ ಶಾಮರಾಯರು ಮನವಿಟ್ಟು ಕೇಳಿ ಅಭಿಮಾನದಿಂದ ಬೆನ್ನು ತಟ್ಟಿದ ಅಂದಿನ ರೋಮಾಂಚನ ಕ್ಷಣಗಳನ್ನು ಮೆಲಕು ಹಾಕಬಹುದು. ಅಂದು ಹಾಡಿದ ಕವಿತೆಯನ್ನು ಪುನಃ ಪುನಃ ಹಾಡಿದಾಗಲೂ ಈ ಅನುಭವ ನಮಗೆ ಬರುತ್ತದೆ.

ಇಂದು ನಾ ಹಾಡಿದರು ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ– (ತೃಪ್ತಿ–ಸಾಮಗಾನ)

ಎನ್ನುತ್ತಾರೆ. ಸಹೃದಯನು ತನ್ಮಯತೆಯಿಂದ ಕೇಳಿದರೆ ಅದೇ ಬಹುಮಾನ ಮತ್ತು ಸಂತೃಪ್ತಿ. ಇಲ್ಲಿ ಇನ್ನೊಂದು ಅರ್ಥಕಲ್ಪಿಸಿ ವಿಮರ್ಶಿಸಬಹುದು ಮತ್ತು ಕವಿ–ಕಾವ್ಯ ಪ್ರಯೋಜನ ಕುರಿತು ಹೇಳಬಹುದು. ಕವಿಯಾದವನಿಗೆ ತನ್ನ ಕಾವ್ಯ ಓದಿ ಸಹೃದಯರು ಮೆಚ್ಚಿಗೆ ಸೂಚಿಸಿ ಆನಂದಿಸಿದರೆ ಕವಿಗೆ ಅದೇ ಬಹುಮಾನ. ಅದೇ ಬಿರುದು ಸನ್ಮಾನ ಎಂದು ಹೇಳುತ್ತಾರೆ. ಇಲ್ಲಿ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕವಿ–ಸಹೃದಯ ಕುರಿತು ಹೇಳುವಾಗ, ಅನೇಕ ಕವಿಗಳು

ತನ್ನ ಕವನಗಳನ್ನು ಅಚ್ಚು ಹಾಕಿಸಿ ದೇಶಕ್ಕೆಲ್ಲಾ ಹಂಚಿದರೂ ಪ್ರತಿಗಳನ್ನು ಕೇಳುವವರಿಲ್ಲ, ಓದುವವರಿಲ್ಲ ಎಂದು ವ್ಯಸನಪಡುವುದೇನೋ ನಿಜ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಸುಭಾಷಿತ ರತ್ನಭಂಡಾರದಲ್ಲಿನ ವಾಕ್ಯವನ್ನು ಉಲ್ಲೇಖಿಸುತ್ತಾ ತೀ.ನಂ.ಶ್ರೀ.ಯವರು ಹೀಗೆ ಹೇಳುತ್ತಾರೆ. "ಅರಸಿಕರ ಮುಂದೆ ಕವಿತೆಯೊಪ್ಪಿಸುವುದೊಂದ ಬರೆಯದಿರು, ಬರೆಯದಿರು ಶಿರದಿ"![೧೦]ಎನ್ನುತ್ತಾರೆ. ಆದರೆ ಎಲ್ಲಾ ಜನತೆ ಕುಳಿತು ಕಾವ್ಯವನ್ನು ಕೇಳಿದರೆ ಅದೇ ಬಹುಮಾನ ಮತ್ತು ಕೀರ್ತಿ ಎಂದು ಜಿ.ಎಸ್.ಎಸ್. ಅವರು ಹೇಳುತ್ತಾರೆ. ಇನ್ನು ಕಾವ್ಯ ಪ್ರಯೋಜನದ ಬಗ್ಗೆ ಈ ಕವನ ವ್ಯಕ್ತಪಡಿಸುವುದೇನೆಂದರೆ ಕೆಲವು ಕವಿಗಳು ಕಣ್ಣೆದುರಿಗೆ ಕವಿ ಇದ್ದು ಮಹಾಕಾವ್ಯ ಬರೆದಾಗಲೂ ಅಸಡ್ಡೆ ಮಾಡಿರುವ ಸಾಧ್ಯತೆ ಬಹುಮಟ್ಟಿಗೆ ನಿಜ. ಪಂಪ, ರನ್ನ, ಕುವೆಂಪು ಮುಂತಾದ ಕೆಲವು ಅದೃಷ್ಟಶಾಲಿ ಕವಿಗಳು ಬದುಕಿದ್ದಾಗಲೂ ಕೀರ್ತಿ ಬಹುಮಾನ ಗಳಿಸಿದವರು ಮತ್ತು ನಿಧನ ಹೊಂದಿದ ನಂತರ ಇನ್ನು ಹೆಚ್ಚಿನ ಕೀರ್ತಿಗೆ ಭಾಜನರಾದವರು. ಇಂತಹ ಕೀರ್ತಿ, ಬಹುಮಾನಗಳು ಕುವೆಂಪು ಅವರು ಬದುಕಿದ್ದಾಗ ಬಂದಿದ್ದವು.ಅವುಗಳನ್ನು ಅವರ ಶಿಷ್ಯರಾದ ಜಿ.ಎಸ್.ಎಸ್. ಅವರೂ ಗಳಿಸಬೇಕು ಎಂಬುದು ಗುರುಗಳ ಮನಸ್ಸಿನಲ್ಲಿರಬೇಕು. ಅಂತಹ ಬಿರುದು ಸನ್ಮಾನಗಳು ನನಗೇನೂ ಬೇಡ ಮನವಿಟ್ಟು ಕೇಳಿ, ಕಿವಿಗೊಟ್ಟು ಆಲಿಸಿದರೆ ಸಾಕು. ನಾನೊಂದು ಬರೆದ ಕವನ ಕೇಳಿ ಆನಂದಿಸಲಿ, ಆನಂದಿಸದಿರಲಿ ನಾನು ಸ್ಥಿತಪ್ರಜ್ಞಯಿಂದ, ತನ್ಮಯತೆಯಿಂದ ಕವನ ಬರೆಯುತ್ತೇನೆ. ಕೀರ್ತಿ, ಬಹುಮಾನಗಳ ಚಿಂತೆ ನನಗಿಲ್ಲ ಎಂದು ವಿವೇಚಿಸಬಹುದು.

ಈ ಕವನ ಕುರಿತು ಸಿರಿಗೆರೆ ಮಹಾಸಂಸ್ಥಾನದ ಮಠಾಧೀಶರಾದ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, "ಇದು ಗುರುಶಿಷ್ಯರ ಸಂಬಂಧಕ್ಕೆ ಮಾತ್ರ ಮೀಸಲಾದ ಪದ್ಯವಾಗಲೇಬೇಕಾಗಿಲ್ಲ. ಸಾಂಸಾರಿಕ ಜೀವನದಲ್ಲಿ ಇದು ಪತಿ-ಪತ್ನಿಯರ ಮಧ್ಯೆ ಇರುವ ಗಾಢವಾದ ಸಂಬಂಧದ ದ್ಯೋತಕವೂ ಆಗಬಹುದು ಎನ್ನುತಾರೆ. ಈ ಕವಿತೆ ಓದುತ್ತಾ ಹೋದಂತೆ ದೇವರನ್ನು ಕುರಿತು 'ಅಯ್ಯಾ ನೀನು ಕೇಳಿದರೆ ಕೇಳು, ಕೇಳದಿದ್ದರೆ ಮಾಣು, ನಾ ಹಾಡಿದಲ್ಲದೆ ಸೈರಿಸಲಾರೆನು' ಎನ್ನುವ ಅಕ್ಕಮಹಾದೇವಿಯ ಹೃದಯದ ತುಡಿತ ಹಾಗೂ 'ಆನು ಒಲಿದಂತೆ ಹಾಡುವೆ' ಎನ್ನುವ ಬಸವಣ್ಣನವರ ನಿರ್ವ್ಯಾಜ ಭಕ್ತಿ ಜಿ.ಎಸ್.ಎಸ್.ರವರ ಕವನದಲ್ಲಿ ವ್ಯಕ್ತವಾಗಿದೆ."[೧೧] ಎನ್ನುತ್ತಾರೆ.

ಕವಿ ಹಾಡುವ ಹಕ್ಕಿ ಇದ್ದ ಹಾಗೆ. ಹಕ್ಕಿಗೆ ಯಾವ ಬಹುಮಾನ? ಯಾರು ಕೀರ್ತಿ ಕೊಡುತ್ತಾರೆ? ಅದು ಹಾಡುವುದು ತನ್ನ ಸ್ವ-ಸಂತೋಷಕ್ಕಾಗಿ. "Call a red Rose by any name it smells as good" ಎಂದು ಷೇಕ್ಸ್‌ಪಿಯರ್

ಹೇಳುತ್ತಾರೆ. ಯಾವ ಬಣ್ಣದ ಗುಲಾಬಿಯಾದರೂ ಸುಗಂಧ ಸೂಚಿಸುವುದು ಹೂವಿನ ನೈಜಧರ್ಮ. ಕವಿಯೂ ಸಹ ಹಾಗೆಯೇ. ಅವನು ಬರೆಯುವುದು, ಹಾಡುವುದು ಎಲ್ಲಾ ಸ್ವ-ಸಂತೋಷಕ್ಕಾಗಿ. ಬಿರುದು-ಸನ್ಮಾನಗಳು ಅವನಿಗೆ ನಗಣ್ಯ.ಯಾರು ಕೇಳಲಿ ಬಿಡಲಿ, ಕೇಳಿ ಮೆಚ್ಚಲಿ, ಕೇಳಿ ಕಿವಿ ಮುಚ್ಚಲಿ ಕವಿಗೆ ತನ್ನ ಹೃದಯುದಾಳದ ತೀವ್ರತರ ಭಾವನೆಗಳನ್ನು ಅಭಿವ್ಯಕ್ತಿಸದ ಹೊರತು ಸಮಾಧಾನವಾಗುವುದಿಲ್ಲ. ಜಿ.ಎಸ್.ಎಸ್. ಅವರು **'ಪಂಡಿತರಿಗೆ'** ಎಂಬ ಕವನದಲ್ಲಿ ಒಂದು ಲೇಖನ ಬರೆದು ಸಾಮಾನ್ಯರಿಗೆ ಕೊಟ್ಟಾಗ ಅವರ ಅಭಿಪ್ರಾಯ ಈ ರೀತಿ ಇದೆ. ಕವಿಯಾದವನು ಎಲ್ಲವನ್ನು ಜೀರ್ಣಿಸಿಕೊಂಡು ಕವಿತೆ ಬರೆದಿದ್ದಿರೇ ಹೂ ತಳಿರು ಕಾಂಡಗಳ ನೆನೆಪೇ ಇಲ್ಲಾ, ನಿಮ್ಮ ಖಾಂಡವ ದಹನದಾರ್ಭಟದಲ್ಲಿ ಬಿದ್ದಿರುವ ಬೂದಿರಾಸಿಯ ಕಂಡು ಅದರೊಳಗಿನಾತ್ಮಕ್ಕೆ ಕಣ್ಣೀರ ತರ್ಪಣ ಕೊಟ್ಟು ಕರಗಿ ನಿಂತಿದ್ದೀರಿ ಎಂದು ಕವಿತ್ವದ ಬಗ್ಗೆ ಸಹೃದಯರು ಹೆಮ್ಮೆಪಡುವ ಮಾತಾಗಿದೆ ಎಂಬುದನ್ನು ಗಮನಿಸಬಹುದು.

ಕವಿಗೆ ತನ್ನ ಹಾಡು ಹಳೆಯದೆಂಬ ಭಾವನೆ ಸಲ್ಲದು. **'ಹಳೆಯ ಹಾಡು'** ಎಂಬ ಪ್ರಸಿದ್ಧ ಕವಿತೆ ಇದನ್ನು ಚೆನ್ನಾಗಿ ಪ್ರತಿಬಿಂಬಿಸುತ್ತದೆ. ಹಾಡು ಹಳೆಯದಾದರೇನು, ಭಾವ ನವನವೀನ, ಎದೆಯಭಾವ ಹೊಮ್ಮುವದಕೆ ಭಾಷೆ ಒಂದು ಸಾಧನ. ಜೀವನದ ವಿಚಾರಗಳನ್ನು ಕಟ್ಟುವದಕ್ಕೆ ಕಾವ್ಯ ಒಂದು ಸಾಧನ. ಕವಿಯ ಹೃದಯದಿಂದ ತುಂಬಿಬಂದ ಹಾಡನ್ನು ಕೇಳುವುದು ಸಹೃದಯನದಾಗಿದೆ. ಹಮ್ಮು ಬಿಮ್ಮುಗಳಿಲ್ಲದೆ ಹೃದಯ ತೆರೆದು ಹಾಡುವುದು ಹಾಗೂ ಹಾಡಿನಲ್ಲಿ ಮನವು ಲೀನವಾಗುವಂತೆ ಸದಾ ಕವಿಯ ಮನವು ತಪಿಸಬೇಕೆಂದು, ಶಿವರುದ್ರಪ್ಪನವರ ಕವನದ ಆಶಯವಾಗಿದೆ.

'ಚೆಲುವು ಒಲವು' ಕವನ ಸಂಕಲನದ ಕೊನೆಯಲ್ಲಿ ಜಿ.ಎಸ್.ಎಸ್.ಅವರು **'ಕಾವ್ಯಕ್ಕೆ ನಮನ'** ಎಂಬ ಕವಿತೆಯಲ್ಲಿ ಕಾವ್ಯದ ಅನಂತ ವೈಭವಕ್ಕೆ ಶರಣು ಹೇಳಿದ್ದಾರೆ.ಕಾವ್ಯವು ಸ್ಫೂರ್ತಿಯ ಆವೇಶದ ಫಲ. ಕನಸು ನನಸಾದಂತೆ ಕಾವ್ಯಸ್ಫೂರ್ತಿ ಚಿಮ್ಮಿದೆ. ಮಂದಾರದ ಸುಗಂಧ ಹರಡಿದಂತೆ ಆನಂದದ ಸೌಂದರ್ಯ ಬಿಂದು, ಕಾವ್ಯದ ಮೂಲಕ ಬಂದಿಳಿದಿದೆ. ಕಾವ್ಯದಿಂದಾಗಿಯೇ ಕವಿ ಜಗದೊಲವನ್ನು ಪಡೆಯುತ್ತಾನೆ ಮತ್ತು ಸಹೃದಯನು ಮೆಚ್ಚಿ ಸಂತೋಷಪಡುತ್ತಾನೆ.ಅದಕ್ಕಾಗಿಯೇ **'ಕಾವ್ಯಕ್ಕೆ ನಮನ'** ಎನ್ನುತ್ತಾರೆ ಜಿ.ಎಸ್.ಎಸ್.ರವರು. **'ಕವಿತೆ ಬರೆಯುವುದು ಹೇಗೆ'**? ಎಂಬುದರ ಜಿಜ್ಞಾಸೆಯೂ ಶಿವರುದ್ರಪ್ಪನವರನ್ನು ಕಾಡದೇ ಇಲ್ಲ. ಈ ಕಾಲದಲ್ಲಿ ಕವಿತೆ ಬರೆಯುವುದು ಬಲು ಸುಲಭ. ಇದರಿಂದ ಸಾಕಷ್ಟು ಲಾಭವಿದೆ.ಕವಿತೆ ಬರೆಯುವುದು ಹೇಗೆ? ಸೂರ್ಯೋದಯದ ದರ್ಶನಕ್ಕೆ ಕವಿ ಕಾದು

ಕುಳಿತುಕೊಳ್ಳಬೇಕಿಲ್ಲ. ಕವಿಗೆ ಬಚ್ಚಲು ಮನೆಯ ರೊಚ್ಚೆ, ಬೀದಿ ಸದ್ದು-ಮುಂತಾದುವುಗಳು ಕವಿತೆ ಬರೆಯಲು ಸಾಕು. ಕವಿಯಾದವನು ಸೂರ್ಯೋದಯ-ಸೂರ್ಯಾಸ್ತಮಕ್ಕಾಗಿ ಕಾದು ಕುಳಿತು ಬರೆಯದೆ ಜನಸಾಮಾನ್ಯರ ಧ್ವನಿಗೆ ಸ್ಪಂದಿಸಬೇಕು. ಕಾವ್ಯವೆನ್ನುವುದು ಜನಸಾಮಾನ್ಯರ ನಿಜದನಿಯಾದಾಗ ಮಾತ್ರ ಅದರ ಆಶಯ ಪರಿಪೂರ್ಣವಾಗುವುದೆಂಬ ಶಿವರುದ್ರಪ್ಪನವರ ವಿಚಾರಕ್ಕೆ ಎರಡುಮಾತಿಲ್ಲ.

'ಕವಿ-ಕಿವಿ' ಎಂಬ ಕವಿತೆಯಲ್ಲಿ ಶಿವರುದ್ರಪ್ಪನವರು ಆಧುನಿಕ ಕವಿಯ ಬಯಕೆಯನ್ನು ಪ್ರಕಟಿಸಿದ ರೀತಿ ಆಪ್ಯಾಯಮಾನವಾಗಿದೆ.

ನನಗೆ ಒಂದಿಷ್ಟು ಜಾಗ ಕೊಡಿ ಈ ಮನೆಯಲ್ಲಿ
ನಾನು ಒಬ್ಬ ಕವಿ, ನನಗೆ ಬೇಕಾದದ್ದು ಹೃದಯವಿರುವಂಥ
ಐದೋ ಆರೋ ಕಿವಿ,-(ಕವಿ-ಕಿವಿ)

ಮುಂದುವರಿದು ನಾನು ನೆಲ ಅಗೆದು ಶೋಧಿಸುವ ಸಂಶೋಧಕನಲ್ಲ, ಇತಿಹಾಸದ ಚಿನ್ನದ ಗೆರೆಯ ಹಾಳು ಕಪಾಟಿನ ತಾಳೆಗರಿ ಶೋಧಿಸಿ ಹುಡುಕಿ ಹೇಳಲಾರೆ. ನನಗೆ ಬೇಕಾದದ್ದು ಹೃದಯವಿರುವಂಥ ಕವಿ, ಅದಕ್ಕಿಂತ ದೊಡ್ಡದು ಇನ್ನಿಲ್ಲ ಇದು ಎಲ್ಲ ಕವಿಗಳ ಆಶಯವೂ ಆಗಿರಬೇಕೆಂದು ಹೇಳಿದ ಶಿವರುದ್ರಪ್ಪನವರು ಕವಿಗೆ ಸಹೃದಯ ಸಿಗದಿದ್ದರೆ ಅವನ ಕಾವ್ಯ ಅವನಲ್ಲೇ ಉಳಿಯುತ್ತದೆ; ಕಾವ್ಯ ಸಹೃದಯನ ಮೂಲಕವೇ ಸಾರ್ಥಕ ಪಡೆಯಬೇಕೆಂಬುದು ಆಶಯವಾಗಿದೆ.

ಸಂಪಾದಕರು ಕವನ ಮತ್ತು ಕಾವ್ಯ ಪ್ರಯೋಜನವು ಜನಸಾಮಾನ್ಯರಿಗೂ ತಲುಪಲಿ ಎಂಬ ದೃಷ್ಟಿಯಿಂದ ಜಿ.ಎಸ್.ಎಸ್. ಅವರನ್ನು ಪದೇ ಪದೇ ಕವಿತೆ ಕಳುಹಿಸಿ ಎಂದು ಪತ್ರ ಬರೆಯುತ್ತಿದ್ದಿರಬಹುದು.ಸ್ವಾತಂತ್ರ್ಯದ ಹೊಸತರಲ್ಲಿ ಮನುಷ್ಯ ಬಹಳ ಬಿಡುವಿಲ್ಲದವನಾಗಿದ್ದಾನೆ. ಸ್ವಂತ ಕೆಲಸ ಕಾರ್ಯಮಾಡಿಕೊಂಡು ವಿದ್ಯೆ ಇಲ್ಲದೆಯೇ ಕಾವ್ಯ ಬರೆದು ಕೊಟ್ಟರೂ ಸಹ ಸಂಪಾದಕರ ಪತ್ರಗಳು 'ಕ್ಯೂ' ನಿಲ್ಲುತ್ತಿದ್ದವು ಎಂದು ಜಿ.ಎಸ್.ಎಸ್.ಅವರು ಹೇಳುತ್ತಾರೆ.ಇದರಿಂದ ತಿಳಿದುಬರುವುದೇನೆಂದರೆ ಜಿ.ಎಸ್.ಎಸ್. ಅವರ ಕಾವ್ಯಕ್ಕೆ ಬೇಡಿಕೆ ಇತ್ತು.ಕೆಲವೊಮ್ಮೆ ರೇಡಿಯೋ, ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಪ್ರಚಾರ ಪಡೆದರೂ ಕವಿ ಯಾರೆಂಬುದು ತಿಳಿಯದೆ ಅನಾಮಧೇಯನಾಗಿ ಕವಿ ಕೇಳುತ್ತಿದ್ದರು.ಈ ಕುರಿತು **'ಅನಾಮಧೇಯ'** ಎಂಬ ಕವನದಲ್ಲಿ ಕವಿ ಪಂಚಾಮೃತವೆಂದು ಸ್ವೀಕರಿಸಿ ನಡೆಯಬೇಕಾಗುತ್ತದೆ ಎನ್ನುತ್ತಾರೆ.ಕೆಲವು ವೇಳೆ ಕವನ ಬರೆದ ಕವಿ ಗೌಣವಾಗುತ್ತಾನೆ. **'ನಾನು'** ಎಂಬ ಕವನದಲ್ಲಿ 'ನಾನೊಂದು ಕತ್ತಲೆಯ ಕೇಂದ್ರ, ಇದರೊಳಗಿಂದ ಬೆಳಕಿನ ಹಾಡ

ಪ್ರಸಾರ ಮಾಡುವವನು ಯಾವನೊ, ನಾನು ಕಾಣದ ಚಂದ್ರ' ಎಂದು ಹೇಳುತ್ತಾರೆ. **'ಜನಪದ ಸಾಹಿತ್ಯ'** ಎಂಬ ಕವನದಲ್ಲಿ ಜನಪದರು ಯಾವುದೇ ಪ್ರಯೋಜನ ಕೀರ್ತಿಗಾಗಿ ಬರೆದವರಲ್ಲ, ಇವರು ಜನಪದ ಗೀತೆಗಳನ್ನು ಬರೆದು 'ಎಲೆಮರೆಯ ಹೂವುಗಳು' ಜೀವನದ ಅನುಭಾವಾಮೃತ ನೀಡಿದ ಅನುಭಾವ ಕವಿಗಳು, ಕೀರ್ತಿಗಾಗಿ ತಾಳೆಯೋಲೆಗಳಲ್ಲಿ ಬರೆಯಲಿಲ್ಲ, ನಮ್ಮ ಸಂಸ್ಕೃತಿಯನ್ನು 'ಸಿರಿಗನ್ನಡದ ಕಾವ್ಯ ರಸವಾರಿಧಿಯು ನಿಜಕು ರತ್ನಾಕರಂ! ಕನ್ನಡಕೆ ಸೋಲಿಲ್ಲ!' ಎಂದು ಜನಪದರ ಬಗ್ಗೆ ಜಿ.ಎಸ್.ಎಸ್. ಅವರು ಹಾಡಿ ಹೊಗಳಿ ಕಾವ್ಯವಾಗಿಸಿದ್ದಾರೆ.

ಕವಿ ತನ್ನ ಆಂತರಿಕ ನೋವನ್ನು ನುಂಗಿ, ಸಾಮಾಜಿಕ ಸ್ಪಂದನಕ್ಕೆ ವಾಣಿಯಾಗಿ ನಿಲ್ಲಬೇಕೆಂಬ ಅಗತ್ಯವನ್ನು ಜಿ.ಎಸ್.ಎಸ್.ಅವರು ಒತ್ತಿ ಹೇಳುತ್ತಾ ಬಂದಿದ್ದಾರೆ. **'ಬನ್ನಿ ನನ್ನ ಹೃದಯಕೆ'** ಎಂಬ ಕವಿತೆಯು ಸಮಾಜವನ್ನು ಕವಿಯ ಅಂತರಂಗಕ್ಕೆ ಕರೆತಂದು ಅವನ ಮೂಕಸಂವೇದನೆಯ ಮಿಡಿತವನ್ನು ಶೃತಿಗೊಳಿಸುವಂತಿದೆ.ಇದು ಇಂದಿನ ಸಮಕಾಲೀನ ಸಂದರ್ಭದಲ್ಲಿ ಅತ್ಯಗತ್ಯವಾಗಿ ಮಾಡಬೇಕಾದ ಕಾರ್ಯವೆಂದು ಶಿವರುದ್ರಪ್ಪನವರು ವಿಷದಪಡಿಸಿರುವುದು ಪ್ರಚಲಿತ ಸನ್ನಿವೇಶದಲ್ಲಿ ಇತರ ಕವಿಗಳಿಗೆ ಮಾರ್ಗದರ್ಶಕವಾಗಿದೆ.

ಜಿ.ಎಸ್.ಎಸ್. ಅವರೇ ಚತುರಂಗದಲ್ಲಿ ಹೇಳುವಂತೆ "ಸಾಹಿತ್ಯ ಸಿರಿ ಮತ್ತು ತೃಪ್ತಿ ಎಂಬ ಕವಿತೆಗಳನ್ನು ತಮ್ಮ ಗುರುಗಳಾದ ತ.ಸು. ಶಾಮರಾಯರಿಗೆ ತೋರಿಸಿದರು. ಜಿ.ಎಸ್.ಎಸ್.ಅವರು ಅಂದು ಎದೆ ತುಂಬಿ ಹಾಡಿದರು, ಗುರುಗಳು ಮನವಿಟ್ಟು ಕೇಳಿದರು.ಮೇಲಿನ ಎರಡು ಕವಿತೆಗಳಲ್ಲಿ ಕವಿಗೆ ಪ್ರೊತ್ಸಾಹ ನೀಡಿ ಪ್ರೇರಣೆ ಕೊಟ್ಟಿದ್ದಕ್ಕೆ ಇಂದಿನವರೆಗೂ ಯಾರು ಕಿವಿ ಮುಚ್ಚಿದರು ನನಗಿಲ್ಲ ಚಿಂತೆ ಎಂದು ಅಂದಿನಿಂದ ಇಂದಿನವರೆಗೆ ಯಾವುದೇ ಬಿರುದು ಸನ್ಮಾನಗಳಿಲ್ಲದೆ ಸಹೃದಯರಿಗೆ ಕಾವ್ಯದ ಸಿಹಿಯನ್ನು ಕೊಟ್ಟಿದ್ದಾರೆ."[೨] ಇವುಗಳನ್ನು ಕಾವ್ಯ ಪ್ರಯೋಜನಗಳಿಗೆ ಉದಾಹರಿಸಬಹುದು

ಜಿ.ಎಸ್.ಎಸ್. ಅವರು ಭಾರತೀಯ ಕಾವ್ಯಮೀಮಾಂಸೆಯ ತತ್ವಗಳ ನೆಲೆಯಲ್ಲಿ ಕಾವ್ಯಶೋಧ ನಡೆಸಿರುವರಾದರೂ ಪಾಶ್ಚಾತ್ಯ ವಿಚಾರ ಹಾಗೂ ಚಿಂತನೆಗಳನ್ನು ಅವರು ಪಡೆಯದೆಯೇ ಇಲ್ಲ. ಭಾವ ಲೋಕದ ವಿಹಾರಿಗಳಾಗಿದ್ದ ಕವಿ, ಸಾಮಾಜಿಕ ಸ್ಪಂದನಕ್ಕೆ ಮುಖಮಾಡಿ ನಿಂತುದು ಕನ್ನಡ ಕಾವ್ಯ ನಡೆದು ಬಂದ ದಾರಿಯ ಪ್ರತೀಕವೇ ಸರಿ. ಅವರ ಸಮಗ್ರ ಕಾವ್ಯದ ಅನ್ವೇಷಣೆಯಲ್ಲಿ ಕಾವ್ಯ ಕರ್ಮಕ್ರಿಯೆಯ ವ್ಯಾಪಕ ಚಿಂತನೆ ಸಾಗುತ್ತ ಬಂದುದನ್ನು ನಾವು ಕಂಡು ಬೆರಗಾಗುತ್ತೇವೆ. ಕವಿ–ಕಾವ್ಯ, ಪ್ರತಿಭೆ–ಸ್ಫೂರ್ತಿ, ಕಾವ್ಯ ಪ್ರಯೋಜನ ಮತ್ತು ಇತರೆ ವಿಚಾರಗಳ ಬಗ್ಗೆ

ಕನ್ನಡ ಕಾವ್ಯ ಮೀಮಾಂಸೆಯನ್ನು ಕವನಗಳ ಮೂಲಕ ವಿಶಿಷ್ಟ ಕೊಡುಗೆಯಾಗಿ ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ಜಿ.ಎಸ್. ಶಿವರುದ್ರಪ್ಪ ಮತ್ತು ಚೆನ್ನವೀರಕಣವಿಯವರು ಕವಿ–ಕಾವ್ಯ, ಪ್ರತಿಭೆ–ಸ್ಫೂರ್ತಿ, ಕಾವ್ಯ ಪ್ರಯೋಜನಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ್ದಾರೆ. ಕೆಲವು ಕವನಗಳಂತೂ ಕಾವ್ಯಮೀಮಾಂಸೆ ಕವನಗಳೇನೊ ಎನ್ನುವಂತೆ ಚಿತ್ರಿತವಾಗಿವೆ. ಕವಿ ಹೇಗಿರಬೇಕು ಕಾವ್ಯರಚನೆಯ ಕ್ರಿಯೆ ಹೇಗೆ ನಡೆಯುತ್ತದೆ, ಪ್ರತಿಭೆಯ ಹುಟ್ಟು, ಬೆಳವಣಿಗೆ ಹೇಗೆ, ಕವಿ ಹೇಗೆ ಸ್ಫೂರ್ತಿಗೊಂಡು ಪ್ರತಿಭೆಯಿಂದ ಕಾವ್ಯ ರಚಿಸುತ್ತಾನೆ ಎಂಬುದನ್ನು ವಿವರಿಸುತ್ತಾರೆ. ಕವಿಯು ಕಾವ್ಯ ರಚನೆಯ ರಹಸ್ಯವನ್ನು ಮತ್ತು ಕವಿಗಾಗುವ ಪ್ರಯೋಜನಗಳೇನು? ಕವಿಯ ಕಾವ್ಯವನ್ನು ಆನಂದದಿಂದ ಆಸ್ವಾದಿಸಿದರೆ ಅದೇ ಕವಿಗೆ ಬಿರುದು ಸನ್ಮಾನ ಎಂದು ಹೇಳುತ್ತಾರೆ.ಈ ವಿಚಾರಗಳ ಬಗ್ಗೆ ಜಿ.ಎಸ್.ಎಸ್. ರವರಂತೂ ಕೆಲವು ಕವನಗಳಲ್ಲಿ ಕಾವ್ಯಮೀಮಾಂಸೆಯ ಕವನಗಳೇನೋ ಎಂಬಂತೆ ಬಿಂಬಿಸಿದ್ದಾರೆ. ಜಿ.ಎಸ್.ಎಸ್. ರವರು ತಮ್ಮ ಕವನಗಳಲ್ಲಿ ಕವಿ–ಕಾವ್ಯ, ಪ್ರತಿಭೆ–ಸ್ಫೂರ್ತಿ, ಕಾವ್ಯ ಪ್ರಯೋಜನದ ಬಗ್ಗೆ ಕನ್ನಡ ಸಾಹಿತ್ಯದಲ್ಲಿಯೇ ಜಿ.ಎಸ್. ಶಿವರುದ್ರಪ್ಪನವರಷ್ಟು ಯಾರೂ ಕಾವ್ಯಮೀಮಾಂಸೆಯನ್ನು ಕವನಗಳಲ್ಲಿ ಬಿಂಬಿಸಿಲ್ಲ ಎಂಬುದು ನಿಸ್ಸಂದೇಹ ಸಂಗತಿಯಾಗಿದೆ.

ಕೊನೆ ಟಿಪ್ಪಣಿಗಳು:

೧. ಲಿಂಗದೇವರು ಹಳೆಮನೆ;'ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ', ಜೆ.ಎಸ್.ಎಸ್. ಮಹಾವಿದ್ಯಾಪೀಠ, ಮೈಸೂರು, ೨೦೦೭. ಪು. ೪೫.

೨. ಎಚ್.ಎಸ್.ವೆಂಕಟೇಶಮೂರ್ತಿ, ಡಾ. ಲೋಕೇಶ ಅಗಸನಕಟ್ಟೆ; 'ಜಿ.ಎಸ್.ಎಸ್. ಕಾವ್ಯಂತರಂಗ' ಸಾಹಿತ್ಯ ಸಿರಿ, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ, ೨೦೦೮. ಪು. ೮೧.

೩. ಹೊಸಗನ್ನಡ ಕಾವ್ಯ –೩ ಪ್ರಸಾರಾಂಗ. ಕು.ವಿ. ೨೦೦೯. ಪು. ೨೧.

೪. ಜಿ.ಎಸ್. ಶಿವರುದ್ರಪ್ಪ; 'ಚದುರಿದ ಚಿಂತನೆಗಳು', ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗುಡ್‌ಟಚ್ ಪ್ರಿಂಟರ್, ಮೈಸೂರು ೨೦೦೯, ಪು. ೦೬.

೫. ಗೌರೀಶ ಕಾಯ್ಕಿಣಿ; 'ಚೆನ್ನವೀರ ಕಣವಿಯವರ ಕಾವ್ಯದೃಷ್ಟಿ', ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ, ೧೯೭೭, ಪು. ೪.

೬. ಪಂಪ; 'ವಿಕ್ರಮಾರ್ಜುನ ವಿಜಯ', (ಪಂಪ ಭಾರತ) ನಿರ್ದೇಶಕರು, ಪ್ರಸಾರಾಂಗ, ಮೈ.ವಿ.ವಿ. ೧೯೭೩. ಪು. ೩೬೧

೭. ತೀ. ನಂ. ಶ್ರೀಕಂಠಯ್ಯ; 'ಭಾರತೀಯ ಕಾವ್ಯ ಮೀಮಾಂಸೆ', ಪ್ರಸಾರಾಂಗ, ಮೈ.ವಿ.ವಿ. ಪು. ೧೨೦.

೮. ಜಿ.ಎಸ್. ಶಿವರುದ್ರಪ್ಪ; 'ಸಮಗ್ರ ಕಾವ್ಯ', ಸತ್ಯಶ್ರೀ ಮುದ್ರಣ ಚಾಮರಾಜಪೇಟೆ, ಬೆಂಗಳೂರು, ಮುನ್ನುಡಿ ಪು. ೧.

೯. ನಾಗಭೂಷಣ.ಡಿ.ಎಸ್. ನಟರಾಜ ಬೂದಾಳು; ಸವಿತ ನಾಗಭೂಷಣ, (ಸಂ) 'ಹಣತೆ' ಜಿ.ಎಸ್.ಎಸ್. ಅಭಿನಂದನ ಗ್ರಂಥ: ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೧. ಪು. ೩೧೦.

೧೦. ತೀ. ನಂ. ಶ್ರೀಕಂಠಯ್ಯ; 'ಭಾರತೀಯ ಕಾವ್ಯ ಮೀಮಾಂಸೆ', (ಸುಭಾಷಿತ ರತ್ನ ಬಂಡಾಗಾರ–ಕೃತಿ ಉಲ್ಲೇಖ.) ಪ್ರಸಾರಾಂಗ, ಮೈ.ವಿ.ವಿ ಪು. ೮೮.

೧೧. ಎಚ್.ಎಸ್. ವೆಂಕಟೇಶಮೂರ್ತಿ, ಡಾ. ಲೋಕೇಶ ಅಗಸನಕಟ್ಟೆ; 'ಜಿ.ಎಸ್.ಎಸ್. ಕಾವ್ಯಂತರಂಗ' ಸಾಹಿತ್ಯ ಸಿರಿ, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ಜಿಲ್ಲೆ, ೨೦೦೮, ಪು. ೨.

೧೨. ಜಿ.ಎಸ್. ಶಿವರುದ್ರಪ್ಪ;'ಚತುರಂಗ' (ಒಂದು ಅಸಮಗ್ರ) ಆತ್ಮಕಥನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಗುಡ್‌ಟಚ್ ಪ್ರಿಂಟರ್ ಮೈಸೂರು, ೨೦೦೮ ಪು. ೪೨.

□□□

೬. 'ಅಲ್ಲಿ–ಇಲ್ಲಿ'–ಪ್ರಾಯೋಗಿಕ ನೆಲೆ

– ಡಾ. ಎಸ್.ಡಿ. ಶಶಿಕಲಾ

ಕಾವ್ಯ ಒಂದು ಸಂಕೀರ್ಣ ಸಾಹಿತ್ಯ ಪ್ರಕಾರ. 'ಅಗೆದಷ್ಟು ಆಳ ತೆಗೆದಷ್ಟು ಬಾಳ' ಎಂಬಂತೆ ಅದರ ಅರ್ಥಸಾಧ್ಯತೆಗಳು ಹೆಚ್ಚು. ಸಂಕ್ಷಿಪ್ತತೆ, ಭಾವತೀವ್ರತೆ ಅದರ ಮೂಲಭೂತ ಗುಣ. ಅದರ ಪರಿಣಾಮ ವಿಸ್ಮಯಕಾರಿಯಾದುದು, ಅದ್ಭುತವಾದುದು, ಸೋಜಿಗದ್ದೂ ಕೂಡ. ಕಾವ್ಯದ ಆಸ್ವಾದನೆ, ಗ್ರಹಿಕೆ, ಓದುಗರ ಅನುಭವ, ಕಾವ್ಯದೊಳಗಿನ ಪರಕಾಯ ಪ್ರವೇಶ ಕಾವ್ಯದ ಆಳ, ಅಗಲಗಳನ್ನು ಹಿಗ್ಗಿಸುತ್ತವೆ. ಕಾವ್ಯಕ್ಕೆ ಪರಿಪೂರ್ಣತೆ ಲಭ್ಯವಾಗುವುದು ಅದರೆಲ್ಲ ಸಾಧ್ಯತೆಗಳೊಂದಿಗೆ ತನ್ಮಯವಾಗಿ ಓದಿ ಕೊಂಡಾಗ ಮಾತ್ರ. ಹೀಗಿರುವಾಗ ಭಾವದೊಂದಿಗೆ ವೈಚಾರಿಕತೆಯ ಸ್ಪರ್ಶವೂ ಕಾವ್ಯಕ್ಕೆ ದೊರೆತರೆ ಅದರ ಚಲನೆ ಸಮಾಜಮುಖಿಯಾಗುತ್ತದೆ. ಕವಿಯ ಕಲ್ಪನೆ, ಕನಸುಗಾರಿಕೆಗಿಂತ ವಾಸ್ತವದ ಅರಿವು, ಸಮಕಾಲೀನ ಸಂವೇದನೆ ಕಾವ್ಯಕ್ಕೆ ಇನ್ನಿಲ್ಲದ ಮಹತ್ತ್ವವನ್ನು ತಂದುಕೊಡುತ್ತದೆ. ಇಂಥದೊಂದು ಮಹತ್ತ್ವದ ಕವಿತೆ ಕುವೆಂಪು ಅವರ 'ಅಲ್ಲಿ–ಇಲ್ಲಿ'.

ಘಟಿಸಿದ ಸನ್ನಿವೇಶವೊಂದಕ್ಕೆ ಕವಿ ನೀಡಿದ ಪ್ರತಿಕ್ರಿಯೆಯೇ ಈ ಕವಿತೆಯ ವಸ್ತು. ದೃಶ್ಯಾತ್ಮಕವಾಗಿ ಕವಿತೆ ಹೆಣೆಯಲ್ಪಟ್ಟಿದೆ. ಕವನದ ಆರಂಭವೇ 'ಆಲಿಸಿದೆ' ಎಂದಿದೆ. ಈ ಪದ ಓದುಗನನ್ನು ತಕ್ಷಣಕ್ಕೆ ಹಲವು ಕುತೂಹಲದೆಡೆಗೆ ಜಿಗಿಯುವಂತೆ ಮಾಡುತ್ತದೆ. 'ಆಲಿಸಿದೆ' ಎಂಬ ಕವನದ ಸಾಲು ಯಾವುದನ್ನು? ಏನನ್ನು? ಹೇಗೆ? ಯಾಕೆ? ಆಲಿಸಿದ್ದು ಎಂಬ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಇಂಥ ಪ್ರಶ್ನೆಗಳಿಗೆ ಉತ್ತರಿಸುವ ಕೆಲಸವನ್ನು ಕವಿತೆ ಮಾಡುತ್ತದೆ.

ಆಲಿಸಿದ ಕ್ಷಣವನ್ನು ಕವಿತೆ ಹೀಗೆ ಹಿಡಿದಿಡುತ್ತದೆ:

"ಚತುರ್ದಶಿ;
ಶರನ್ಮೇಘ ಮಂದ ಶಶಿ;
ನಿಶ್ಶಬ್ದಮಿತ್ತು ನಿಶಿ"

ಕಾಲ ಮತ್ತು ಸಮಯದ ಒಟ್ಟು ಚೌಕಟ್ಟನ್ನು ಕವಿತೆ ನಿರ್ಮಿಸುತ್ತದೆ. ಅಂದು ಚತುರ್ದಶಿ ದಿನವಾಗಿದ್ದು ಅಂದಿನ ನಭೋಮಂಡಲವನ್ನು ಕವಿ ವರ್ಣಿಸುತ್ತಾರೆ. 'ಶರನ್ಮೇಘ ಮಂದಶಶಿ' ಶರತ್‌ಕಾಲದ ಮೇಘಗಳು ಆಗಸದಲ್ಲಿ ಸಂದಣಿಸಿವೆ. ಹೀಗಾಗಿ ಶಶಿ ಅರ್ಥಾತ್ ಚಂದ್ರ ಮಂದವಾಗಿ ಕಾಣುತ್ತಿದ್ದಾನೆ. ಸ್ಫುಟವಾದ ಬೆಳದಿಂಗಳು ಹರಡಿಲ್ಲ ಎಂಬುದು ಇಲ್ಲಿ ವೇದ್ಯ. ರಾತ್ರಿಯು ನಿಶ್ಯಬ್ದತೆಯಿಂದ ಕೂಡಿತ್ತು. ತಣ್ಣಗಿನ ರಾತ್ರಿ, ಸ್ತಬ್ಧ ನಭೋಮಂಡಲ, ಚಂದ್ರನ ಮಂದಕಾಂತಿಯ ಬೆಳಗು-ಇಂಥ ನೀರವ ರಾತ್ರಿಯಲ್ಲಿ ಕವಿ ಆಲಿಸಿದ್ದಾರೆ. ಈ ಬಗ್ಗೆ ಕವಿ ಅಡಿಟಿಪ್ಪಣಿಯಲ್ಲಿ ಹೀಗೆ ಹೇಳುತ್ತಾರೆ: '೩-೧೦-೬೦ರಲ್ಲಿ ನೆಹರು ಅವರು ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡಿದರು. ಭಾರತೀಯ ವೇಳೆ ರಾತ್ರಿ ೯-೩೦ಕ್ಕೆ ಅದನ್ನು ಪ್ರಸಾರ ಮಾಡಲಾಯಿತು, ಈ ಹಿನ್ನೆಲೆಯಲ್ಲಿ ಕವಿತೆಯ ಸಂದರ್ಭವನ್ನು ನೋಡುವುದು ಉಚಿತವೆನಿಸುತ್ತದೆ. ಭಾರತದ ರಾಜಕಾರಣದ ಪ್ರಮುಖ ಮೈಲಿಗಲ್ಲೊಂದನ್ನು ಕುರಿತು ಕುವೆಂಪು ಈ ಕವಿತೆಯ ಮೂಲಕ ಮಾತನಾಡುತ್ತಿದ್ದಾರೆಂಬುದು ಖಚಿತವಾಗುತ್ತದೆ. ಭಾರತದ ಪ್ರಧಾನಿ ನೆಹರೂ ಅವರು ವಿಶ್ವಸಂಸ್ಥೆಯಲ್ಲಿ ಮಾತನಾಡಿದ್ದು ಎಂಬುದು ಎಷ್ಟು ಮುಖ್ಯವೋ ಭಾರತದ ಒಟ್ಟು ನಿಲುವನ್ನು ವಿಶ್ವಸಂಸ್ಥೆಗೆ ತಲುಪಿಸುವಲ್ಲಿ ದೇಶದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ ವೈಖರಿಯನ್ನೂ ಕವಿತೆ ಮನಗಾಣಿಸಲು ಹೆಣಗುತ್ತದೆ. ಇಂಥದೊಂದು ಭಾಷಣವನ್ನು ಕವಿ ಕಿವಿಯ ಮೇಲೆ ಹಾಕಿಕೊಂಡದ್ದು ಎಲ್ಲಿ? ಎಂಬ ಪ್ರಶ್ನೆ ಎದುರಾಗುತ್ತದೆ. ಕವಿತೆ ಇದನ್ನು ಉತ್ತರಿಸುತ್ತದೆ:

> **"ಆಲಿಸಿದೆ!**
> **ಒಂಟಿಕೊಪ್ಪಲಿನ 'ಉದಯರವಿ'ಯಲಿ ಕುಳಿತು**
> **ನ್ಯೂಯಾರ್ಕಿನಲಿ ವಿಶ್ವಸಂಸ್ಥೆಯಲಿ**
> **ಚಪ್ಪಾಳೆ ಮೊಳಗ ಕೋಲಾಹಲದ ನಡುವೆ,**
> **ಭೋರ್ಗರೆಯುತ್ತಿದ್ದ ಭಾರತ ಶ್ರೀಕಂಠ ಭಾಷಣಕ್ಕೆ,**
> **ಕಣ್ಮುಚ್ಚಿ, ಕಿವಿದೆರೆದು**
> **ಹೆಮ್ಮೆಗಟ್ಲಾಂಟಿಕವೆ ಗೋಷ್ಪದ ಜಲಂ ತಾನಾಯ್ತೆನಲ್ಕೆ!**
> **ಆಲಿಸಿದೆ, ಆಲಿಸಿದೆ, ಆಲಿಸಿದೆ!"**

ಮೈಸೂರಿನ ಒಂಟಿಕೊಪ್ಪಲಿನ 'ಉದಯರವಿ'ಯ ತಮ್ಮ ಮನೆಯಲ್ಲಿ ಕುಳಿತು ಕೇಳಿದ ವಿಶ್ವಸಂಸ್ಥೆಯಲ್ಲಿನ ನೆಹರೂ ಅವರ ಭಾಷಣವನ್ನು ದಾಖಲಿಸುವ ಕವಿತೆ ಆಕಾಶವಾಣಿಯ ಮಹತ್ವ, ಪ್ರಯೋಜನ ಮತ್ತು ಆ ಮೂಲಕ ವೈಜ್ಞಾನಿಕ ಆವಿಷ್ಕಾರದ ಪ್ರತಿಫಲಗಳನ್ನು ಒಟ್ಟಿಗೇ ನಿವೇದಿಸುತ್ತದೆ. ಜಾಗತಿಕ ವಿದ್ಯಮಾನಗಳು ಜಗತ್ತಿನ ಮೂಲೆಮೂಲೆಗೂ ತಲುಪುವಂತೆ ಮಾಡುವ 'ಆಕಾಶವಾಣಿ'ಯ ಸೋಜಿಗವೂ ಇಲ್ಲಿದೆ.

5

"ಚಪ್ಪಾಳೆಮೊಳಗ ಕೋಲಾಹಲದ ನಡುವೆ
ಭೋರ್ಗರೆಯುತ್ತಿದ್ದ ಭಾರತ ಶ್ರೀಕಂಠ ಭಾಷಣಕ್ಕೆ"

ಎಂಬ ಸಾಲುಗಳು ನೆಹರೂ ಭಾಷಣಕ್ಕೆ ಮೆಚ್ಚುಗೆಯ ಕರತಾಡನ ಭಾರತದ ಸಿರಿಕಂಠವಾಗಿ ಹೊಮ್ಮಿದ ಭೋರ್ಗರೆಯುವಂತಿದ್ದ ನೆಹರೂ ಅವರ ಮಾತುಗಳು ವಿಶ್ವಸಂಸ್ಥೆಯಲ್ಲಿ ನೆರೆದಿದ್ದವರನ್ನು ಕೋಲಾಹಲಕ್ಕೀಡು ಮಾಡಿರುವ ಸಾಧ್ಯತೆಗಳನ್ನು ಕವಿ ನಿವೇದಿಸುತ್ತಾರೆ.

ಕವಿತೆಗೆ ನಾಯಕ ಪಾತ್ರ ಎಂಬುದಿಲ್ಲ. ಕವಿ ಕುವೆಂಪುವೇ ಕವಿತೆಯ ಕೇಂದ್ರ ಪಾತ್ರ. ಕವಿಯ ಅನುಭವವೇ ಕಾವ್ಯವಾಗಿದೆ ಇಲ್ಲಿ. ಸಂದರ್ಭವೊಂದರಿಂದ ಪ್ರೇರಿತರಾದ ಕವಿ ಅದನ್ನು ತಮ್ಮ ಅನುಭವದ ತೆಕ್ಕೆಗೆ ತೆಗೆದುಕೊಂಡು ಅದನ್ನು ಅರ್ಥೈಸುವ, ವ್ಯಾಖ್ಯಾನಿಸುವ, ವರ್ತಮಾನದ ಸಂದರ್ಭದಲ್ಲಿಟ್ಟು-ಕರ್ನಾಟಕದ ರಾಜಕಾರಣದ ಸಂದರ್ಭದಲ್ಲಿಟ್ಟು ತೂಗಿ ನೋಡುವ, ಹಲವು ವಿವರಗಳನ್ನು ಕವಿತೆ ಕಾಣಿಸುತ್ತದೆ. 'ಚಪ್ಪಾಳೆ ಮತ್ತು ಕೋಲಾಹಲ' ಪದಗಳು ಮೆಚ್ಚುಗೆಯನ್ನು ಅಲ್ಲಿ ನೆರೆದವರ ಆತಂಕ-ಗೊಂದಲಗಳ ಸಾಧ್ಯತೆಯನ್ನು ಏಕಕಾಲಕ್ಕೆ ಧ್ವನಿಸುತ್ತದೆ. ನೆಹರೂ ಅವರ ಕಂಠದಿಂದ ಹೊಮ್ಮಿದ ಭಾಷಣ ಕೇವಲ ಭಾಷಣವಲ್ಲ, ಅದು 'ಭಾರತ ಶ್ರೀಕಂಠ ಭಾಷಣ' ಎನ್ನುತ್ತಾರೆ. ಭಾರತದ ಒಟ್ಟು ನಿಲುವನ್ನು ಭಾರತದ ಕೊರಳಿನ ಕಂಠವಾಗಿ ನೆಹರೂ ಹೇಳುತ್ತಿದ್ದಾರೆ ಎಂಬುದೂ ಇಲ್ಲಿ ವಿದಿತ. ಭಾರತದ ಸಿರಿಕಂಠವೇ ನೆಹರೂ ರೂಪದಲ್ಲಿ ಮಾತನಾಡುತ್ತಿದೆಯೆಂದೂ ಇಲ್ಲಿ ಅರ್ಥೈಸಬಹುದಾಗಿದೆ. ಬೇಂದ್ರೆಯವರ 'ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳಾ ಹಾಡು' ಸಾಲು ನೆನಪಾಗುತ್ತದೆ. ಗಿಡಗಂಟೆಗಳ ಕೊರಳು ಎಂಬುದು ಭಾರತದ ಶ್ರೀಕಂಠ ಎಂಬುದರ ಪ್ರತಿರೂಪದಂತಿದೆ.

'ಕಣ್ಮುಚ್ಚಿ, ಕಿವಿದೆರೆದು' ಆಲಿಸಿದೆ ಎನ್ನುತ್ತಾರೆ. ಏಕಚಿತ್ತದಿಂದ, ಏಕಾಗ್ರಚಿತ್ತತೆಯಿಂದ ಮತ್ತು 'ಕಿವಿದೆರೆದು' ಎಂಬ ಶಬ್ದ ಕೇವಲ ಪಂಚೇಂದ್ರಿಯಗಳಲ್ಲಿ ಒಂದಾದ ಕಿವಿಯ ಮೂಲಕ ಕೇಳಿದೆ ಎನ್ನುವುದಕ್ಕಿಂತ ನೆಹರೂ ಅವರ ಭಾಷಣವನ್ನು ಪ್ರತಿಅಕ್ಷರ, ಪ್ರತಿಪದ, ಪ್ರತಿವಾಕ್ಯ, ಪ್ರತಿವಿಚಾರವನ್ನು ಗಮನವಿಟ್ಟು ಆಲಿಸಿದ್ದೆಂಬುದನ್ನು ಸೂಚಿಸುತ್ತದೆ. ಇದು ಭಾರತದ ರಾಜಕಾರಣವನ್ನು ಕುರಿತ ಕುವೆಂಪು ಅವರಿಗಿದ್ದ ತೀವ್ರ ಆಸಕ್ತಿ-ಕಾಳಜಿಯ ದ್ಯೋತಕವಾಗಿದೆ.

"ಹೆಮ್ಮೆಗಟ್ಲಾಂಟಕವೆ ಗೋಷ್ಪದ ಜಲಂ ತಾನಾಯ್ತೆನಲ್ಕೆ;
ಆಲಿಸಿದೆ, ಆಲಿಸಿದೆ, ಆಲಿಸಿದೆ!"

ಈ ಸಾಲುಗಳು 'ಆಲಿಸಿದ' ಪರಿಯನ್ನು ಉಪಮಾಲಂಕಾರದ ಮೂಲಕ ಅಭಿವ್ಯಕ್ತಿಸುತ್ತದೆ. ನೆಹರೂ ಭಾಷಣದ ಪರಿಣಾಮವಾಗಿ ಕುವೆಂಪು ಅವರಲ್ಲಿ ಹುಟ್ಟಿದ ಭಾರತದ ಬಗೆಗಿನ ಹೆಮ್ಮೆಯ ತೀವ್ರತೆ ಎಷ್ಟಿತ್ತೆಂದರೆ ಅಟ್ಲಾಂಟಿಕ ಸಾಗರವನ್ನು ಹಸುವಿನ ಹೆಜ್ಜೆಯ ಅಳತೆಯ ಜಲವಾಯಿತೋ ಎನ್ನುವಷ್ಟು ಅಂದರೆ, ಭಾರತದ ಎದುರು ಅಟ್ಲಾಂಟಿಕದ ಬೃಹತ್, ಹಸುವಿನ ಹೆಜ್ಜೆಯ ಪಾದದಷ್ಟು ಜಲನಿಧಿಯಂತೆ ಗೋಚರಿಸುತ್ತದೆ.

"ಸ್ವಾಮೀಜಿಯ ಭಾವಚಿತ್ರ ಇದಿರು ಗೋಡೆಯ ಮೇಲೆ
ತನ್ನಾ ಚಿಕಾಗೋ ಭಾಷಣದ ಭಂಗಿಯಲ್ಲಿ
ಮಂದಹಾಸದಲಿ ನಿಂತಿತ್ತು ತೂಗಿ
ಗಾಂಧೀಜಿಯ ವರ್ಣಚಿತ್ರ ತನ್ನ ಚೌಕಟ್ಟಿನಲ್ಲಿ
ಉದ್ಯಾನದೊಂದು ವೀಥಿಯಲ್ಲಿ
ಅರ್ಧ ಬತ್ತಲೆಯಲ್ಲಿ
ಪತ್ರಿಕೆಯ ಹಿಡಿಯುತೊಂದು ಕೈಯಲ್ಲಿ
ಏನೋ ಅವಸರವೆನ್ನುವಂತೆ
ಮಾರುಗಾಲು ಹಾಕಿಯೂ ನಡೆಗೆಟ್ಟು ನಿಂತು,
ಆಲಿಸಿತ್ತು:"

ಇಬ್ಬರು ಮಹತ್ತ್ವದ ಚಾರಿತ್ರಿಕ ವ್ಯಕ್ತಿಗಳ ಮೂಲಕ ನೆಹರೂ ಭಾಷಣದ ಮಹತ್ತ್ವಕ್ಕೆ ಕವಿತೆಯ ಈ ಮೇಲಿನ ಸಾಲುಗಳು ಅನುವು ಮಾಡಿಕೊಡುತ್ತದೆ. ಸ್ವಾಮಿ ವಿವೇಕಾನಂದ ಮತ್ತು ಗಾಂಧೀಜಿಯವರು ಭಾರತದ ಪ್ರಮುಖ ಚಿಂತಕರು. ಇಹಲೋಕ ತ್ಯಜಿಸಿದ ಈ ಇಬ್ಬರು ಮಹಾನ್ ವ್ಯಕ್ತಿಗಳ 'ಭಾವಚಿತ್ರ'ಗಳು ಅವರನ್ನು ಪ್ರತಿನಿಧಿಸುವಂತೆ ಇಲ್ಲಿ ಉಲ್ಲೇಖಗೊಂಡಿದೆ. ಅಮೆರಿಕಾದ ಚಿಕಾಗೋದಲ್ಲಿ ಭಾಷಣ ಮಾಡಿದ ಭಂಗಿ ಇದ್ದು ಮಂದಹಾಸವನ್ನೊಳಗೊಂಡಿತ್ತು ಎನ್ನಲಾಗಿದೆ. ವಿವೇಕಾನಂದರ ವ್ಯಕ್ತಿತ್ವದ ಅನಾವರಣವಿದೆ ಇಲ್ಲಿ. 'ಭಾಷಣದ ಭಂಗಿ' ಮತ್ತು 'ಮಂದಹಾಸ' ಈ ಎರಡೂ ಪದಗಳು ವಿವೇಕಾನಂದರ ಒಟ್ಟು ವ್ಯಕ್ತಿತ್ವವನ್ನು ಮತ್ತು ಅಮೆರಿಕಾದ ವಿಷಯದಲ್ಲಿ ಅವರಿಗಿದ್ದಿರಬಹುದಾದ ನೋವು, ವ್ಯಂಗ್ಯ ಇಲ್ಲಿ ಧ್ವನಿತವಾಗಿದೆ. 'ಮಂದಹಾಸದಲಿ ನಿಂತಿತ್ತು ತೂಗಿ' ಎಂಬ ಸಾಲು ನೆಹರೂ ಭಾಷಣಕ್ಕೆ ಪ್ರತಿಕ್ರಿಯೆ ನೀಡುವ ತೆರದಲ್ಲಿತ್ತು ಆ ಭಾವ ಎಂಬುದು. ಆ ಮಟ್ಟಿಗೆ ನೆಹರೂ ಭಾಷಣ ಕುತೂಹಲ ಕೆರಳಿಸಿತ್ತು. ಬದುಕಿದ್ದರೆ ಅವರೂ ಈ ಭಾಷಣವನ್ನು ಆಲಿಸುತ್ತಿದ್ದರು. ಕ್ರಿಯೆ-ನಿಷ್ಕ್ರಿಯೆ ಎರಡೂ ಇಲ್ಲಿ ಪ್ರತಿಕ್ರಿಯೆಯ ದ್ಯೋತಕವಾಗಿಬಿಡುತ್ತದೆ.

ಗಾಂಧೀಜಿಯವರನ್ನು ಕುರಿತಂತೆ ಕವಿತೆಯ ಸಾಲು ಒಂದು ದೃಶ್ಯವನ್ನೇ ಕಟ್ಟಿಕೊಡುತ್ತದೆ. ಉದ್ಯಾನದ ವೀಥಿಯಲ್ಲಿ ಅರೆಬೆತ್ತಲೆಯಲ್ಲಿ ನಡೆವ ಗಾಂಧಿ

ಪತ್ರಿಕೆಯೊಂದನ್ನು ಒಂದು ಕೈಯಲ್ಲಿ ಹಿಡಿದು ಏನೋ ಅವಸರದಲ್ಲಿ 'ಮಾರುಗಾಲು' ಹಾಕುತ್ತಾ ನಡೆವಾಗಲೂ ಆ ನಡೆಗೆಟ್ಟು ನಿಂತು ಆಲಿಸಿದರು ಎನ್ನಲಾಗಿದೆ. ಅವಸರದ ತುರ್ತಿನ ಎಲ್ಲ ಕೆಲಸಗಳಿಗಿಂತ ನೆಹರೂ ಭಾಷಣ ಆ ಸಂದರ್ಭಕ್ಕೆ ಮುಖ್ಯವಾಗಿತ್ತೆಂಬುದನ್ನು ಇದು ಸೂಚಿಸುತ್ತದೆ. 'ಮಾರುಗಾಲು' ಹಾಕಿ ನಡೆವ ಗಾಂಧಿಯನ್ನು ಹಿಡಿದು ನಿಲ್ಲಿಸುವ ಶಕ್ತಿ ಆ ಭಾಷಣಕ್ಕಿತ್ತು ಎಂಬುದನ್ನು ಸಂಕೇತಿಸುತ್ತದೆ.

ಇಬ್ಬರು ಧೀಮಂತ ವ್ಯಕ್ತಿಗಳ ವ್ಯಕ್ತಿತ್ವವನ್ನು ಅವರ ಭಾವಚಿತ್ರಗಳು ಪ್ರತಿನಿಧಿಸುತ್ತವೆ. ಇಂಥದೊಂದು ಸಂದರ್ಭವನ್ನು ಕವಿತೆ ಇಲ್ಲಿ ದಾಖಲಿಸುವ ಔಚಿತ್ಯದ ಪ್ರಶ್ನೆಯೂ ಎದುರಾಗುತ್ತದೆ. ತನ್ನೆಲ್ಲ ಕೆಲಸಗಳನ್ನು ಕೈಬಿಟ್ಟು ಆಲಿಸುವ ಸುದ್ದಿಯ ಮಹತ್ತ್ವವೇ ಇದಕ್ಕೆ ಬಹುಮುಖ್ಯ ಕಾರಣ ಎಂಬುದು ತಿಳಿಯುತ್ತದೆ. ಈ ಭಾವಚಿತ್ರಗಳ ಮೂಲಕ ಎರಡು ವ್ಯಕ್ತಿತ್ವಗಳನ್ನು ಕಟ್ಟಿಕೊಡುವ ಕವಿತೆ ಅವರನ್ನು ಹಿಡಿದು ನಿಲ್ಲಿಸಿದ ಸುದ್ದಿಯ ಮಹತ್ತ್ವದೆಡೆ ಓದುಗರನ್ನು ಸೆಳೆಯುವಲ್ಲಿ ಸಫಲವಾಗುತ್ತದೆ. ಆ ಸುದ್ದಿಯ ವಿವರ ಕವಿತೆಯ ಮುಂದಿನ ಸಾಲುಗಳಲ್ಲಿವೆ.

> **"ಸ್ವಾತಂತ್ರ್ಯ, ಐಕ್ಯತೆ, ಸರ್ವೋದಯ, ಸಮನ್ವಯ**
> **ಸತ್ಯ, ಅಹಿಂಸಾ, ಸ್ನೇಹ, ದಯಾ,**
> **ಚೀಣಾ, ಕಾಂಗೋ, ಮಂಗೋಲಿಯಾ,**
> **ಶಾಂತಿಯೊಂದರೊಳೆ ಇಕ್ಕೆಲಗಳಿಗೂ ಜಯ...**
> **ಇತ್ಯಾದಿ ಮೊಳಗಿತ್ತು."**

ಜೀವನ ಮೌಲ್ಯಗಳನ್ನು ಕವಿತೆ quote ಮಾಡುತ್ತದೆ.

೧) ಸ್ವಾತಂತ್ರ್ಯ
೨) ಐಕ್ಯತೆ
೩) ಸರ್ವೋದಯ
೪) ಸತ್ಯ
೫) ಅಹಿಂಸಾ
೬) ಸಮನ್ವಯ
೭) ಸ್ನೇಹ
೮) ದಯಾ

ಇವು ಸೌಹಾರ್ದಯುತ ಬಾಳ್ವೆಗೆ ಎಷ್ಟು ಮುಖ್ಯ ಎಂಬುದನ್ನು ಹೇಳುತ್ತಲೇ ನೆರೆ ರಾಷ್ಟ್ರಗಳು ಯುದ್ಧ ವಿಮುಖವಾಗಿ ಬದುಕಬೇಕಾದರೆ 'ಶಾಂತಿ' ಒಂದೇ ಮಂತ್ರ ಎಂಬುದನ್ನು ತಿಳಿಸುತ್ತದೆ. ನೆರೆರಾಷ್ಟ್ರಗಳೊಂದಿಗಿನ ಬಾಂಧವ್ಯ ಸಹ್ಯವಾಗಿರಬೇಕಾದ

ರೀತಿ, ಅಗತ್ಯ, ವಿಧಾನಗಳನ್ನು ನೆಹರೂ ಬೇರೆ ಬೇರೆ ಮಾತುಗಳಲ್ಲಿ ಕರೆ ನೀಡಿರುವುದನ್ನು ಇಲ್ಲಿ ನೋಡಬಹುದು. 'ಶಾಂತಿ' ಯೊಂದರಿಂದಲೇ ಸರ್ವರ ಉದಯವಿದೆ, ಏಳ್ಗೆಯಿದೆ ಎಂಬ ನೆಹರೂ ನಿಲವು ಭಾರತ ಸ್ವಾತಂತ್ರ್ಯ ಸಂಗ್ರಾಮದಿಂದ ಅನುಭವಿಸಿದ ನೋವು, ದುಃಖ, ಅಳಿವು ಮತ್ತೆ ಪುನರಾವರ್ತನೆಯಾಗದಂತೆ ನೋಡಿಕೊಳ್ಳಬೇಕೆನ್ನುವುದು ಈ ಜವಾಬ್ದಾರಿಯುತ ಮಾತುಗಳ ಹಿಂದಿದೆ. ಶಾಂತಿಯಿಂದ ಮನುಕುಲದ ಏಳಿಗೆ ಇದೆ ಎಂಬ ತಿಳಿವು ಇಲ್ಲಿಯದು.

ಕವಿತೆಯ ಮುಂದಿನ ಸಾಲುಗಳು ಕರ್ನಾಟಕದ ಸ್ಥಿತಿ–ಗತಿಯನ್ನು ವಿಡಂಬಿಸುತ್ತ ಅನಾವರಣಗೊಳಿಸುವಲ್ಲಿ ತೊಡಗುತ್ತದೆ.

"ಇಲ್ಲಿಯೋ? ನಾಚಿಕೆಗೇಡು!
ದಸರಾ ದರ್ಬಾರು,
ಜಂಬೂ ಸವಾರಿ!
ಜರಿಯಪೇಟ, ಕರಿಯಕೋಟು!
ಬಿಳಿಷರಾಯಿ, ಉತ್ತರೀಯ!
ಬಗ್ಗುಸೊಂಟ, ಡೊಗ್ಗು ಸಲಾಮು!
ಗುಲಾಮಿಗೂ ಚಿನ್ನದ ಮುಲಾಮು!
ಹಳೆಯ ಪಾಳೆಯಗಾರಿಕೆಗೆ ಹೊಸ ಪ್ರಹಸನ!
ಭಾರತದ ಪವಿತ್ರ ರಾಜ್ಯಾಂಗಕೂ ಅವಮಾನ!"

ದೇಶಕ್ಕೆ ಸ್ವಾತಂತ್ರ್ಯ ದೊರೆತು ಎಷ್ಟೋ ವರ್ಷಗಳ ನಂತರವೂ ಕರ್ನಾಟಕದ ಪರಿಸ್ಥಿತಿ ಬಹಳ ಭಿನ್ನವಾಗೇನೂ ಇಲ್ಲ ಎಂಬುದನ್ನು ಕವಿತೆ ಹೇಳುತ್ತದೆ. ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದ ನಂತರವೂ ಅರಸೊತ್ತಿಗೆಯ ಛಾಪನ್ನು ಇನ್ನೂ ಕಳೆದುಕೊಳ್ಳಲಾಗದ ಬಗ್ಗೆ ಕವಿತೆ ಖೇದವನ್ನು ವ್ಯಕ್ತಪಡಿಸುತ್ತದೆ. ವಿಶ್ವಸಂಸ್ಥೆಯಲ್ಲಿ ನೆಹರೂ ಶಾಂತಿ, ಸೌಹಾರ್ದತೆಯ ಭಾಷಣವನ್ನು ಮಾಡುವ ಹೊತ್ತಿಗೇ ಕರ್ನಾಟಕದಲ್ಲಿ 'ನಾಚಿಕೆಗೇಡಿನ' ಸಂಗತಿಗಳು ಜರುಗುತ್ತಿದ್ದವು ಎನ್ನುತ್ತಾ ಅರಸೊತ್ತಿಗೆಯ ದರ್ಬಾರನ್ನು ವಿಡಂಬಿಸುತ್ತಾರೆ. 'ದಸರಾ'ದ ನೆಪದಲ್ಲಿ ಜಂಬೂಸವಾರಿ, ಜರಿಪೇಟ, ಕರಿಕೋಟು, ಬಿಳಿಷರಾಯಿ, ಉತ್ತರೀಯ ಇತ್ಯಾದಿ ವೈಭವೋಪೇತ ಆಚರಣೆಗಳು ನಡೆಯುತ್ತಿದ್ದುದರ ಬಗೆಗಿನ ಅಸಹನೆ ಕೂಡ ಇಲ್ಲಿ ವ್ಯಕ್ತವಾಗಿದೆ.

'ಬಗ್ಗು ಸೊಂಟ, ಡೊಗ್ಗು ಸಲಾಮು!
ಗುಲಾಮಿಗೂ ಚಿನ್ನದ ಮುಲಾಮು!'

ಇದು ವರ್ಗ ತಾರತಮ್ಯವನ್ನು ಕುರಿತು ವಿಡಂಬಿಸುತ್ತದೆ. 'ಆಳುವವರು, ಆಳಿಸಿಕೊಳ್ಳುವವರನ್ನು' 'ಬಗ್ಗುಸೊಂಟ, ಡೊಗ್ಗು ಸಲಾಮು' ಸಾಲು

ಸೂಚಿಸುವುದಲ್ಲದೆ, ಈ ವರ್ಣನೆಯ ಅರ್ಥ ಜೀತಕ್ಕಿಂತ ತುಂಬ ಭಿನ್ನವಾಗಿ ಕಾಣುವುದಿಲ್ಲ. ಇದು ಒಂದು ರೀತಿಯಲ್ಲಿ 'ಹಳೆಯ ಪಾಳೆಯಗಾರಿಕೆಗೆ ಹೊಸ ಪ್ರಹಸನ'ವಾಗಿ ಕವಿಗೆ ಗೋಚರಿಸುತ್ತದೆ. ಈ ಬಗೆಯ ಅರಸರ ನಡಾವಳಿಗಳಿಂದ 'ಭಾರತದ ಪವಿತ್ರ ರಾಜ್ಯಾಂಗಕೂ ಅವಮಾನ!' ವಾಗುತ್ತದೆ. ಈ ಎಚ್ಚರವಿಲ್ಲದೇ ಹೋದ ಬಗ್ಗೆ ಕವಿತೆ ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತದೆ.

ಕುವೆಂಪು ಅವರ ಪ್ರಕಾರ ವೈಚಾರಿಕ ನಿಲವು ಇಲ್ಲಿದೆ. 'ಹಳೆಯ ಪಾಳೆಯಗಾರಿಕೆಗೆ ಹೊಸ ಪ್ರಹಸನ' ಎಂಬ ಸಾಲು ಪ್ರಜಾಪ್ರಭುತ್ವ ಬಂದ ಮೇಲೂ ತಮ್ಮದೇ ಪಾಳೆಯಗಾರಿಕೆಯನ್ನು ಮುಂದುವರೆಸುವ ಭ್ರಮೆಗೆ ಒಳಗಾದುದನ್ನು ಮತ್ತು ಅದಕ್ಕೆ ಪೂರಕವೆಂಬಂತೆ ಅದರ ಆಚರಣೆಗೆ ಒಡ್ಡಿಕೊಳ್ಳುವವರ ಬಗ್ಗೆ ಕವಿತೆ ಅಚ್ಚರಿ ವ್ಯಕ್ತಪಡಿಸುತ್ತದೆ. ಹೀಗೆ ಮಾಡುವುದರ ಮೂಲಕ ಸಂವಿಧಾನಕ್ಕೆ ಅಪಮಾನ ಮಾಡಿದಂತೆ ಎಂಬುದು ಕವಿಯ ಆಕ್ಷೇಪ. ಸಾಂವಿಧಾನಿಕ ಆಶಯಗಳಿಗೆ ವಿರೋಧವಾಗಿ ನಡೆದುಕೊಳ್ಳುವುದು ಸಂವಿಧಾನಕ್ಕೆ ತೋರುವ ಅಗೌರವವಾಗುತ್ತದೆ.

ಕುವೆಂಪು ಅರಸೊತ್ತಿಗೆಯ ವಿರೋಧಿಗಳಾಗಿದ್ದರು. ಅರಮನೆಗೆ ಬಂದು ಅರಮನೆ ವಂಶಸ್ಥರಿಗೆ ಪಾಠ ಹೇಳಲು ಆಹ್ವಾನ ಬಂದಾಗಲೂ ಕುವೆಂಪು ಅದನ್ನು ತಿರಸ್ಕರಿಸಿದ್ದರು. ಅರಸೊತ್ತಿಗೆಯ ಡಂಬಾಚಾರವನ್ನು ಕುವೆಂಪು ಅರವತ್ತರ ದಶಕದಲ್ಲಿಯೇ ವಿರೋಧಿಸಿದ್ದಾಗ್ಯೂ ಇಂದಿಗೂ ಈ ಆಚರಣೆ ಮುಂದುವರೆದಿದೆ. ದಸರಾವನ್ನು ನಾಡಹಬ್ಬವನ್ನಾಗಿ ಮಾಡಿ ಇದುವರೆವಿಗೂ ಆಳಿದ ಸರ್ಕಾರಗಳು ದಸರಾ ಆಚರಣೆಗೆ ಅಧಿಕೃತ ಮುದ್ರೆಯೊತ್ತಿರುವುದು ವಿಪರ್ಯಾಸವೇ ಆಗಿದೆ! ಪ್ರಜಾಪ್ರಭುತ್ವದ ಮೌಲ್ಯವನ್ನು ಉಳಿಸುವುದರ ಬಗ್ಗೆ ಚಿಂತಿಸದೆ ಬೌದ್ಧಿಕ ದಿವಾಳಿತನದಲ್ಲಿ ಕರ್ನಾಟಕ ನರಳುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಹೀಗೆ ಸಂದರ್ಭಗಳನ್ನು ತೌಲನಿಕವಾಗಿ ನೋಡುತ್ತಲೇ ಕುವೆಂಪು ತಮ್ಮ ಮನಸ್ಸಿನ ಮೇಲಾದ ಪರಿಣಾಮಗಳನ್ನು ತೆರೆದಿಡುತ್ತಾರೆ.

> **"ಆಲಿಸಿದೆ ಆಲಿಸಿದೆ ಆಲಿಸಿದೆ...**
> **ದೀರ್ಘ ಕರತಾಡನದಿ ಭಾಷಣವು ಕೊನೆಯಾಯ್ತು...**
> **ಸುಯ್ದು ನಿಂತ...**
> **ಏನೊ ನಿರಾಶೆಯ ಚಿಂತೆ..."**

ನೆಹರೂ ಅವರ ಭಾಷಣದ ಆಶಯಕ್ಕೆ ಸಿಕ್ಕ ಸಕಾರಾತ್ಮಕ ಪ್ರತಿಕ್ರಿಯೆಯನ್ನು ವಿಶ್ವಸಂಸ್ಥೆಯಲ್ಲಿ ವ್ಯಕ್ತವಾದ 'ದೀರ್ಘ ಕರತಾಡನ'ವು ಅಭಿವ್ಯಕ್ತಿಸುತ್ತದೆ. ಈ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಾಗಲೂ ಕುವೆಂಪು ಅವರ 'ಸುಯ್ದುನಿಂತೆ' ಎಂಬ ಉದ್ಗಾರ

ಅಸಹಾಯಕತೆಯ ನಿಟ್ಟುಸಿರನ್ನು ಸೂಚಿಸುತ್ತದೆ. ಒಬ್ಬ ಪ್ರಜೆಯಾಗಿ ಈ ವ್ಯವಸ್ಥೆಯ ಹುನ್ನಾರಗಳನ್ನು ಸರಿಪಡಿಸಲು ಸಾಧ್ಯವಾಗದ ಅಸಹಾಯಕತೆಯಾಗಿ ಅವರನ್ನು ಕಾಡಿದೆ. ಮುಂದಿನ 'ಏನೊ ನಿರಾಶೆಯ ಚಿಂತೆ' ಎಂಬ ಸಾಲು ಅದನ್ನು ದೃಢಪಡಿಸುತ್ತವೆ. ಈ ವ್ಯವಸ್ಥೆ ಯಥಾಸ್ಥಿತಿಯಲ್ಲಿ ಮುಂದುವರಿಯುತ್ತಾ ಹೊಸ ಬದಲಾವಣೆಗಳನ್ನು ತರುವಲ್ಲಿ ಸಫಲರಾಗುವುದಿಲ್ಲ ಎಂಬ ನಿರಾಶೆಯ ಚಿಂತೆ ಕವಿಯನ್ನು ಕಾಡುತ್ತದೆ. ಅದು ನಾಡಿನ ಭವಿಷ್ಯತ್ತನ್ನು ಕುರಿತ ನಿರಾಶೆಯ ಚಿಂತೆಯೂ ಆಗಿದೆ. ತಾನು ತನ್ನದು ಎಂಬ ಸ್ವಾರ್ಥ ಮೀರಿದ ನಾಡನ್ನು ಕುರಿತ ಚಿಂತೆ ಈ ಜಗದ ಕವಿ, ಯುಗದ ಕವಿಯನ್ನು ಕಾಡಿದೆ. ಇದು ಕವಿಯ ಸಾಮಾಜಿಕ ಜವಾಬ್ದಾರಿಯ ಸ್ವರೂಪವನ್ನು ಪಡೆಯುತ್ತದೆ. ಹೀಗಾಗಿ ಕವಿತೆಗೆ ಸಾಮಾಜಿಕ–ಸಾಂಸ್ಕೃತಿಕ ಆಯಾಮ ದೊರೆಯುತ್ತದೆ.

ನಮ್ಮ ದೇಶದ ಒಟ್ಟು ಉಪನ್ಯಾಸವನ್ನು ಕವನದ ಮುಂದಿನ ಸಾಲುಗಳು ಧ್ವನಿಸುತ್ತವೆ.

"ನಮ್ಮ ದೇಶಕೆ ಏನು ಬಂದರೇನಂತೆ?
ಕೊನೆಗೆ
ಕಮ್ಯುನಿಸಂ ಏ ಬಂದರೂ;
ಹಾಕುವೆವು ಅದಕ್ಕೂ ಮೂರು ನಾಮ!
ಅದರ ಹೆಗಲಿಗೂ ಬೀಳುವುದು ಜನಿವಾರ!
ಅದಕ್ಕೂ ಕಟ್ಟುವೆವು ಲಿಂಗ!
ಕ್ರಾಸು ತಗುಲಿಸಿದರು ಆಶ್ಚರ್ಯವಿಲ್ಲ!
ಇಲ್ಲಿ ಕಮ್ಯುನಿಸಂ ಊ ಕರಸ್ತಾನ!
ಕೊನೆಗೆ,
ಹಿಂದೂಸ್ಥಾನದಲ್ಲಿಯೂ ಅದು ಮುಸಲ್ಮಾನ!"

ಪ್ರಜಾಪ್ರಭುತ್ವ ಬಂದಾಗಲೂ ಏನೂ ಬದಲಾವಣೆಯಾಗಲಿಲ್ಲ. ಅಷ್ಟೇ ಅಲ್ಲ. ಇನ್ನಾವ ಸಿದ್ಧಾಂತದ ತಳಹದಿ ಮೇಲೆ ನಾಡನ್ನು ಕಟ್ಟಲು ಹೋದರೂ ವಿಶೇಷ ಬದಲಾವಣೆಗಳೇನೂ ಆಗುವುದಿಲ್ಲ. ಏಕೆಂದರೆ ಇಡೀ ದೇಶ ಹಲವು ಜಾತಿ–ಧರ್ಮಗಳ ತವರೂರು. ಅನೇಕತೆಯಲ್ಲಿ ಏಕತೆಯನ್ನು ಸಾಧಿಸಲು ಹೊರಟಿರುವುದು ನಿಜವೇ! ಆದರೆ ಎಲ್ಲ ಸೈದ್ಧಾಂತಿಕತೆಗೂ ಧರ್ಮದ ಲೇಪನ ಮಾಡುವುದು ಭಾರತೀಯರಿಗೆ ಅಂಟಿಕೊಂಡ ಜಾಡ್ಯ ಎನ್ನುವುದು ಕುವೆಂಪು ಅವರ ತಿಳಿವಳಿಕೆ. ಹಾಗಾಗಿ ಕಮ್ಯೂನಿಸಂ ಬಂದರೂ ಅದಕ್ಕೂ ವೈದಿಕಶಾಹಿಯ ತಾತ್ವಿಕತೆಯನ್ನು ಆರೋಪಿಸಲಾಗುತ್ತದೆ ಎಂಬುದನ್ನು 'ಕಮ್ಯೂನಿಸಂ ಏ ಬಂದರೂ; ಹಾಕುವೆವು ಅದಕ್ಕೂ ಮೂರು ನಾಮ! ಅದರ ಹೆಗಲಿಗೂ ಬೀಳುವುದು ಜನಿವಾರ!' ಸಾಲುಗಳು

ಧ್ವನಿಸುತ್ತವೆ. ವೈದಿಕಶಾಹಿ ವ್ಯವಸ್ಥೆಯು ಇಡೀ ಭಾರತೀಯ ಸಮುದಾಯದ ಮೇಲೆ ಬೀರಿರುವ ಪ್ರಭಾವವನ್ನು ಈ ಸಾಲುಗಳು ಸಾಬೀತುಪಡಿಸುತ್ತವೆ. 'ಅದಕ್ಕೂ ಕಟ್ಟುವೆವು ಲಿಂಗ!' ಎಂಬ ಸಾಲು ಕಮ್ಯೂನಿಸಂ ಅನ್ನು ವೀರಶೈವ ಧರ್ಮದ ದೀಕ್ಷೆಗೆ ಒಳಪಡಿಸುವ ಸಾಧ್ಯತೆಯಿದೆ ಎಂಬುದನ್ನು ಸೂಚಿಸುತ್ತದೆ. 'ಕ್ರಾಸು ತಗುಲಿಸಿದರು ಆಶ್ಚರ್ಯವಿಲ್ಲ! ಇಲ್ಲ ಕಮ್ಯೂನಿಸಂ ಊ ಕಿರಸ್ತಾನ!' ಎಂಬ ಸಾಲು ಕಮ್ಯೂನಿಸಂ ಎಂದರೆ ಅದು ಕ್ರಿಶ್ಚಿಯನ್ ಸಿದ್ಧಾಂತವೆಂದು ನಿರಾಕರಿಸಲಾಗುತ್ತದೆ. ಹಾಗೆಯೇ 'ಕೊನೆಗೆ, ಹಿಂದೂಸ್ಥಾನದಲ್ಲಿಯೂ ಅದು ಮುಸಲ್ಮಾನ!' ಈ ಸಾಲು ಕಮ್ಯೂನಿಸಂನ್ನು ಅಪವಿತ್ರ ಎಂದು ಪರಿಗಣಿಸಬಹುದಾದ ಸಾಧ್ಯತೆಯನ್ನು ಹೇಳುತ್ತವೆ.

ಕಮ್ಯೂನಿಸಂ ಸಿದ್ಧಾಂತಕ್ಕೆ ನಾವು ಜಾತಿ-ಧರ್ಮಗಳ ಲೇಪನ ಮಾಡುತ್ತ ಅಪವಿತ್ರಗೊಳಿಸುತ್ತಿದ್ದೇವೆ. ಹೀಗಾಗಿ ತಾತ್ವಿಕ ಬದ್ಧತೆಯಿಲ್ಲದೆ ಈ ನಾಡು ಬೌದ್ಧಿಕವಾಗಿ ಬಡವಾಗುತ್ತಿದೆ ಎಂಬ ನಿರಾಶೆಯ ಚಿಂತೆ ಕವಿಯನ್ನು ಕಾಡಿದೆ.

"ನಮ್ಮ ರಾಜ್ಯಾಂಗದಲ್ಲಿ ಮಾತ್ರ
ನಾವು ಧರಿಸಿಹುದು ಸೆಕ್ಯೂಲರ್ ಯಜ್ಞಸೂತ್ರ!"

ನಮ್ಮ ರಾಜ್ಯಾಂಗದಲ್ಲಿ ಮಾತ್ರ ಸೆಕ್ಯೂಲರ್ ತತ್ವವನ್ನು ಅಳವಡಿಸಿಕೊಂಡಿದ್ದೇವೆ. ಆದರೆ ಅದನ್ನು ಆಚರಣೆಗೆ ತರುವಲ್ಲಿ ವಿಫಲರಾಗಿದ್ದೇವೆ. ಜಾತ್ಯಾತೀತ ರಾಷ್ಟ್ರ ಎಂದು ಘೋಷಿಸಿಕೊಂಡೇ ಎಲ್ಲವನ್ನು ಜಾತಿ-ಧರ್ಮಗಳ ನೆಲೆಯಲ್ಲಿ ಅಳೆದು-ತೂಗುವ ಹೀನಸ್ಥಿತಿಗೆ ನಾವು ತಲುಪಿದ್ದೇವೆ ಎಂಬುದರ ವ್ಯಂಗ್ಯ ಈ ಸಾಲುಗಳಲ್ಲಿವೆ. ಯಾವುದೇ ಸಿದ್ಧಾಂತವನ್ನು ಅದರಲ್ಲಿನ ಒಳ್ಳೆಯದನ್ನು ಸ್ವೀಕರಿಸುವ ಗೋಜಿಗೆ ಹೋಗದ ಈ ತಟಸ್ಥ ನೀತಿ ನಾಡಿಗೆ ಅಪಾಯಕಾರಿಯಾದುದು ಎಂಬ ಸೂಚನೆಯನ್ನು ಈ ಕವಿತೆ ದಾಖಲಿಸುತ್ತದೆ.

ಕಮ್ಯೂನಿಸಂ ಸಿದ್ಧಾಂತ ಕುವೆಂಪು ಅವರ ಒಪ್ಪಿತ ನಿಲವೆಂಬುದನ್ನು ಈ ಕವಿತೆ ತಿಳಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯು ಸಮುದಾಯವನ್ನು ಶೋಷಿಸುವುದರ ವಿರುದ್ಧ ದನಿಯೆತ್ತುವ ಕವಿತೆ ವರ್ಗ ತಾರತಮ್ಯ ನೀತಿರಹಿತ ಸಮಾಜವನ್ನು ಬಯಸುತ್ತದೆ. ಹೀಗಾಗಿ ಕವಿತೆಗೆ ಸಮಾನತೆಯ ಆಶಯವಿದೆಯೆಂಬುದು ಖಚಿತವಾಗುತ್ತದೆ.

ಕಾವ್ಯಪ್ರಭಾವ : ಇಡೀ ಕವಿತೆಯನ್ನು ಓದಿದಾಗ ಸ್ವಾಮಿವಿವೇಕಾನಂದ ಮತ್ತು ಗಾಂಧೀಜಿಯವರ ತತ್ವ ಸಿದ್ಧಾಂತಗಳ ಪ್ರಭಾವವನ್ನು ಕಾಣಬಹುದು. ಅದು ನೆಹರೂ ಅವರ ಭಾಷಣದಲ್ಲಿ ಗೋಚರಿಸುತ್ತದೆ. ಈ ಇಬ್ಬರು ಚಾರಿತ್ರಿಕ ವ್ಯಕ್ತಿ-

ವ್ಯಕ್ತಿತ್ವಗಳಲ್ಲಿ, ಚಿಂತನೆಗಳಲ್ಲಿನ ಏಕತ್ರ ಗುಣವನ್ನು ಕವಿತೆ ಸಾಬೀತು ಪಡಿಸುತ್ತದೆ. ಅಂತೆಯೇ ಕಮ್ಯೂನಿಸಂನ ತತ್ವ ಪ್ರಣಾಳಿಕೆಯ ಪ್ರಭಾವ, ಆ ತತ್ವಗಳ ವೈಫಲ್ಯಗಳನ್ನು ಕವಿತೆ ದಾಖಲಿಸುತ್ತದೆ.

ಕಾವ್ಯದ ಅನುಸಂಧನ : ಕವಿತೆ ಎರಡು ಸನ್ನಿವೇಶಗಳನ್ನು ಮುಖಾಮುಖಿಯಾಗಿಸುವ ಮೂಲಕ ಭಿನ್ನ ನಿಲವುಗಳ ಅನುಸಂಧಾನವನ್ನು ಮಾಡುತ್ತದೆ. ಒಂದು, ಶಾಂತಿ ನೆಲೆಗೊಳಿಸುವ ಪ್ರಯತ್ನ. ಮತ್ತೊಂದು, ಅದನ್ನು ಭಂಗಗೊಳಿಸುವ ನಡಾವಳಿಗಳ ಯಥಾಸ್ಥಿತಿ. ಒಂದು, ಜಾಗತಿಕ ನೆಲೆಯಲ್ಲಿ ಭಾರತದ ಒಟ್ಟು ನಿಲವನ್ನು ಪ್ರತಿಪಾದಿಸಿದರೆ, ಮತ್ತೊಂದು, ಭಾರತದ ಆಂತರಿಕ ಸಂಘರ್ಷ, ಗೊಂದಲ, ಸ್ವಾರ್ಥದ ವಿಪರ್ಯಾಸದ ನಿಲವನ್ನು ವಿಶ್ಲೇಷಿಸುತ್ತದೆ. ಹೀಗೆ ಅನುಸಂಧಾನ ಮಾಡುತ್ತಲೇ ಸ್ವಾತಂತ್ರ್ಯ, ಐಕ್ಯತೆ, ಸರ್ವೋದಯ, ಸಮನ್ವಯ, ಸತ್ಯ, ಅಹಿಂಸೆ, ಸ್ನೇಹ, ದಯಾ ಈ ಮೊದಲಾದ ಜೀವನ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಜಾತಿ–ಮತ–ಧರ್ಮಗಳನ್ನು ಮೀರಿದ ವೈಚಾರಿಕ ಬದುಕಿನ ಪ್ರತಿಪಾದನೆ ಇಲ್ಲಿಯದು. 'ಗುಡಿ ಚರ್ಚು ಮಸಿಜೀದಿಗಳ ಬಿಟ್ಟು ಬನ್ನಿ' ಎಂದು ಕುವೆಂಪು ಕರೆಕೊಡುವುದೂ ಈ ನೆಲೆಯಲ್ಲಿಯೇ.

ಕಾವ್ಯದ ಕೇಂದ್ರ : ಕವಿಯ ಅನುಭವ ಕೇಂದ್ರಿತ ನೆಲೆಯನ್ನು ಕಾವ್ಯ ತನ್ನ ಕೇಂದ್ರವಾಗಿಸಿಕೊಂಡಿದೆ. ೩೦–೦೬–೧೯೬೦ರಲ್ಲಿ ವಿಶ್ವಸಂಸ್ಥೆಯಲ್ಲಿ ಭಾರತದ ಪ್ರಧಾನಿ ಮಾಡಿದ ಭಾಷಣವೇ ಕಾವ್ಯದ ವಸ್ತುವಾಗಿದೆ. ಕುವೆಂಪು ನಾಡಿನ ಪ್ರಜೆಯಾಗಿ, ಕವಿಯಾಗಿ ಆ ಭಾಷಣವನ್ನು ಗ್ರಹಿಸಿದ ಬಗೆ, ಅದು ಅವರ ಮೇಲೆ ಪರಿಣಾಮ ಬೀರಿದ ಬಗೆ, ಅವರು ಅದನ್ನು ವ್ಯಾಖ್ಯಾನಿಸುವ ಪರಿ, ವೈಚಾರಿಕ ಪಾತಳಿಯ ಮೇಲೆ ತಮ್ಮ ಅನುಭವವನ್ನು ತೆರೆದಿಡುವ ಬಗೆ ವಿಶಿಷ್ಟವಾಗಿದೆ.

ಕಾವ್ಯದ ಆಶಯ : ವೈಚಾರಿಕತೆಯ ಪ್ರತಿಪಾದನೆ ಈ ಕವಿತೆಯ ಮುಖ್ಯ ಆಶಯ. ಧರ್ಮ ನಿರಪೇಕ್ಷತೆಯನ್ನು ಕವಿತೆ ಆಶಿಸುತ್ತದೆ. ನಮ್ಮ ರಾಜ್ಯಾಂಗದ ಸೆಕ್ಯೂಲರ್ ತತ್ವವನ್ನು 'ಯಜ್ಞ'ಕ್ಕೆ ಆಹುತಿ ಕೊಡುವಂತಾಗಬಾರದು. ಜಾತ್ಯಾತೀತ ತತ್ವವನ್ನು ಗೌರವಿಸುವ ಹಾಗೆ ನಾವು ಬದುಕಬೇಕು ಎಂಬುದು ಇಲ್ಲಿನ ಆಶಯ. ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದ ಮೇಲೂ ಅರಸೊತ್ತಿಗೆಯ ಪಾಳೆಯಗಾರಿಕೆಯನ್ನು ಮುಂದುವರೆಸುವ ಹುನ್ನಾರಗಳು ನಿಲ್ಲಬೇಕು ಎಂದು ಕವಿತೆ ಒತ್ತಾಯಿಸುತ್ತದೆ.

ಕಾವ್ಯದ ಪ್ರಸ್ತುತತೆ : ಸ್ವಾತಂತ್ರ್ಯ, ಐಕ್ಯತೆ, ಸರ್ವೋದಯ, ಸಮನ್ವಯ, ಸತ್ಯ, ಅಹಿಂಸೆ, ಸ್ನೇಹ, ದಯೆ ಇವೆಲ್ಲವೂ ನೆರೆ ರಾಷ್ಟ್ರಗಳೊಂದಿಗೆ ಶಾಂತಿಯುತವಾಗಿ ವ್ಯವಹರಿಸಲು ಅಗತ್ಯವೆಂಬುದು ಪ್ರಸ್ತುತ ವಿಚಾರಗಳೇ ಆಗಿವೆ. ಭಾಷೆ, ಗಡಿ,

ಭಯೋತ್ಪಾದನೆಯಂಥ ಭೀಕರ ಸಮಸ್ಯೆಗಳೊಂದಿಗೆ ಬದುಕುತ್ತಿರುವ ಭಾರತಕ್ಕೆ ಶಾಂತಿಮಂತ್ರವೊಂದೇ ಭವಿಷ್ಯದ ರಹದಾರಿಯಾಗಿ ಕಾಣಬರುತ್ತದೆ. ಮೂರನೇ ಮಹಾಯುದ್ಧದಿಂದ ಭಾರತವೂ ಸೇರಿದಂತೆ ಇಡೀ ಜಾಗತಿಕ ವಾತಾವರಣವನ್ನು ಸುಸ್ಥಿರಗೊಳಿಸಲು ಶಾಂತಿಮಂತ್ರದ ದೀಕ್ಷೆಯೇ ಅತ್ಯುತ್ತಮ ಮಾರ್ಗವಾಗಿದೆ. ಜಾತಿ–ಧರ್ಮಗಳನ್ನು ಮೀರಿದ ವೈಚಾರಿಕ ಪ್ರಜ್ಞೆ ಇಡೀ ಭಾರತ ಸಮುದಾಯವನ್ನು ಭವಿಷ್ಯದತ್ತ ಕೊಂಡೊಯ್ಯಬಲ್ಲ ಅಸ್ತ್ರವೆಂಬುದನ್ನು ಈ ಕವಿತೆ ನಿವೇದಿಸುತ್ತದೆ.

ಕಾವ್ಯದ ಮಹತ್ವ : ನವೋದಯದ ಕನಸುಗಾರಿಕೆ, ನವ್ಯದ ವ್ಯಕ್ತಿವಿಶಿಷ್ಟತೆ, ದಲಿತ ಬಂಡಾಯದ ಆಕ್ರೋಶ ಆವೇಶದ ಅಭಿವ್ಯಕ್ತಿಗಳ ನಡುವೆಯೂ 'ಅಲ್ಲಿ–ಇಲ್ಲಿ' ಕವಿತೆ ತನ್ನದೇ ಆದ ಮಹತ್ತ್ವವನ್ನು ಪಡೆದಿದೆ. ಭಾರತದ ರಾಜಕಾರಣದ ಆಂತರಿಕ ಇಂಗಿತವನ್ನು ಅಭಿವ್ಯಕ್ತಪಡಿಸುತ್ತಲೇ ಭಾರತದ ಕಸಿವಿಸಿಯನ್ನೂ ಹೊರ ಹೊಮ್ಮಿಸುತ್ತದೆ. ಆ ಮೂಲಕ ವೈಚಾರಿಕತೆಯೆಡೆಗೆ ಕವಿತೆ ,ತುಡಿಯುತ್ತದೆ. ಇದರೊಂದಿಗೇ ಕುವೆಂಪು ಅವರ ಸರ್ವೋದಯದ ಮಂತ್ರವು ವಿಶ್ವಮಾನವ ಪ್ರಜ್ಞೆಯೆಡೆಗೆ ಚಲಿಸುತ್ತದೆ. ಇದು ಕುವೆಂಪು ಅವರ ಮತ್ತು ಈ ಕವಿತೆಯ ಒಟ್ಟು ಮಹತ್ವವೂ ಆಗಿಬಿಡುತ್ತದೆ.

ಕಾವ್ಯದ ಭಾಷೆ ಮತ್ತು ಶೈಲಿ : ಕವಿಯೇ ಕಾವ್ಯದ ಪಾತ್ರವಾಗಿ ಕವಿತೆಯ ಉದ್ದಕ್ಕೂ ಮಾತನಾಡುತ್ತಾ ಹೋಗುವ ಶೈಲಿ ಇದೆ. ಹೀಗಾಗಿ 'ಆಲಿಸಿದೆ' ಎಂಬ ಪದವೇ ಉತ್ತಮ ಪುರುಷ ಸರ್ವನಾಮವನ್ನು ಸೂಚಿಸುತ್ತದೆ. ಅದೇ ರೀತಿ ಕವಿ ತಮಗಾದ ಅನುಭವದ ನೆಲೆಯನ್ನು ಕವಿತೆಯುದ್ದಕ್ಕೂ ಶಾಬ್ದಿಕ ಚಿತ್ರದ ಮೂಲಕ ಕಟ್ಟಿಕೊಡುತ್ತಾರೆ. ನಿದರ್ಶನಕ್ಕೆ ಕವಿತೆಯ ಈ ಸಾಲುಗಳನ್ನು ನೋಡಬಹುದು.

> **"ಆಲಿಸಿದೆ;**
> **ಒಂಟಿಕೊಪ್ಪಲಿನ 'ಉದಯರವಿ' ಯಲ್ಲಿ ಕುಳಿತು**
> **ನ್ಯೂಯಾರ್ಕಿನಲಿ ವಿಶ್ವಸಂಸ್ಥೆಯಲಿ**
> **ಚಪ್ಪಾಳೆ ಮೊಳಗ ಕೋಲಾಹಲದ ನಡುವೆ**
> ....
> **ಕಣ್ಮುಚ್ಚಿ ಕಿವಿದೆರೆದು**
> ....
> **ಆಲಿಸಿದೆ, ಆಲಿಸಿದೆ, ಆಲಿಸಿದೆ!"**

ಸನ್ನಿವೇಶವೊಂದಕ್ಕೆ ತೋರಬಹುದಾದ ಪ್ರತಿಕ್ರಿಯೆಗಳನ್ನು ಸ್ವಾಮಿ ವಿವೇಕಾನಂದ ಮತ್ತು ಗಾಂಧೀಜಿಯವರ ಸ್ಥಾನದಲ್ಲಿ ನಿಂತು ಕವಿ ದೃಶ್ಯಾತ್ಮಕವಾಗಿ ಕಟ್ಟಿಕೊಡುತ್ತಾರೆ:

"ಗಾಂಧೀಜಿಯ ವರ್ಣಚಿತ್ರ, ತನ್ನ ಚೌಕಟ್ಟಿನಲ್ಲಿ
ಉದ್ಯಾನದೊಂದು ವೀಥಿಯಲ್ಲಿ
ಅರ್ಧ ಬತ್ತಲೆಯಲ್ಲಿ
ಪತ್ರಿಕೆಯ ಹಿಡಿಯಿತೊಂದು ಕೈಯಲ್ಲಿ
ಏನೊ ಅವಸರವೆನ್ನುವಂತೆ
ಮಾರುಗಾಲು ಹಾಕಿಯೂ ನಡೆಗೆಟ್ಟು ನಿಂತು
ಆಲಿಸಿತ್ತು;"

ಪ್ರಕೃತಿ ವರ್ಣನೆ : ಪ್ರಕೃತಿಯ ವರ್ಣನೆ ಕವಿತೆಗೆ ರಮ್ಯತೆಯನ್ನು ತಂದುಕೊಟ್ಟಿದೆ. ಸಂದರ್ಭವೊಂದನ್ನು ಸಂಕೇತಿಸುವ ಪ್ರಕೃತಿಯ ವರ್ಣನೆ ಅಭೂತಪೂರ್ವವಾದುದು. ಕವಿಯ ಚಿಂತನೆಗೆ ಪ್ರಕೃತಿಯು ಉದ್ದೀಪನ ಕಾರಣವಾಗುವ ಬಗೆ ವಿಶಿಷ್ಟವಾದುದು.

"ಚತುರ್ದಶಿ
ಶರನ್ಮೇಘ ಮಂದ ಶಶಿ;
ನಿಶ್ಯಬ್ದಮಿತ್ತು ನಿಶಿ"

ಪ್ರಕೃತಿಯ ನಿಶ್ಯಬ್ದ ವಾತಾವರಣದಲ್ಲಿ ಕವಿ ತಮ್ಮ 'ಉದಯರವಿ' ಯಲ್ಲಿ ಕುಳಿತು ಬಿತ್ತರ ಸಂಗತಿಗಳನ್ನು ಆಲಿಸುತ್ತಾರೆ. ಹೀಗೆ ಆಲಿಸಿದ ಸಂಗತಿಗಳನ್ನು ಕುರಿತು ಆಲೋಚನೆಗೆ ತೊಡಗುವಲ್ಲಿ ಪ್ರಕೃತಿಯ ಪಾತ್ರ ಮಹತ್ವದ್ದು ಮತ್ತು ಪೂರಕವಾದುದು.

ವ್ಯಂಗ್ಯದ ನೆಲೆ : ಪ್ರಜಾಪ್ರಭುತ್ವ ನೆಲೆಯೂರಿದ ಮೇಲೂ ಕರ್ನಾಟಕದಲ್ಲಿ ನಡೆದ ಅರಸೊತ್ತಿಗೆಯ ಸಂಕೇತವಾದ ದಸರಾ ಆಚರಣೆಯನ್ನು ಹರಿತವಾದ ವ್ಯಂಗ್ಯದ ನೆಲೆಯಲ್ಲಿ ಕವನ ದಾಖಲಿಸುತ್ತದೆ.

"ಇಲ್ಲಿಯೋ? ನಾಚಿಕೆಗೇಡು!
ದಸರಾ ದರ್ಬಾರು,
ಜಂಬೂ ಸವಾರಿ!
ಜರಿಯಪೇಟ, ಕರಿಯಕೋಟು!
ಬಿಳಿಷರಾಯಿ, ಉತ್ತರೀಯ!
ಬಗ್ಗುಸೊಂಟ, ಡೊಗ್ಗುಸಲಾಮು
ಗುಲಾಮಿಗು ಚಿನ್ನದ ಮುಲಾಮು!
ಹಳೆಯ ಪಾಳೆಯಗಾರಿಕೆಗೆ ಹೊಸ ಪ್ರಹಸನ!
ಭಾರತದ ಪವಿತ್ರ ರಾಜ್ಯಾಂಗಕೂ ಅವಮಾನ!"


ವ್ಯಂಗ್ಯದ ಜೊತೆಗೆ ಅಚ್ಚರಿಯನ್ನು ಕವಿತೆ ವ್ಯಕ್ತಪಡಿಸುತ್ತದೆ. ಜಾತ್ಯಾತೀತತೆಯ ಸಿದ್ಧಾಂತವನ್ನು ಬಲಿಕೊಡುತ್ತಿದ್ದೇವೆ ಎಂಬುದನ್ನು 'ನಾವು ಧರಿಸಿಹುದು ಸೆಕ್ಯೂಲರ್ ಯಜ್ಞ ಸೂತ್ರ!" ಎಂಬ ಸಾಲು ಧ್ವನಿಸುತ್ತದೆ.

ಶೀರ್ಷಿಕೆಯ ಔಚಿತ್ಯ : 'ಅಲ್ಲಿ–ಇಲ್ಲಿ' ಎಂಬ ಕವಿತೆಯ ಶೀರ್ಷಿಕೆಯೇ ದೂರದರ್ಶಕ ಮತ್ತು ಸಮೀಪ ದರ್ಶಕ ಎಂಬ ಎರಡು ಬಗೆಯ ದರ್ಶಕ ಸರ್ವನಾಮಗಳನ್ನು ಹೊಂದಿದೆ. ಈ ಎರಡು ಪದಗಳು ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳನ್ನು ಸಂಕೇತಿಸುತ್ತದೆ. ಈ ದೇಶಗಳು ಎರಡು ಭಿನ್ನ ಸಂಸ್ಕೃತಿ–ವಿಚಾರಧಾರೆಗಳನ್ನು ಪ್ರತಿಬಿಂಬಿಸುತ್ತದೆ. 'ಅಲ್ಲಿ' ಜರುಗುವ ಸಂದರ್ಭಗಳನ್ನು 'ಇಲ್ಲಿ'ಯ ಸಂದರ್ಭಗಳೊಂದಿಗೆ ತೌಲನಿಕವಾಗಿ ವಿವೇಚಿಸುವುದು ಕವನದ ಮೂಲಭೂತ ಉದ್ದೇಶ ಎಂಬುದು ಶೀರ್ಷಿಕೆಯಲ್ಲಿ ವ್ಯಕ್ತವಾಗಿದೆ. ಪಾಶ್ಚಾತ್ಯ ನೆಲದಲ್ಲಿ ನಿಂತು ತಾತ್ವಿಕ ಬದ್ಧತೆಯನ್ನು ಹೊರಹೊಮ್ಮಿಸುವಾಗಲೇ ಪೌರ್ವಾತ್ಯದಲ್ಲಿರುವ ಭಾರತದ ಕರ್ನಾಟಕದಲ್ಲಿನ ತಾತ್ವಿಕ ವಿರೋಧೀನೆಲೆಯನ್ನು ಕವಿತೆ ಅನಾವರಣಗೊಳಿಸುತ್ತದೆ. ಹೀಗಾಗಿ ಕವಿತೆಯ ಶೀರ್ಷಿಕೆಯೇ ಎರಡು ಸಂಗತಿಗಳ ತೌಲನಿಕ ಅಧ್ಯಯನದ ರೂಪುರೇಷೆಗಳ ಸಂಕೇತವಾಗಿದೆ.

ಒಟ್ಟಿನಲ್ಲಿ ಕುವೆಂಪು ಅವರ 'ಅಲ್ಲಿ–ಇಲ್ಲಿ' ಕವಿತೆ ಕುವೆಂಪು ಅವರ ಸಾಮಾಜಿಕ ಕಳಕಳಿ, ವಿಶ್ವಭ್ರಾತೃತ್ವಗಳನ್ನು ತಿಳಿಸುವಲ್ಲಿ ದುಡಿಯುತ್ತದೆ. ಕುವೆಂಪು ಅವರ ತಾತ್ವಿಕ ನೆಲೆಗಟ್ಟನ್ನು ವೈಚಾರಿಕತೆಯನ್ನು ಜಾತ್ಯಾತೀತ ನಿಲುವನ್ನು ಈ ಕವಿತೆ ತನ್ನೆಲ್ಲ ಸಾಧ್ಯತೆಗಳೊಂದಿಗೆ ಅನಾವರಣಗೊಳಿಸಿದೆ.

□□□

ಕ.ಸಂ. ೨೪೯೦–ಎಂಯುಪಿಪಿ–೩೦೦ ಪ್ರತಿಗಳು – ೨೧–೧೧–೨೦೧೫



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು